ಬಳ್ಳಾರಿ ಜಿಲ್ಲೆಯ ರಂಗಗೀತೆಗಳು : ಒಂದು ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕರು

ಹರಿಜನ ಮಲ್ಲಯ್ಯ

ಮಾರ್ಗದರ್ಶಕರು

ಡಾ.ರಹಮತ್ ತರೀಕೆರೆ

ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೮-೦೯

407

"ಬಳ್ಳಾರಿ ಜಿಲ್ಲೆಯ ರಂಗಗೀತೆಗಳು : ಒಂದು ಅಧ್ಯಯನ"

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕರು
ಹರಿಜನ ಮಲ್ಲಯ್ಯ

ಮಾರ್ಗದರ್ಶಕರು
ಡಾ.ರಹಮತ್ ತರೀಕೆರೆ
ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೮-೦೯

ಪ್ರಮಾಣ ಪತ್ರ

"ಬಳ್ಳಾರಿ ಜಿಲ್ಲೆಯ ರಂಗಗೀತೆಗಳು : ಒಂದು ಅಧ್ಯಯನ" ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಡಾ.ರಹಮತ್ ತರೀಕೆರೆ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಎಂ.ಫಿಲ್, ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣಿಕರಿಸುತ್ತೇನೆ.

ದಿನಾಂಕ : 08.10.2009
ಸ್ಥಳ : ವಿದ್ಯಾರಣ್ಯ

ಹರಿಜನ ಮಲ್ಲಯ್ಯ
ಸಂಶೋಧನಾ ವಿದ್ಯಾರ್ಥಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದೃಢೀಕರಣ ಪತ್ರ

"ಬಳ್ಳಾರಿ ಜಿಲ್ಲೆಯ ರಂಗಗೀತೆಗಳು : ಒಂದು ಅಧ್ಯಯನ" ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಎಂ.ಫಿಲ್, ಪದವಿಗಾಗಿ ಹರಿಜನ ಮಲ್ಲಯ್ಯ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 08.10.2009
ಸ್ಥಳ : ವಿದ್ಯಾರಣ್ಯ

ಡಾ. ರಹಮತ್ ತರೀಕೆರೆ
ಪ್ರಾಧ್ಯಾಪಕರು / ಮಾರ್ಗದರ್ಶಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಿವಿಡಿ

ಅಧ್ಯಾಯ - ಒಂದು

ರಂಗಗೀತೆಗಳ ಅಧ್ಯಯನದ ಉದ್ದೇಶ ಮತ್ತು ಮಹತ್ವ, ವ್ಯಾಪ್ತಿ ಹಾಗೂ ಅಧ್ಯಯನ ವಿಧಾನ

ಅಧ್ಯಾಯ - ಒಂದು

ರಂಗಗೀತೆಗಳ ಅಧ್ಯಯನದ ಉದ್ದೇಶ ಮತ್ತು ಮಹತ್ವ, ವ್ಯಾಪ್ತಿ ಹಾಗೂ ಅಧ್ಯಯನ ವಿಧಾನ

೧.೧.ಪ್ರಸ್ತಾವನೆ

ರಂಗಭೂಮಿಯು ಒಂದು ನಾಡಿನ ಸಾಂಸ್ಕೃತಿಕ ಬದುಕಿನ ಅಂಗಗಳಲ್ಲಿ ಒಂದು. ಇದು ಸಂಗೀತ, ಸಾಹಿತ್ಯ, ಕಲೆ, ತಂತ್ರ, ರಂಗಸಜ್ಜಿಕೆ ಇತ್ಯಾದಿ ಲಲಿತಕಲೆಗಳನ್ನೆಲ್ಲ ಮೈಗೂಡಿಸಿಕೊಂಡು ವಿಭಿನ್ನ ಅಭಿರುಚಿಯ ಜನರನ್ನು ಏಕಕಾಲಕ್ಕೆ ತಣಿಸುವ ವಿಶೇಷತೆಯನ್ನು ಹೊಂದಿದ ಸಮಷ್ಟಿ ಕಲೆಯಾಗಿದೆ. ಈ ರಂಗಭೂಮಿಯು ಇತರ ಎಲ್ಲಾ ಕಲೆಗಳ ಹಾಗೆ ಮನುಷ್ಯರ ಒಳಗೆ ಇರುವ ಸೃಜನಶೀಲ ಚೈತನ್ಯವನ್ನು ಅಭಿವ್ಯಕ್ತಿ ಮಾಡಲು ಒದಗುವ ಅವಕಾಶವಾಗಿದೆ. ತಮ್ಮ ರಾಗ-ಭಾವಗಳನ್ನು ಹೊರಹಾಕುವ ಅಪೂರ್ವ ಸನ್ನಿವೇಶವೂ ಆಗಿದೆ.

ರಂಗಭೂಮಿ ಉತ್ತರ ಕರ್ನಾಟಕದಲ್ಲಿ ಪಾರ್ಸಿ ಮತ್ತು ಮರಾಠಿ ರಂಗಭೂಮಿಯ ಪ್ರಭಾವದಿಂದ ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಬಳಕೆಗೆ, ಬಂದಿತು. ಹಾಗೆಯೇ ಬಳ್ಳಾರಿ ಜಿಲ್ಲೆಯಲ್ಲಿಯೂ ರಂಗಭೂಮಿಯು ಹೆಚ್ಚು ಹೆಚ್ಚು ಬಳಕೆಗೆ ಪ್ರಚಾರಕ್ಕೆ ಬಂದು ಶಿಖರದ ಉತ್ತುಂಗದಲ್ಲಿ ಬೆಳೆದುಬಂದಿದೆ. ಬಳ್ಳಾರಿ ಜಿಲ್ಲೆ ಬಿರುಬಿಸಿಲಿಗೆ ಮಾತ್ರವಲ್ಲ. ಕಲೆಗೆ, ಕಲಾವಿದರಿಗೆ ಬರವಿಲ್ಲವೆಂಬ ಮಾತಿನಲ್ಲಿ ಸತ್ಯವಿಲ್ಲದಿಲ್ಲ, ಪೌರಾಣಿಕ ಹವ್ಯಾಸಿ ರಂಗಭೂಮಿಗೂ ಪ್ರಸಿದ್ಧಿಯಾಗಿ 'ಕುರುಕ್ಷೇತ್ರ', 'ಶ್ರೀಕೃಷ್ಣತುಲಾಭಾರ', 'ರಕ್ತರಾತ್ರಿ', 'ಪ್ರಮೀಳಾ ದರ್ಬಾರು', 'ಹೇಮರೆಡ್ಡಿ ಮಲ್ಲಮ್ಮ', 'ಉಷಾಸ್ವಯಂವರ', 'ರಾಮಾಯಣ', 'ಅಕ್ಷಯಾಂಬರ', 'ವೀರಅಭಿಮನ್ಯು', 'ಗಿರಿಜಾಕಲ್ಯಾಣ' - ಹೀಗೆ ಹಲವು ಪೌರಾಣಿಕ ಹವ್ಯಾಸಿ ರಂಗಭೂಮಿಯ ನಾಟಕಗಳು ಇಲ್ಲಿ ಪ್ರಸಿದ್ಧಿ ಪಡೆದಿವೆ. ಈ ನಾಟಕಗಳ ರಂಗಗೀತೆಗಳನ್ನು ಸಂಗ್ರಹಿಸುವುದು ಅಧ್ಯಯನದ ದೃಷ್ಟಿಯಿಂದ ಬಹುಮುಖ್ಯ ಸಂಗತಿಯಾಗಿದೆ.

‘ರಂಗಗೀತೆ’ ಎಂದರೆ ಕೇವಲ ಓದಿ ಅನುಭವಿಸಬಹುದಾದ ಕವನವಲ್ಲ. ರಂಗಗೀತೆಗೆ ಉತ್ತಮವಾದ ರಾಗ ಸಂಯೋಜನೆ ಇರಬೇಕು. ಹಾಗೆ ಸುಭದ್ರಮ್ಮ ಮನ್ಸೂರು, ಕೆ.ನಾಗರತ್ನಮ್ಮರಂತಹ ಉತ್ತಮ ಗಾಯಕಿಯರ ಕಂಠ ಧ್ವನಿಯನ್ನು ರಂಗಗೀತೆಗಳು ಆಪೇಕ್ಷಿಸುತ್ತವೆ. ಒಳ್ಳೆಯ ಗಾಯಕರ ಕಂಠದಿಂದ ರಂಗಗೀತೆ ಹಾಡಾಗಿ ಹೊರ ಹೊಮ್ಮಿದಾಗ ಸಿಗುವ ಆನಂದವೇ ಬೇರೆ. ಹೀಗೆ ಈ ಗಾಯಕಿಯರು ಅದ್ಭುತವಾಗಿ ಹಾಡುವಾಗ ಯಕ್ಷಲೋಕವೇ ರಚನೆಯಾಗುತ್ತದೆ.

ಭಾರತೀಯ ರಂಗಗೀತಾ ಪರಂಪರೆಗೆ ಒಂದು ಇತಿಹಾಸವೇ ಇದೆ. ಸಂಸ್ಕೃತ ನಾಟಕಗಳಲ್ಲೆಲ್ಲಾ ರಂಗಗೀತೆಗಳ ಮಾದರಿಯ ಶ್ಲೋಕಗಳನ್ನು ಕಾಣಬಹುದು. ತರುವಾಯ ಮರಾಠಾ ರಂಗಪರಂಪರೆಯನ್ನು ಗಮನಿಸಬಹುದು. ಇಂದಿಗೂ ಪ್ರತ್ಯೇಕವಾಗಿ ರಂಗಗೀತೆಗಳನ್ನು ಹಾಡುವ ತಂಡಗಳೇ ಮಹಾರಾಷ್ಟ್ರದಲ್ಲಿ ಕಾಣುತ್ತೇವೆ. ಕನ್ನಡದ ರಂಗಪರಂಪರೆಯಲ್ಲಿ ಶಾಂತಕವಿಗಳನ್ನು ಅನುಸರಿಸಿ ನಾಟಕ ಕಂಪನಿಗಳು ಹುಟ್ಟಿದವು. ಅದರಲ್ಲೂ ರಂಗಭೂಮಿ ಎಂದರೆ ಸಂಗೀತ ಹಾಡುಗಳೇ ಬಂಡವಾಳ ಎಂದು ಭಾವಿಸಲಾಗುತ್ತಿತ್ತು. ಕನ್ನಡದ ರಂಗಭೂಮಿಯಲ್ಲಿ ಮೊದಮೊದಲು ರಂಗಗೀತೆಗಳು ಮರಾಠಿ ಹಾಡುಗಳಾಗಿರುತ್ತಿದ್ದವು. ಅದರಲ್ಲೂ ಹಿಂದುಸ್ತಾನಿ ಪದ್ಧತಿಯಲ್ಲಿಯೇ ಆ ಹಾಡುಗಳನ್ನು ಹಾಡಲಾಗುತ್ತಿದ್ದಿತು. ಹಾಗಾಗಿ ಮರಾಠಿ ಹಾಡುಗಳ ಪ್ರಭಾವ ತಗ್ಗಿಸಿ ಕಂದ, ವೃತ್ತಗೀತೆಗಳನ್ನು ಕನ್ನಡ ರಂಗಭೂಮಿಗೆ ಅಳವಡಿಸಿ ಅವಕ್ಕೆ ಕರ್ನಾಟಕ ಸಂಗೀತವನ್ನು ಸಂಯೋಜಿಸಿದ ಕೀರ್ತಿ ವರದಾಚಾರ್ಯರಿಗೆ ಸಲ್ಲುತ್ತದೆ. ೧೯೫೫ರ ಸುಮಾರಿಗೆ ಕನ್ನಡದಲ್ಲಿ ರಂಗಗೀತೆಗಳು ಹೆಚ್ಚಾಗಿ ಭಾವಗೀತೆಗಳ ಸ್ವರೂಪವನ್ನು ಹೋಲುತ್ತಿದ್ದವು ಎಂದು ತಿಳಿದುಬರುತ್ತದೆ.

ಒಟ್ಟಾರೆಯಾಗಿ ಕನ್ನಡ ರಂಗಗೀತೆಗಳು ಮರಾಠಿ ರಂಗಗೀತೆಗಳಷ್ಟು ಪ್ರಸಿದ್ಧಗೊಳ್ಳದಿದ್ದರೂ ಅವು ಇಂದಿಗೂ ರಂಗಪರಂಪರೆಯಲ್ಲಿ ಜೀವಂತವಾಗಿ ಇರುವುದು ಕರ್ನಾಟಕದ ಗ್ರಾಮೀಣ ರಂಗಭೂಮಿ ಹಾಗೂ ವೃತ್ತಿರಂಗಭೂಮಿಯನ್ನು ಬಲ್ಲ ಎಲ್ಲರಿಗೂ ತಿಳಿದಿರುವ ವಿಚಾರವಾಗಿದೆ. ಈ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಕಂಡು ಬರುವ ಪೌರಾಣಿಕ ಹವ್ಯಾಸಿ ರಂಗಭೂಮಿಯ ರಂಗಗೀತೆಗಳನ್ನು ಸಂಗ್ರಹಿಸಿ ಸಾದರಪಡಿಸುವುದು ಮಹತ್ವ ಪೂರ್ಣವಾದ ಕಾರ್ಯವಾಗಿದೆ.

೧.೨. ಉದ್ದೇಶ ಮತ್ತು ಮಹತ್ವ

ರಂಗಗೀತೆಗಳು ರಂಗ ಸಂಸ್ಕೃತಿಗೆ ಮಾತ್ರವಲ್ಲ; ಒಟ್ಟು ಕರ್ನಾಟಕ ಸಂಸ್ಕೃತಿಯ ದೃಷ್ಟಿಯಿಂದಲೂ ಮುಖ್ಯವಾಗಿವೆ. ಹಿಂದಿನ ಕಾಲದಲ್ಲಿ ಗ್ರಾಮೀಣ ಜನತೆಯ ಏಕೈಕ ಮನೋರಂಜನೆಯ ಮಾಧ್ಯಮವಾಗಿದ್ದ ಕನ್ನಡ ರಂಗಭೂಮಿಯ ಪೌರಾಣಿಕ ನಾಟಕಗಳು ಇತ್ತೀಚಿಗೆ, ಗ್ರಾಮಾಂತರ ಪ್ರದೇಶದ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿವೆ. ಅಷ್ಟೇ ಏಕೆ ಕನ್ನಡದಲ್ಲಿ ಆಧುನಿಕತೆಯ ಹೊಡೆತಕ್ಕೆ ಸಿಕ್ಕಿ ಮರೆಯಾಗುತ್ತಿವೆ. ಆದರೆ ರಂಗಭೂಮಿಯ ಇತರ ವಿಭಾಗಗಳಲ್ಲಿ ಅನೇಕ ಚಟುವಟಿಕೆಗಳು ನಡೆಯುತ್ತಿದ್ದರೂ, ರಂಗಭೂಮಿಯ ಅಮೂಲ್ಯವಾದ ಒಂದು ಭಾಗವಾದ ಪೌರಾಣಿಕ ನಾಟಕಗಳ ಪ್ರದರ್ಶನ ಮಾತ್ರ ಕ್ಷೀಣಿಸುತ್ತಿರುವುದು

ಮತ್ತು ಮರೆಯಾಗುತ್ತಿರುವುದು ವಾಸ್ತವ. ನಮ್ಮ ನಾಡಿನ ಸಾಂಸ್ಕೃತಿಕ ಪರಂಪರೆಯ ದ್ಯೋತಕವಾಗಿರುವ ಪೌರಾಣಿಕ ನಾಟಕ ಕಲೆಯ ಸಂಪ್ರದಾಯವನ್ನು ಸಂಪೂರ್ಣವಾಗಿ ಉಳಿಸಿ, ರಕ್ಷಿಸಿ ಬೆಳೆಸಿಕೊಳ್ಳುತ್ತೇವೆ ಎಂಬುದು ನಮ್ಮ ಅಳವಿಗೂ ಮೀರಿದ ವಿಚಾರವಾಗಿದೆ. ಆದರೆ ಪೌರಾಣಿಕ ಹವ್ಯಾಸಿ ರಂಗಭೂಮಿ ನಾಟಕಗಳ ರಂಗಗೀತೆಗಳು ಬರಹ ಹಾಗೂ ಮೌಖಿಕ ಎರಡೂ ಸ್ತರಗಳಲ್ಲಿ ಕಂಡುಬರುತ್ತವೆ. ರಂಗದ ಮೇಲೆ ಮಾತ್ರ ಜೀವ ಪಡೆಯುವ ರಂಗಸಾಹಿತ್ಯದ ಬಗ್ಗೆ ಕುರಿತು ಹೆಚ್ಚಿನ ಅಧ್ಯಯನ ಆಗಿಲ್ಲ.

ರಂಗಗೀತೆಗಳು ಸಂಗೀತ, ಸಾಹಿತ್ಯ, ರಂಗಭೂಮಿ ಈ ಮೂರು ಕ್ಷೇತ್ರಕ್ಕೆ ಸಂಬಂಧವುಳ್ಳವು. ಇವನ್ನು ಗಂಭೀರವಾಗಿ ತೆಗೆದುಕೊಂಡಿಲ್ಲವೋ ಅಥವಾ ಜನಪ್ರಿಯ ಸಂಸ್ಕೃತಿ ಕುರಿತು ನಮ್ಮ ಅಧ್ಯಯನಕಾರರಿಗೆ, ಇನ್ನೂ ಬಿಡದ ಮುಜುಗರದ ಫಲವೋ ಗೊತ್ತಾಗುತ್ತಿಲ್ಲ. ಈ ಕುರಿತು ಕನ್ನಡದಲ್ಲಿ ದೊಡ್ಡ ಮಟ್ಟದ ಚರ್ಚೆಯಾಗಿಲ್ಲ. ಈ ಹಿನ್ನೆಲೆಯಲ್ಲಿ ಪೌರಾಣಿಕ ಹವ್ಯಾಸಿ ರಂಗಭೂಮಿಯ ನಾಟಕಗಳಲ್ಲಿನ ರಂಗಗೀತೆಗಳ ಮಾಧುರ್ಯವನ್ನಾದರೂ ಸಮಗ್ರವಾಗಿ ಸಂಗ್ರಹಿಸಿ, ವ್ಯವಸ್ಥಿತವಾಗಿ ಸಂಕಲಿಸಿ ಉಳಿಸಿಕೊಳ್ಳಬೇಕೆಂಬ ಪ್ರಯತ್ನವನ್ನಾದರೂ ಮಾಡಬೇಕೆನ್ನುವುದು ಈ ಸಂಪ್ರಬಂಧದ ಆಶಯವಾಗಿದೆ. ಎಷ್ಟೋ ಜನ ರಂಗಕವಿಗಳು ರಂಗಗೀತೆಗಳನ್ನು ರಚಿಸಿದ್ದಾರೆ. ಅವು ಅಜ್ಞಾತವಾಗಬಾರದು ಎನ್ನುವ ದೃಷ್ಟಿಯಿಂದ ಮತ್ತು ಕೊನೆಯ ಪಕ್ಷ ಪೌರಾಣಿಕ ನಾಟಕಗಳ ಹಾಡು ಮತ್ತು ಕಂದಗಳನ್ನು ಸಂಗ್ರಹಿಸುವುದರ ಮೂಲಕ ಮುಂದಿನ ಪೀಳಿಗೆಗೆ ಅನುಕೂಲವಾಗಲೆಂಬ ಉದ್ದೇಶವೂ ಈ ಅಧ್ಯಯನಕ್ಕಿದೆ. ಪೌರಾಣಿಕ ಹವ್ಯಾಸಿ ರಂಗಭೂಮಿಯ ನಾಟಕಗಳ ಈ ರಂಗಗೀತೆಗಳು ರಂಗ ಪ್ರಪಂಚದಲ್ಲಿ ದಾಖಲಾಗಲಿ ಎಂಬುದೂ ಇಲ್ಲಿನ ಆಶಯವಾಗಿದೆ.

೧.೩. ಅಧ್ಯಯನದ ವ್ಯಾಪ್ತಿ

ಯಾವುದೇ ಒಂದು ವಿಷಯದ ಅಧ್ಯಯನವು ನಿರ್ದಿಷ್ಟವಾದ ಚೌಕಟ್ಟನ್ನು ಹೊಂದಿರಬೇಕಾಗುತ್ತದೆ. ನಿರ್ದಿಷ್ಟವಾದ ವ್ಯಾಪ್ತಿಯು ವಿಷಯದ ಅಧ್ಯಯನಕ್ಕೆ ಅನುಕೂಲತೆಯನ್ನು ಮಾಡಿಕೊಡುತ್ತದೆ. ಅದರಂತೆ 'ಬಳ್ಳಾರಿ ಜಿಲ್ಲೆಯ ರಂಗಗೀತೆಗಳು : ಒಂದು ಅಧ್ಯಯನ' ಎಂಬ ವಿಷಯದ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನದ ವ್ಯಾಪ್ತಿಯನ್ನು ಆಕರ ವ್ಯಾಪ್ತಿ, ಸ್ಥಳ ವ್ಯಾಪ್ತಿ, ಕಾಲವ್ಯಾಪ್ತಿ ಎಂದು ಮೂರು ರೀತಿಯಲ್ಲಿ ವರ್ಗೀಕರಿಸಿಕೊಳ್ಳಲಾಗಿದೆ.

ಅ. ಆಕರವ್ಯಾಪ್ತಿ

ಪ್ರಸ್ತುತ ಅಧ್ಯಯನದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಬರುವ ಬಳ್ಳಾರಿ, ಸಿರುಗುಪ್ಪ, ಹೊಸಪೇಟೆ, ಸಂಡೂರು, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ, ಹೂವಿನ ಹಡಗಲಿ ಎಂಬ ಏಳು ತಾಲ್ಲೂಕುಗಳ ವ್ಯಾಪ್ತಿಯನ್ನು ಇಟ್ಟುಕೊಳ್ಳಲಾಗಿದೆ. ಹಿಂದೆ ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಹರಪನಹಳ್ಳಿ ತಾಲ್ಲೂಕಾಗಿತ್ತು ಆದರೆ, ಈಗ ಅದು ದಾವಣಗೆರೆ ಜಿಲ್ಲೆಯ ವ್ಯಾಪ್ತಿಗೆ ಹೋಗಿದೆ. ಆದರೂ ಸಾಂಸ್ಕೃತಿಕವಾಗಿ ಅದು ಬಳ್ಳಾರಿ ಜಿಲ್ಲೆಗೆ ಸೇರಿರುವುದರಿಂದ ಅದನ್ನು ಕೂಡ ಇಲ್ಲಿ ಅಧ್ಯಯನಕ್ಕೆ ತೊಡಗಿಸಿಕೊಳ್ಳಲಾಗಿದೆ.

ಹಾಗೆಯೇ ಬಳ್ಳಾರಿಯ ಗಡಿ ಪ್ರದೇಶಗಳಾದ ಆಲೂರು, ಆದೋನಿ, ಯಳ್ಳಾರ್ತಿ ಪ್ರದೇಶಗಳನ್ನು ಕೂಡ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಇಲ್ಲಿ ಪ್ರಮುಖ ನಟರು, ಪ್ರಮುಖವಾದ ನಾಟಕ ತಂಡಗಳು, ಪ್ರಮುಖ ರಂಗಕವಿಗಳನ್ನು ಇಟ್ಟುಕೊಂಡು ಪ್ರಕಟಿತ ಪುಸ್ತಕಗಳು, ಅಪ್ರಕಟಿತ ಸಂಶೋಧನಾ ಪ್ರಬಂಧಗಳು, ಹಸ್ತಪ್ರತಿಗಳನ್ನು ವಿಶ್ಲೇಷಿಸಿ ತಾತ್ವಿಕ ಚರ್ಚೆ ಮಾಡಲಾಗಿದೆ. ಹಾಗೆಯೇ ರಂಗಗೀತೆಗಳ ವಿಮರ್ಶಾ ಕೃತಿಯನ್ನು ಗಮನಿಸಲಾಗಿದೆ. ಪ್ರಮುಖ ಗಾಯಕ ನಟರನ್ನು ಸಂದರ್ಶನ ಮಾಡಿ, ವಿದ್ವಾಂಸರನ್ನು ಭೇಟಿ ಮಾಡಿ ಪ್ರಸ್ತುತ ಅಧ್ಯಯನದ ಬಗ್ಗೆ ಚರ್ಚೆ ಮಾಡಲಾಗಿದೆ.

ಆ. ಸ್ಥಳವ್ಯಾಪ್ತಿ

ಈ ಅಧ್ಯಯನದಲ್ಲಿ ನಿರ್ದಿಷ್ಟವಾಗಿ ಏಳು ಪ್ರಮುಖ ತಾಲ್ಲೂಕುಗಳನ್ನು ಪರಿಗಣಿಸಲಾಗಿದೆ. ಹಾಗೆಯೇ ಜಿಲ್ಲೆಯನ್ನು ಬಿಟ್ಟು ಉಳಿದ ಸ್ಥಳವನ್ನು ಕೂಡಾ ಲಗತ್ತಿಸಿಕೊಳ್ಳಲಾಗಿದೆ. ಕಾರಣವೇನೆಂದರೆ ಸಾಂಸ್ಕೃತಿಕವಾಗಿ ಇಲ್ಲಿ ರಂಗಭೂಮಿ ಚಟುವಟಿಕೆಗಳು ಸೀಮಿತವಾಗಿ ಜಿಲ್ಲಾ ವ್ಯಾಪ್ತಿಯಲ್ಲಿರುವುದಿಲ್ಲ. ಹಾಗಾಗಿ ಸಾಂಸ್ಕೃತಿಕವಾಗಿ ಇಲ್ಲಿ ನಡೆಯುತ್ತವೆ.

ಇ. ಕಾಲವ್ಯಾಪ್ತಿ

ಈ ಅಧ್ಯಯನದಲ್ಲಿ ಪ್ರಾಸಂಗಿಕ ಹಿನ್ನೆಲೆಯಾಗಿ ೧೯೫೦ರ ನಂತರ ನಡೆದಿರುವ ರಂಗಚಟುವಟಿಕೆಗಳನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ. ನಿರ್ದಿಷ್ಟವಾಗಿ ಕಳೆದ ಎಂಟು ವರ್ಷಗಳ ವಿದ್ಯಮಾನಗಳನ್ನು ಅಧ್ಯಯನಕ್ಕೆ ಇಟ್ಟುಕೊಳ್ಳಲಾಗಿದೆ.

೧.೪. ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನದಲ್ಲಿ ಕ್ಷೇತ್ರಕಾರ್ಯದ ಮೂಲಕ ಅಪಾರವಾದ ಮಾಹಿತಿಯನ್ನು ಸಂಗ್ರಹಿಸಿ ಬಳ್ಳಾರಿ ಜಿಲ್ಲೆಯ ರಂಗನಟರನ್ನು, ಗಾಯಕರನ್ನು ತಂಡಕಟ್ಟಿದ ವ್ಯಕ್ತಿಗಳನ್ನು, ಭಾಗವತರನ್ನು ಹಾಗೂ ರಂಗಭೂಮಿಯ ಮೇಲೆ ಕೆಲಸ ಮಾಡಿದ ವಿದ್ವಾಂಸರನ್ನು ಮುಖತಃ ಕಾಣಲಾಗಿದೆ. ನಟರನ್ನು ಸಂದರ್ಶನ ಮಾಡಿ ಕೆಲ ವಿದ್ವಾಂಸರ ಹತ್ತಿರ ಚರ್ಚೆ ಮಾಡಲಾಗಿದೆ. ಹೀಗೆ ಈ ಅಧ್ಯಯನದಲ್ಲಿ ಚರ್ಚೆ, ಸಂದರ್ಶನದ ಮೂಲಕ ಮಾಹಿತಿ ಸಂಗ್ರಹಿಸಿ, ವಿಶ್ಲೇಷಿಸುವ ಕಾರ್ಯಮಾಡಲಾಗಿದೆ. ಹಾಗೆಯೇ ಬೇರೆ ಬೇರೆ ಗಾಯಕ ನಟರನ್ನು, ರಂಗಕವಿಗಳನ್ನು ಕುರಿತು ತುಸುಮಟ್ಟಿಗೆ ತೌಲನಿಕ ಚರ್ಚೆಮಾಡಲಾಗಿದೆ. ಏಕೆಂದರೆ ಇದರಿಂದ ಅವರವರ ಇತಿ-ಮಿತಿ ಸ್ಪಷ್ಟವಾಗಿ ಗೊತ್ತಾಗುತ್ತದೆ.

೧. ಬಳ್ಳಾರಿ ಜಿಲ್ಲೆಯ ಪ್ರಮುಖ ನಟರನ್ನು, ಭೇಟಿ ಮಾಡಿ ಅವರ ನಟನಾ ಬದುಕಿನ ಅನುಭವವನ್ನು ತೆಗೆದುಕೊಂಡು ಈ ಅಧ್ಯಯನದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

೨. ಈ ಜಿಲ್ಲೆಯಲ್ಲಿ ಅನೇಕ ಹವ್ಯಾಸಿ ನಾಟಕ ತಂಡಗಳು ಇವೆ. ಆದರೆ ಈ ಅಧ್ಯಯನ ವಿಧಾನದಲ್ಲಿ ಪ್ರಮುಖವಾದ ತಂಡಗಳನ್ನು ಇಟ್ಟುಕೊಂಡು ವಿಶ್ಲೇಷಿಸಿ ಅಧ್ಯಯನ ಕೈಗೊಳ್ಳಲಾಗಿದೆ.

೩. ಈ ಜಿಲ್ಲೆಯಲ್ಲಿ ಅನೇಕ ರಂಗಕವಿಗಳು ಕಂಡುಬರುತ್ತಾರೆ. ಅದರಲ್ಲೂ ಈ ಜಿಲ್ಲೆಯ ರಂಗಗೀತೆಗಳ ರಂಗಕವಿಗಳ ವಿಷಯದಲ್ಲಿ ಜೀವನ ಪರಿಚಯಿಸುವ ವಿಧಾನವಾಗಿದೆ. ಕರ್ನಾಟಕದಲ್ಲಿ ಸಾಂಸ್ಕೃತಿಕವಾಗಿ ಅವರ ಪಾತ್ರ ಮಹತ್ವದ್ದಾಗಿದ್ದು ಅದು ಹೆಚ್ಚು ಜನರಿಗೆ ಪರಿಚಿತರಾಗಿಲ್ಲ.

೪. ಪ್ರತಿಯೊಂದು ರಂಗಗೀತೆಗಳು ಸಾಹಿತ್ಯ, ಸಂಗೀತ, ರಂಗಭೂಮಿ ಈ ಮೂರು ಆಯಾಮಗಳಲ್ಲಿರುತ್ತವೆ. ಅದರಲ್ಲಿ ರಂಗಗೀತೆಗಳ ಸಾಹಿತ್ಯವನ್ನು ಕವಿಗಳು ಹೇಗೆ ರಚಿಸುತ್ತಾರೆ ಎಂಬ ತಾಂತ್ರಿಕ ಅಂಶಗಳ ಬಗ್ಗೆ ಈ ಅಧ್ಯಾಯದಲ್ಲಿ ಚರ್ಚೆ ಮಾಡಲು ಯತ್ನಿಸಲಾಗಿದೆ.

೫. ಬಳ್ಳಾರಿ ಜಿಲ್ಲೆಯಲ್ಲಿ ಅಪಾರವಾದ ರಂಗಗೀತೆಗಳು ಕಂಡು ಬರುತ್ತವೆ. ಅವುಗಳನ್ನು ಬಿಡಿಬಿಡಿಯಾಗಿ ವಿಶ್ಲೇಷಣೆ ಮಾಡುವ ವಿಧಾನವನ್ನು ಈ ಅಧ್ಯಯನದಲ್ಲಿ ಅನುಸರಿಸಿಲ್ಲ. ಬದಲಾಗಿ ರಂಗಗೀತೆಗಳನ್ನು ಅವುಗಳ ವಸ್ತುವಿಗೆ ಮತ್ತು ಆಶಯಕ್ಕೆ ಅನುಗುಣವಾಗಿ ವಿಂಗಡಣೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

೬. ಸಾಹಿತ್ಯ, ಸಂಗೀತ ಮತ್ತು ರಂಗಭೂಮಿ ಈ ಮೂರು ಕ್ಷೇತ್ರದ ಹಿನ್ನೆಲೆಯಲ್ಲಿ ವಿಷಯ ಚರ್ಚೆ ಮಾಡಲಾಗಿದೆ. ಪ್ರಸ್ತುತ ಅಧ್ಯಯನಕಾರನು ಸಾಹಿತ್ಯದ ವಿದ್ಯಾರ್ಥಿಯಾಗಿರುವುದರಿಂದ ರಂಗಗೀತೆಗಳ ವಿಷಯವನ್ನು ಸಾಹಿತ್ಯಿಕ ಆಯಾಮದ ಹಿನ್ನೆಲೆಯಲ್ಲಿ ವಿಶೇಷ ಚರ್ಚೆ ಮಾಡಲಾಗಿದೆ. ಏಕೆಂದರೆ ಸಂಗೀತ ಚರ್ಚೆಯನ್ನು ಇಷ್ಟು ವಿಶೇಷವಾಗಿ ಬಹಳ ತಾಂತ್ರಿಕವಾಗಿ ಮಾಡಲು ಸಾಧ್ಯವಾಗಿಲ್ಲ. ಸಂಗೀತದ ಚರ್ಚೆಯನ್ನು ಸಾಹಿತ್ಯಕ್ಕೆ, ರಂಗಭೂಮಿಗೆ ಪೂರಕವಾಗಿ ಮಾಡಲಾಗಿದೆ.

೭. ಜಿಲ್ಲೆಯಲ್ಲಿ ರಂಗಗೀತೆಗಳನ್ನು ಹಾಡುವ ಗಾಯಕ ನಟರು ಹೆಚ್ಚಾಗಿದ್ದಾರೆ. ಆದರೆ ಅವರೆಲ್ಲರನ್ನು ಇಲ್ಲಿ ಅಧ್ಯಯನ ಮಾಡಲಾಗಿಲ್ಲ. ಕಾರಣ ಇದರಿಂದ ಅಧ್ಯಯನವು ಅತಿ ವ್ಯಾಪ್ತಿಗೆ ಹೋಗುವ ಸಾಧ್ಯತೆ ಇದೆ. ಹಾಗಾಗಿ ಆಯ್ದ ಮತ್ತು ಪ್ರಾತಿನಿಧಿಕ ಗಾಯಕ ನಟರ ಬಗ್ಗೆ ಮಾತ್ರ ಚರ್ಚೆ ಮಾಡಲಾಗಿದೆ.

೧.೫. ಇದುವರೆಗಿನ ಅಧ್ಯಯನದ ಸಮೀಕ್ಷೆ

'ಬಳ್ಳಾರಿ ಜಿಲ್ಲೆಯ ರಂಗಗೀತೆಗಳು : ಒಂದು ಅಧ್ಯಯನ' ಎಂಬ ವಿಷಯಕ್ಕೆ ಬಂದಿರುವ ವಿಮರ್ಶೆಗಳನ್ನು ಕುರಿತು ಸಮೀಕ್ಷೆ ಮಾಡುವುದು. ಇದರಿಂದ ಪ್ರಸ್ತುತ ಅಧ್ಯಯನದ ಸಾಧ್ಯತೆಯ ಬಗ್ಗೆ ಒಂದು ಚಿತ್ರವನ್ನು ಕೊಡುತ್ತದೆ. ಈ ಅಧ್ಯಯನದ ಬಗೆಗೆ ಬಂದ ಗ್ರಂಥಗಳು, ಲೇಖಕರ ವಿಮರ್ಶೆಗಳು ಹಾಗೂ ಲೇಖನಗಳನ್ನು ಕ್ರಮವಾಗಿ ಈ ಕೆಳಗಿನಂತೆ ನೋಡಬಹುದಾಗಿದೆ.

೧. ಡಾ.ಆರ್.ಬಿ.ದಿವಾಕರ್ ಮತ್ತು ಡಾ.ಆರ್.ಬಿ.ಕುಮಾರ್ (ಸಂ), ಭರಮಲಿಂಗಪ್ಪ ಮಾಸ್ತರರ ರಂಗ ಗೀತೆಗಳು, ೨೦೦೫

ಪ್ರಸ್ತುತ ಕೃತಿಯಲ್ಲಿ ಸಂಪಾದಕರು ಶ್ರೀಮತಿ ಸುಭದ್ರಮ್ಮಮನ್ಸೂರ್, ದಿವಂಗತ ಶಿವಲಿಂಗಪ್ಪ ಮಾಸ್ತರ್, ದಿವಂಗತ ಕೆ.ವಾದಿರಾಜ, ಅರಳಿಗನೂರುವೀರಭದ್ರಯ್ಯ, ಎ.ನಾಗಪ್ಪ, ಕೆ.ನಾಗರತ್ನಮ್ಮ ಮುಂತಾದ ಕಲಾವಿದರಲ್ಲಿ ಇವರ ರಂಗಗೀತೆಗಳನ್ನು ತಮ್ಮಲ್ಲಿ ಕಾಯ್ದಿಟ್ಟುಕೊಂಡಿದ್ದರು, ಅವುಗಳನ್ನು ಅವರಲ್ಲಿ ಕೇಳಿ ತಿಳಿದು ಗುರುತಿಸಿ ಸಂಗ್ರಹಿಸಿದ್ದಾರೆ.

ಶ್ರೀಯುತ ದಿವಂಗತ ಭರಮಲಿಂಗಪ್ಪ ಮಾಸ್ತರರ ರಂಗಗೀತೆಗಳನ್ನು ಸಂಗ್ರಹಿಸಿ ಸಂಪಾದಕರು ಪ್ರಕಟಿಸಿರುವುದು ಕನ್ನಡ ರಂಗಭೂಮಿಗೆ ವಿಶಿಷ್ಟವಾದ ಕೊಡುಗೆಯಾಗಿದೆ. ಕನ್ನಡದಲ್ಲಿ ರಂಗಗೀತೆಗಳ ಸಂಕಲನಗಳು ಬಹಳ ಕಡಿಮೆ ಇವೆ. ಅಂತವುಗಳಲ್ಲಿ ಈ ಗ್ರಂಥ ಮಹತ್ವದ್ದಾಗಿದೆ. ಈ ಗ್ರಂಥದಲ್ಲಿ ಭಾಗ -೧ ಮತ್ತು ಭಾಗ -೨ರಲ್ಲಿ ಯುಗಳ ಗೀತೆಗಳೆಂದು ವರ್ಗೀಕರಿಸಲಾಗಿದೆ.

ಶ್ರೀಯುತರ ರಂಗಗೀತೆಗಳು ಒಳ್ಳೆಯ ಗಾಯಕರ ಕಂಠದಿಂದ ಹಾಡಾಗಿ ಹೊರ ಹೊಮ್ಮುವುದರಿಂದ ಪ್ರೇಕ್ಷಕವರ್ಗದವರಿಗೆ ಆಸಕ್ತಿ ಉಂಟಾಗಲು ಎಡೆಮಾಡಿಕೊಡುತ್ತವೆ. ಇವರ ಅನೇಕ ರಂಗಗೀತೆಗಳು ಬಳ್ಳಾರಿಯ ವೃತ್ತಿ ಕಲಾವಿದರು ಹಾಗೂ ಹವ್ಯಾಸಿ ಕಲಾವಿದರು ರಂಗಭೂಮಿಯಲ್ಲಿ ಹಾಡಿರುವುದರಿಂದ ಜನಪ್ರಿಯಗೊಂಡಿವೆ.

ಪ್ರಸ್ತುತ ಕೃತಿಯಲ್ಲಿ ರಂಗಗೀತೆಗಳು ಸಾಕಷ್ಟಿದ್ದರೂ ರಾಗ, ತಾಳ ಇವೆ ನಿಜ. ಆದರೆ, ಯಾವ ನಾಟಕಕ್ಕೆ ಯಾವ ಹಾಡು ಎಂದು ತಿಳಿಸದೇ ಇರುವುದನ್ನು ಕಾಣುತ್ತೇವೆ. ಅಂದರೆ ಒಂದು ನಾಟಕದ ಸನ್ನಿವೇಶಕ್ಕೆ ತಕ್ಕಂತೆ ಇರುವ ರಂಗಗೀತೆಗಳಾಗಿರುವುದರಿಂದ ಅವುಗಳ ಬಗ್ಗೆ ಗೀತೆ ಬರೆದ ಮೇಲೆ ಕೆಳಗೆ ಟಿಪ್ಪಣಿ ಮೂಲಕ ಗುರುತಿಸಿದ್ದರೆ ಇನ್ನೂ ಉತ್ತಮವಾಗಿರುತ್ತಿತ್ತು ಎಂದೆನಿಸುತ್ತದೆ. ಶ್ರೀಯುತರ ರಂಗಗೀತೆಗಳು ಯಾವ ಸಂದರ್ಭಕ್ಕೆ ಯಾವ ವರ್ಷ, ಯಾವ ನಾಟಕಗಳಿಗಾಗಿ ಬರೆಯಲ್ಪಟ್ಟವು. ಯಾವ ಯಾವ ನಾಟಕಗಳಲ್ಲಿ ಈ ರಂಗಗೀತೆಗಳು ಬಳಕೆಗೊಂಡಿವೆ ಮುಂತಾದ ವಿವರಗಳನ್ನು ಸಂಗ್ರಹದಲ್ಲಿ ಕೊಟ್ಟಿರುವುದಿಲ್ಲ. ಇದಕ್ಕೆ ಕಾರಣ ಅವುಗಳ ಕುರಿತ ಸರಿಯಾದ ಮಾಹಿತಿ ಸಿಗದೇ ಇರುವುದು ಎಂದು ತಿಳಿಯಬಹುದಾಗಿದೆ.

೨. ಸಿರಿಗೇರಿ ಯರಿಸ್ವಾಮಿ, ರಂಗಲಹರಿ, ೨೦೦೬

ಪ್ರಸ್ತುತ ಈ ಕೃತಿಯು ನಾಡಿನ ಖ್ಯಾತ ದಿನ ಪತ್ರಿಕೆಗಳಲ್ಲಿ ಸಾಂದರ್ಭಿಕವಾಗಿ ಬರೆದ ನಾಟಕಗಳ ವಿಮರ್ಶೆ, ರಂಗಸಂಸ್ಥೆ, ಬಳ್ಳಾರಿ ಜಿಲ್ಲೆಯ ರಂಗ ಕಲಾವಿದರ ವ್ಯಕ್ತಿ ಪರಿಚಯ, ಸಂದರ್ಶನಗಳನ್ನು ಒಟ್ಟಾಗಿ ರಂಗಭೂಮಿ ಕುರಿತಾದ ಲೇಖನಗಳನ್ನು ಈ ಸಂಕಲನವು ಒಳಗೊಂಡಿದೆ.

ನಾಟಕ ನೋಡುವಾಗ ತಾವು ಪಡೆದ ರಸಾನುಭವ ಲೋಕಕ್ಕೆಲ್ಲ ಗೊತ್ತಾಗಬೇಕು. ಪ್ರತಿಭಾವಂತರು ಬೆಳಕಿಗೆ ಬರಬೇಕು. ಕಲಾವಿದರ ಬೇಡಿಕೆಗಳು ಈಡೇರಬೇಕು, ಹೆಸರಾಂತ ರಂಗಕಲಾವಿದರು ಬಳ್ಳಾರಿ

ಜಿಲ್ಲೆಯಲ್ಲಿದ್ದಾರೆ. ಅವರನ್ನು ಪರಿಚಯಿಸುವ ಪರಿಯಲ್ಲೇ, ಅಪಾರ ಪ್ರತಿಭೆ ಇದ್ದೂ ಮಾಧ್ಯಮಗಳಲ್ಲಿ ಅಷ್ಟಾಗಿ ಬೆಳಕಿಗೆ ಬಾರದ ಕಲಾವಿದರನ್ನು ಗುರುತಿಸುವ ಕಾರ್ಯ ಈ ಸಂಕಲನ ಮಾಡಿದೆ. ಒಟ್ಟಾರೆಯಾಗಿ ಈ ಕೃತಿಯು ವ್ಯಕ್ತಿ ಪರಿಚಯಕ್ಕೆ ಮಹತ್ವ ನೀಡಿದೆ. ಇಂತಹ ಕೃತಿಗಳು ರಂಗಭೂಮಿಗೆ ಕೈಗನ್ನಡಿ ಇದ್ದಂತೆ ಎಂದು ಹೇಳಬಹುದು.

ಪ್ರಸ್ತುತ ಕೃತಿಯು ಸಾಕಷ್ಟು ಮಾಹಿತಿಯನ್ನು ಲೇಖನಗಳಲ್ಲಿ ನೀಡಿದ್ದರೂ ಸಹ ವಿಶ್ಲೇಷಣೆಯ ಕೊರತೆ ಇದೆ. ಒಂದು ಹಂತದ ಅಗತ್ಯವನ್ನು ಈ ಕೃತಿಯ ಲೇಖನಗಳು ಪೂರೈಸುತ್ತವೆ. ಆದರೂ, ಅವು ಅರಸುವ ಸಂಗತಿಗಳು, ಹಾಕಿಕೊಳ್ಳುವ ಪ್ರಶ್ನೆಗಳು ಮುಖ್ಯವಾಗುತ್ತವೆ. ಒಟ್ಟು ಕಾಲದ ಗತಿಶೀಲತೆಯಲ್ಲಿ ಒಂದು ರಂಗಭೂಮಿಯ ನಡೆಯನ್ನು ಗುರುತಿಸುವ ಕೆಲಸವಾಗಬೇಕಾಗಿದೆ. ಒಟ್ಟಾರೆಯಾಗಿ ತಾತ್ಕಾಲಿಕತೆಗಿಂತ ಸಾರ್ವಕಾಲಿಕತೆಗೆ ಆದ್ಯತೆ ನೀಡಬೇಕಾಗುತ್ತದೆ.

೩. ಗುಡಿಹಳ್ಳಿ ನಾಗರಾಜ (ನಿರೂಪಣೆ) ಮರಿಯಮ್ಮನಹಳ್ಳಿ ರಂಗಸಿರಿ, ಕೆ.ನಾಗರತ್ನಮ್ಮನವರ ಆತ್ಮಚರಿತ್ರೆ, ೧೯೯೯

ಪ್ರಸ್ತುತ ಈ ಕೃತಿಯು ಮರಿಯಮ್ಮನಹಳ್ಳಿಯ ಪ್ರತಿಭಾವಂತ ಸಂವೇದನಾಶೀಲ ನಟಿ ಕೆ.ನಾಗರತ್ನಮ್ಮನವರು ಹೇಳಿದ (ನಿರೂಪಣೆ, ಗುಡಿಹಳ್ಳಿ ನಾಗರಾಜ) ಕನ್ನಡದಲ್ಲಿ ರಂಗನಟಿಯೊಬ್ಬರ ಪ್ರಥಮ ಆತ್ಮಕತೆಯಾಗಿದೆ. ಕೆ. ನಾಗರತ್ನಮ್ಮನವರು ರಂಗ ಪ್ರವೇಶದಿಂದಿಡಿದು ಅವರ ಜೀವನದ ಪ್ರತಿಯೊಂದು ಸಿಹಿ ಕಹಿ ಘಟನೆಗಳನ್ನು, ಬಿಡಿಬಿಡಿಯಾಗಿ ಬರೆದಿಟ್ಟಿದ್ದ ಅನುಭವಗಳನ್ನು ಪೋಣಿಸಿ, ಸುಂದರವಾದ ಹಾರವಾಗಿ ಹೆಣೆದಿರುವುದು ಈ ಕೃತಿಯಲ್ಲಿ ಕಾಣುತ್ತೇವೆ.

ಇದರ ಅನುಬಂಧ ೧ರಲ್ಲಿ ಹಾ.ಮಾ.ನಾಯಕರು ದಿನಾಂಕ ೦೧.೦೪.೧೯೯೯ರಂದು ನಾಗರತ್ನಮ್ಮನವರನ್ನು ಕುರಿತ ವಿಮರ್ಶೆಯನ್ನು ಬರೆದಿರುವುದು ಕಂಡು ಬರುತ್ತದೆ.

ಇದರ ಅನುಬಂಧ-೨ರಲ್ಲಿ ವಿವಿಧ ಪತ್ರಿಕೆಗಳಲ್ಲಿ ಲೇಖಕರು, ಪತ್ರಕರ್ತರು ನಾಗರತ್ನಮ್ಮನವರನ್ನು ಕುರಿತು ಬರೆದ ಲೇಖನಗಳ ಆಯ್ದಭಾಗಗಳು ಕಾಣುತ್ತೇವೆ.

ಇದರ ಅನುಬಂಧ-೩ ರಲ್ಲಿ ಇದರ ನಾಟಕಕ್ಕೆ ಬಂದ ಪ್ರತಿಕ್ರಿಯೆಗಳಲ್ಲಿ ಕೆಲವನ್ನು ಆಯ್ದುಕೊಡಲಾಗಿದೆ.

ಅನುಬಂಧ-೪ರಲ್ಲಿ ಕೆಲವು ಪ್ರಮುಖ ಘಟನಾವಳಿಗಳನ್ನು ನೀಡಲಾಗಿದೆ.

ಪ್ರಸ್ತುತ ಕೃತಿಯಲ್ಲಿ ನಾಟಕಗಳಲ್ಲಿ ಅಭಿನಯಿಸುವ ಕಲಾವಿದೆಯರ ಪ್ರತಿನಿತ್ಯ ಹೊಸ ಸವಾಲುಗಳನ್ನು ಎದುರಿಸಲು ಸಿದ್ಧರಾಗಬೇಕು. ಇಂತಹ ಕಲಾವಿದೆಯರು ಎದುರಿಸುವ ಸಮಸ್ಯೆಗಳು ಹಾಗೂ ಅವರ ವೈಯಕ್ತಿಕ ಬದುಕನ್ನು ದಾಖಲಿಸುವಾಗ ನಾಗರತ್ನಮ್ಮನವರ ಅನುಭವ ನೆರವಿಗೆ ಬಂದಿದ್ದು ಈ ಗ್ರಂಥದಲ್ಲಿ ಕಾಣುತ್ತೇವೆ. ಇದು ಕೇವಲ ನಾಗರತ್ನಮ್ಮನವರ ಆತ್ಮಕತೆಯಲ್ಲ, ಹೆಚ್ಚು ಕಮ್ಮಿ ಎಲ್ಲಾ ರಂಗಕಲಾವಿದರ ಪ್ರಾತಿನಿಧಿಕ ಸ್ವರೂಪವೂ ಈ ಆತ್ಮಕತೆಗಿದೆ.

ಗುಬ್ಬಿ ವೀರಣ್ಣನವರ 'ಕಲೆಯೇ ಕಾಯಕ' ಆತ್ಮಚರಿತ್ರೆಯ ನಂತರ ಬಂದಿರುವ ಒಬ್ಬ ನಟಿಯ ಪ್ರಥಮ ಸಮಗ್ರ ಆತ್ಮಚರಿತ್ರೆಯಾಗಿದೆ. ಇಂತಹ ವೃತ್ತಿ ನಟಿಯರ ಬದುಕಿನ ಅಂತರಂಗವನ್ನು ಕೃತಿಯು ಬಿಚ್ಚಿಡುತ್ತದೆ.

ಈ ಕೃತಿಯು 'ನನ್ನ ನಾ ಕಂಡಂತೆ' ಎಂಬ ಶೀರ್ಷಿಕೆಯಡಿಯಲ್ಲಿ ೧೯೬೭ರಲ್ಲಿ ಜನಪ್ರಿಯ ವಾರ ಪತ್ರಿಕೆ 'ಸುಧಾ'ದಲ್ಲಿ ೧೯ವಾರಗಳ ಕಾಲ ಧಾರವಾಹಿಯಾಗಿ ಪ್ರಕಟವಾಯಿತು. ನಂತರ ಕನ್ನಡ ವಿಶ್ವವಿದ್ಯಾಲಯವು ಪುಸ್ತಕ ರೂಪದಲ್ಲಿ ೧೯೯೯ರಲ್ಲಿ ಪ್ರಕಟಿಸಿತು. ಅದು ನಮ್ಮ ರಂಗಭೂಮಿಯ ಚರಿತ್ರೆಯಲ್ಲಿ ಒಂದು ವಿಶಿಷ್ಟ ದಾಖಲೆಯಾಗಿದೆ.

ಈ ಗ್ರಂಥದಲ್ಲಿ ವಿಶ್ಲೇಷಣೆಯ ಕೊರತೆ ಎದ್ದು ಕಾಣುತ್ತದೆ. ಬರೀ ಜೀವನದ ಘಟನೆಗಳನ್ನು ಮಾತ್ರ ಕೇಳಿಕೊಳ್ಳಲಾಗಿದೆ.

೪. ಡಾ.ಬಸವರಾಜ ಮಲಶೆಟ್ಟಿ (ಸಂ) ಉತ್ತರ ಕರ್ನಾಟಕದ ರಂಗಗೀತೆಗಳು -೧೯೯೦

ಪ್ರಸ್ತುತ ಈ ಕೃತಿಯು ಉತ್ತರ ಕರ್ನಾಟಕದ ರಂಗಭೂಮಿಯಲ್ಲಿ ಬರುವ ಪೌರಾಣಿಕ ನಾಟಕಗಳ ರಂಗಗೀತೆಗಳ ಸಂಗ್ರಹವಾಗಿದೆ. ಈ ಕೃತಿಯು ಅನೇಕ ಪೌರಾಣಿಕ ನಾಟಕಗಳ ರಂಗಗೀತೆಗಳಿಂದ ಕೂಡಿದ್ದರೂ, ಪ್ರತಿಯೊಂದು ಹಾಡಿಗೆ ಸ್ವರ ಪ್ರಸ್ತಾರ ಹಾಕಿರುವುದು ಕಾಣುತ್ತೇವೆ.

ಈ ಸಂಗ್ರಹವು ದಾಖಲೀಕರಣದ ಒಂದು ಪ್ರಯತ್ನವಾಗಿದೆ. ಹಿರಿಯ ಕಲಾವಿದರು ಒಬ್ಬೊಬ್ಬರಾಗಿ ಅಗಲುತ್ತಿರುವ ಹಿನ್ನೆಲೆಯಲ್ಲಿ ಅವರಿರುವಾಗಲೇ ಹಿಂದಿನ ಹಾಡುಗಳನ್ನು ಸಂಗ್ರಹಿಸಬೇಕೆಂಬ ಉದ್ದೇಶದಿಂದ ಇದನ್ನು ಮಾಡಲಾಗಿದೆ. ಈ ಹಾಡುಗಳಿಗೆ ಹಿಂದುಸ್ಥಾನಿ ಸಂಗೀತದ ಸ್ವರಲಿಪಿ ಪದ್ಧತಿಯನ್ನು ಅನುಸರಿಸಲಾಗಿದೆ. ಇಂದು ಅಪರೂಪವೆನಿಸಿದ ರಾಮಾಯಣ, ಕೃಷ್ಣಲೀಲೆ, ಮಹಾನಂದಾ, ಕಿತ್ತೂರ ರುದ್ರಮ್ಮ ಮುಂತಾದ ಹಳೆಯ ನಾಟಕದ ಹಾಡುಗಳನ್ನು ಈ ಗ್ರಂಥದಲ್ಲಿ ಸಂಗ್ರಹಿಸಲಾಗಿದೆ. ಕನ್ನಡ ರಂಗಭೂಮಿಯಲ್ಲಿ ಒಂದು ಮಹತ್ವದ ಮೈಲುಗಲ್ಲಾಗಿರುವ 'ಹೇಮರೆಡ್ಡಿ ಮಲ್ಲಮ್ಮ' ನಾಟಕದ ಹಾಡುಗಳನ್ನು ಹೆಚ್ಚಿಗೆ ಆರಿಸಿಕೊಳ್ಳಲಾಗಿದೆ. ಆರಂಭದಿಂದ ೧೯೬೦ರವರೆಗಿನ ಪ್ರಮುಖ ಪ್ರಾತಿನಿಧಿಕ ನಾಟಕಗಳ ಹಾಡುಗಳನ್ನು ಆಯ್ಕೆ ಮಾಡಲಾಗಿದೆ.

ಕನ್ನಡ ರಂಗಭೂಮಿಗೆ ಈ ಕೃತಿಯು ಬಹುಮುಖ್ಯವಾಗಿದೆ. ಇಲ್ಲಿನ ರಂಗಗೀತೆಗಳಿಗೆ ಹಿಂದುಸ್ತಾನಿ ಸಂಗೀತದ ಸ್ವರಲಿಪಿಯ ಪದ್ಧತಿ ಅಳವಡಿಸಿರುವುದರಿಂದ ಮುಂದಿನ ಸಂಶೋಧಕರಿಗೆ ಮಾದರಿಯಾಗಿದೆ. ಇಲ್ಲಿ ಹೆಚ್ಚಾಗಿ ಹೇಮರೆಡ್ಡಿ ಮಲ್ಲಮ್ಮ ನಾಟಕದ ರಂಗಗೀತೆಗಳನ್ನು ಆರಿಸಿಕೊಂಡಿದ್ದಾರೆ.

ಈ ಸಂಗ್ರಹದ ಬಹಳಷ್ಟು ಹಾಡುಗಳಿಗೆ ಸಂಗೀತ ಸಂಯೋಜನೆ ಮಾಡಿರುವವರು ಯಾರೆಂಬುದು ಖಚಿತವಾಗಿ ತಿಳಿದಿಲ್ಲದಿರುವುದಾಗಿದೆ. ಉತ್ತರ ಕರ್ನಾಟಕದ ರಂಗಗೀತೆಗಳಿಗೆ ಮಾತ್ರ ಹೆಚ್ಚಿನ ಆದ್ಯತೆ ಕೊಟ್ಟು ಅದರಲ್ಲಿ ಒಂದಾದ ಬಳ್ಳಾರಿ ಜಿಲ್ಲೆಯ ಪೌರಾಣಿಕ ನಾಟಕಗಳ ರಂಗಗೀತೆಗಳ ಬಗ್ಗೆ ಹೆಚ್ಚಿನದಾದ ಪ್ರಾಧಾನ್ಯತೆ ನೀಡದೇ ಇರುವುದು ಕಾಣಬಹುದಾಗಿದೆ.

೫. ಗವೀಶ ಹಿರೇಮಠ "ಹೊತ್ತು ಮುಳುಗುವ ಮುನ್ನ...." ೨೦೦೮

ಪ್ರಸ್ತುತ ಈ ಕೃತಿಯು ನೂರೊಂದು ಜನ ವೃತ್ತಿಕಲಾವಿದರ ಬದುಕು-ಕಲೆ ಕುರಿತು ಪರಿಚಯವಿದೆ. ಬಣ್ಣದ ಬದುಕಿಗೆ ತಮ್ಮನ್ನು ಅರ್ಪಿಸಿಕೊಂಡು ಶ್ರಮ, ಶ್ರದ್ಧೆಯಿಂದ ದುಡಿದ ಕಲಾವಿದರ ಸ್ಥಿತಿಗತಿಯನ್ನು ಈ ಕೃತಿ ವಿವರಿಸುತ್ತದೆ.

ಈ ಕೃತಿಯ ಭಾಗ-I ರಲ್ಲಿ, ಹಿರಿಯರಲ್ಲಿ ೬೦ ವರ್ಷಗಳಿಂದ ೯೦ವರ್ಷಗಳವರೆಗಿನವರನ್ನು "ಹೊತ್ತು ಮುಳುಗುವ ಮುನ್ನ..." ಎಂದು, ಭಾಗ-II ರಲ್ಲಿ ೩೫ರಿಂದ ೫೦ರ ವಯೋಮಿತಿಯವರನ್ನು "ಹೊತ್ತು ಏರುವ ಮುನ್ನ..." ಎಂದು ಎರಡು ಭಾಗಗಳಾಗಿ ಒಳಗೊಂಡಿದೆ.

ವೃತ್ತಿಯಿಂದ ನಿವೃತ್ತರಾಗಿ ಜೀವನದ ಸಂಧ್ಯಾಕಾಲದಲ್ಲಿ ಬರುವ ಪ್ರತಿಯೊಬ್ಬ ಕಲಾವಿದನಿಗೆ ಮುಸ್ಸಂಜೆಯಲ್ಲಿ ಒಂದು ಕಥೆ ಇದ್ದೇ ಇರುತ್ತದೆ. ಆತ ವಿಜೃಂಭಿಸಿದ ದಿನಗಳ; ಅನುಭವಿಸಿದ ಮಾನ-ಅಪಮಾನಗಳ; ಜೀವನದ ಸಿಹಿ-ಕಹಿಗಳ, ಆಸೆ-ನಿರಾಸೆಗಳ ಉಯ್ಯಾಲೆ, ಬಣ್ಣ ಹಚ್ಚಿ ಪಾತ್ರಗಳಿಗೆ ಪ್ರಾಣ ತುಂಬಿದ ಕಸರತ್ತು; ಬಣ್ಣ ತೆಗೆದು ಹೊರ ಬಂದಾಗಿನ ನೈಜ ಬದುಕನ್ನು ಈ ಗ್ರಂಥದಲ್ಲಿ ಚಿತ್ರಿಸಿರುವುದು ಕಾಣುತ್ತೇವೆ.

ಈ ಕೃತಿಯು ಕಾವ್ಯಮಯ ಹಾಗೂ ಚಿಂತನಶೀಲವಾಗಿದೆ. ಈ ಕೃತಿಯಲ್ಲಿ ಬಂದಿರುವ ಕಲಾವಿದರಲ್ಲಿ ಕೆಲವರು ಕಣ್ಮರೆಯಾಗಿದ್ದಾರೆ. ಅವರನ್ನು ನೆನಪಿಸುವ, ಉಳಿದವರನ್ನು ಗೌರವಿಸುವ ಸಂಸ್ಕೃತಿಯನ್ನು ಈ ಕೃತಿ ತಂದು ಕೊಡುತ್ತದೆ. ಈ ಎಲ್ಲ ಕಲಾವಿದರ ಪ್ರತಿಭೆ ಹಾಗೂ ವೈಯಕ್ತಿಕ ಬದುಕಿನ ಏರಿಳಿತಗಳನ್ನು ಈ ಕೃತಿಯಲ್ಲಿ ದಾಖಲಾಗಿದೆ. ಒಂದು ಸಂಸ್ಥೆ; ಒಂದು ಅಕಾಡೆಮಿ ಮಾಡುವ ಕೆಲಸವನ್ನು ಲೇಖಕರು ಮಾಡಿದ್ದಾರೆ. ಹಾಗಾಗಿ ಈ ಕೃತಿ ಕರ್ನಾಟಕ ರಂಗ ಭೂಮಿಗೆ ಉತ್ತಮ ಕೊಡುಗೆಯಾಗಿದೆ.

ಪ್ರಸ್ತುತ ಈ ಕೃತಿಯು ಬಳ್ಳಾರಿ ಜಿಲ್ಲೆಯ ವೃತ್ತಿ ಕಲಾವಿದರನ್ನು ಬೆರಳೆಣಿಕೆಯಷ್ಟು ಪರಿಚಯಿಸಲಾಗಿದೆ. ಆದರೆ ಇನ್ನೂ ಅನೇಕ ವೃತ್ತಿ ಕಲಾವಿದರು ಹವ್ಯಾಸಿ ಕಲಾವಿದರು ಬಳ್ಳಾರಿ ಜಿಲ್ಲಾ ರಂಗಭೂಮಿಯಲ್ಲಿದ್ದಾರೆ. ಆದರೆ ಅವರ ಬಗ್ಗೆ ಹೆಚ್ಚಿನದಾಗಿ ಗಮನಹರಿಸಿಲ್ಲ. ಈ ಕೃತಿ ಕಲಾವಿದರನ್ನು ಪರಿಚಯಿಸುವುದಾಗಿ ವಿನಃ ವಿಶ್ಲೇಷಣೆಯ ಕಾರ್ಯವಾಗಿಲ್ಲ.

೧.೬. ಪರಿಭಾಷೆಯ ತಾತ್ವಿಕ ಚರ್ಚೆ

ಪ್ರಸ್ತುತ ಈ ಅಧ್ಯಯನದಲ್ಲಿ ಬಳಕೆಯಾಗುವ ಪ್ರಮುಖವಾದ ಪರಿಭಾಷೆಗಳನ್ನು ಕುರಿತು ತಾತ್ವಿಕವಾಗಿ ಚರ್ಚಿಸಲಾಗಿದೆ. ಇಲ್ಲಿ ಬಳಕೆಯಾಗಿರುವ ಮುಖ್ಯ ಪರಿಭಾಷೆಗಳೆಂದರೆ, ರಂಗಗೀತೆಗಳು, ರಂಗಗಾಯಕರು ಮತ್ತು ಪೌರಾಣಿಕ ಹವ್ಯಾಸಿ ರಂಗಭೂಮಿ, ಎಂಬ ಮೂರೂ ಅಂಶಗಳ ಬಗ್ಗೆ ಇಲ್ಲಿ ಗಮನಿಸಬಹುದು.

ಅ. ರಂಗಗೀತೆಗಳು

ಈ ಅಧ್ಯಯನದಲ್ಲಿ ರಂಗಗೀತೆಗಳೆಂದರೆ ಹಳೆಯ ಕಾಲದ ರಂಗಕವಿಗಳು ರಚಿಸಿದ ಕಂದ, ಷಟ್ಪದಿಯ ರಂಗಗೀತೆಗಳಲ್ಲ. ಕುವೆಂಪು, ಬೇಂದ್ರೆ ಮುಂತಾದ ಆಧುನಿಕ ಕವಿಗಳ ರಚನೆಗಳಲ್ಲ. ಇವಕ್ಕೆ

ಬದಲಾಗಿ ರಂಗಕವಿಗಳು ಯಾವುದೇ ಒಂದು ಪೌರಾಣಿಕ ನಾಟಕದ ಕಥಾವಸ್ತುವನ್ನೊಳಗೊಂಡ ನಾಟಕಗಳ ಸನ್ನಿವೇಶಕ್ಕೆ ತಕ್ಕಂತೆ ರಚನೆ ಮಾಡುವ ಗೀತೆಗಳನ್ನು ಇಲ್ಲಿ ರಂಗಗೀತೆಗಳೆಂದು ಕರೆಯಲಾಗಿದೆ.

ಆ. ರಂಗಗಾಯಕರು

ಈ ಅಧ್ಯಯನದಲ್ಲಿ ಮೇಲೆ ಸೂಚಿಸಿದ ರಂಗಗೀತೆಗಳನ್ನು ಹಾಡುವವರನ್ನು ರಂಗಗಾಯಕರು ಎಂದು ಕರೆಯಲಾಗಿದೆ. ವಿಶೇಷವೆಂದರೆ, ಈ ಗಾಯಕರು ಕೇವಲ ಮೇಲೆ ಕಾಣಿಸಿದ ರಂಗಗೀತೆಗಳನ್ನು ಮಾತ್ರ ಹಾಡುವುದಿಲ್ಲ. ಇದರ ಜೊತೆಗೆ ವೃತ್ತಿರಂಗ ಭೂಮಿಯಲ್ಲಿ, ಜಾನಪದ ರಂಗಭೂಮಿಯಲ್ಲಿ ಪೌರಾಣಿಕ ಹವ್ಯಾಸಿ ರಂಗಭೂಮಿಯಲ್ಲಿಯೂ ಹಾಡುತ್ತಾರೆ. ಆದರೆ ಇಲ್ಲಿ ಮುಖ್ಯವಾಗಿ ಪೌರಾಣಿಕ ಹವ್ಯಾಸಿ ರಂಗಭೂಮಿಯಲ್ಲಿ ಹಾಡುವವರನ್ನು ಮಾತ್ರ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ.

ಇ. ಪೌರಾಣಿಕ ಹವ್ಯಾಸಿ ರಂಗಭೂಮಿ

ಇದು ಬಹಳ ವಿಶಿಷ್ಟವಾದ ಸಂಕೀರ್ಣವಾದ ರಂಗ ಪ್ರಕಾರವಾಗಿದೆ. ಪೌರಾಣಿಕ ಹವ್ಯಾಸಿ ರಂಗಭೂಮಿ ಎಂದರೆ ಒಂದು, ಇದರಲ್ಲಿ ವೃತ್ತಿ ಅಥವಾ ಕಂಪನಿಯ ರಂಗಭೂಮಿಯ ಕೆಲವು ಲಕ್ಷಣಗಳಿವೆ. ಅವೆಂದರೆ ಪೌರಾಣಿಕ ನಾಟಕಗಳನ್ನು ಆಡುವುದು ಆದರೆ ಕಂಪನಿಯಾಗಿ ಊರೂರು ಸುತ್ತುವುದಿಲ್ಲ. ಆಯಾಯ ಊರಿನವರು ಸೇರಿ ವಿಶೇಷ ಸಂದರ್ಭದಲ್ಲಿ ಈ ನಾಟಕಗಳನ್ನು ಸಂಘಟಿಸುತ್ತಾರೆ. ಹೀಗೆ ವಿಶೇಷ ಸಂದರ್ಭದಲ್ಲಿ ತಾತ್ಕಾಲಿಕವಾಗಿ ಸಂಘಟನೆಗೊಳ್ಳುವ ಈ ಊರಿನ ಮಟ್ಟಿಗೆ ಆಡುವ ನಾಟಕಗಳು ಮಾತ್ರ ಪೌರಾಣಿಕವಾಗಿರುತ್ತವೆ. ಎರಡನೆಯದಾಗಿ, ಎರಡನೆಯದಾಗಿ ಪೌರಾಣಿಕ ಹವ್ಯಾಸಿ ರಂಗಭೂಮಿಯು ವೃತ್ತಿರಂಗಭೂಮಿಯ ಲಕ್ಷಣಗಳಲ್ಲಿ ಒಂದು ಲಕ್ಷಣ ಒಳಗೊಂಡಿದೆ. ಅದೆಂದರೆ ಅವಕಾಶ ಸಿಕ್ಕಾಗ ಸಂದರ್ಭಾನುಸಾರ ನಾಟಕ ಆಡುವುದು, ನಾಟಕವನ್ನು ಒಂದು ವೃತ್ತಿಯಾಗಿ ಮಾಡದೇ ಇರುವುದಾಗಿದೆ.

ಮೂರನೆಯದಾಗಿ, ಪೌರಾಣಿಕ ಹವ್ಯಾಸಿ ರಂಗಭೂಮಿಯು ಬಯಲಾಟ, ಸಣ್ಣಾಟಗಳನ್ನು ಹಾಡುವ ಜನಪದ ರಂಗಭೂಮಿಯ ಲಕ್ಷಣದಲ್ಲಿ ಒಂದು ಲಕ್ಷಣ ಒಳಗೊಂಡಿದೆ. ಅದೆಂದರೆ ಪೌರಾಣಿಕ ಹವ್ಯಾಸಿ ರಂಗಭೂಮಿಯಲ್ಲಿ ಆಡುವ ಜನರು ಹಳ್ಳಿಯ ಜನಪದರೇ ಆಗಿರುತ್ತಾರೆ. ಬಯಲಾಟ, ಸಣ್ಣಾಟಗಳಂತೆ ಇಲ್ಲಿಯೂ ಕೂಡ ಲಿಖಿತವಾದ, ಮುದ್ರಿತವಲ್ಲದ ನಾಟಕದ ಪಠ್ಯವಿರುತ್ತದೆ. ಹಾಗೂ ಲಿಖಿತವಾದ ಮತ್ತು ಮುದ್ರಿತವಾದ ರಂಗಗೀತೆಗಳು ಇರುತ್ತವೆ.

ಈ ಮೇಲ್ಕಾಣಿಸಿದ ಎಲ್ಲಾ ವಿಷಯಗಳನ್ನು ಒಳಗೊಂಡ ರಂಗಭೂಮಿಯನ್ನು ಪೌರಾಣಿಕ ಹವ್ಯಾಸಿ ರಂಗಭೂಮಿ ಎಂದು ಕರೆಯಲಾಗಿದೆ.

ಅಧ್ಯಾಯ - ಎರಡು

ಬಳ್ಳಾರಿ ಜಿಲ್ಲೆಯ ರಂಗ ಪರಂಪರೆಯ ಸಂಕ್ಷಿಪ್ತ ಇತಿಹಾಸ

೨.೧. ನಟರು

೨.೨. ನಾಟಕ ಮಂಡಳಿಗಳು

೨.೩. ಪ್ರಮುಖ ರಂಗ ಕವಿಗಳು

ಅಧ್ಯಾಯ - ಎರಡು

ಬಳ್ಳಾರಿ ಜಿಲ್ಲೆಯ ರಂಗ ಪರಂಪರೆಯ ಸಂಕ್ಷಿಪ್ತ ಇತಿಹಾಸ

ವೃತ್ತಿ ಜಾನಪದ ಹವ್ಯಾಸಿ ರಂಗಪ್ರಕಾರಗಳ ಸಂಗಮಧಾಮವಾದ ಬಳ್ಳಾರಿ ಜಿಲ್ಲೆಯಲ್ಲಿ ಶತಮಾನದ ಕಾಲದಿಂದಲೂ ದಾಖಲಾತಿ ರಂಗ ಪ್ರದರ್ಶನಗಳು ಮತ್ತು ಬೆಳವಣಿಗೆಗಳು ಏರ್ಪಟ್ಟು ರಂಗಭೂಮಿಯ ಸೆಲೆಯು ಬತ್ತಿಹೋಗದಂತೆ ನಿಗಾವಹಿಸಿ ಸಾಗಿಬಂದಿರುವುದು ಸಮಾಧಾನಕರ ಸಂಗತಿಯಾಗಿದೆ. ಇಲ್ಲಿನ ಕನ್ನಡ ಭಾಷೆಯ ವಿಶಿಷ್ಟ ಪ್ರಾದೇಶಿಕ ಸೊಗಡು, ಶ್ರೀಮಂತಿಕೆ ಮತ್ತು ಕಾವ್ಯಾತ್ಮಕತೆ ರಂಗಭೂಮಿಯ ಅನನ್ಯತೆಗೆ ಕಾರಣವಾಗಿದೆ. ಒಂದು ಕಾಲದಲ್ಲಿ ಮೈಸೂರನ್ನು ಬಿಟ್ಟರೆ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತಿದ್ದುದು ಬಳ್ಳಾರಿಯಲ್ಲಿಯೇ ಎಂಬ ದಿವಂಗತ ಡಾ.ಜೋಳದರಾಶಿ ದೊಡ್ಡನ ಗೌಡರ ಮಾತು ಉಲ್ಲೇಖನೀಯವಾದುದು.

“ವಿಜಯನಗರದ ಅರಸರು ನಾಟಕ ಕಲೆಯ ಉಗಮ ಹಾಗೂ ಉಚ್ಛ್ರಾಯಕ್ಕೆ ಕಾರಣರಾದರು. ರಾಜಧಾನಿಯಲ್ಲಿ ನಾಟಕ ಶಾಲೆಗಳಿದ್ದು ರಂಗ ಪ್ರದರ್ಶನಗಳಾಗುತ್ತಿದ್ದವು. ಕರ್ನಾಟಕ ರಾಜ್ಯ ರಮಾರಮಣ ಶ್ರೀಕೃಷ್ಣದೇವರಾಯನ ‘ಜಾಂಬವತಿಕಲ್ಯಾಣ’ವನ್ನು ಪಂಪಾಪತಿ ಮಹೋತ್ಸವದಲ್ಲಿ ಅಭಿನಯಿಸಲಾಗುತ್ತಿದ್ದುದಾಗಿ ತಿಳಿದುಬರುತ್ತದೆ. ೧೯ನೆಯ ಶತಮಾನದ ಪಶ್ಚಿಮಾರ್ಧದಲ್ಲಿಯೇ ಇಲ್ಲಿ ವೃತ್ತಿ ನಾಟಕ ಯುಗವು ಪ್ರಾರಂಭವಾಗಿ ತನ್ನ ನಿರ್ದಿಷ್ಟ ನೆಲೆಯನ್ನು ಕಂಡುಕೊಳ್ಳಲೆತ್ನಿಸಿತು. ಸುಮಾರು ೧೮೭೦ರಲ್ಲಿಯೇ ನಾಟಕಕಾರ ಮತ್ತು ನಟರಾಗಿದ್ದ ಬಳ್ಳಾರಿಯ ವೆಂಕಟಾಚಾರ್ಯರು ಮತ್ತು ಆದವಾನಿಯ ತುಳಸೀ ರಾಮಾಚಾರ್ಯರು ಮುಂತಾದವರು ನಾಟಕ ಕಂಪನಿಯನ್ನು ಸ್ಥಾಪಿಸಿ ನಡೆಸುತ್ತಿದ್ದರು. ಕಂಪನಿಯು ‘ಕೃಷ್ಣಾರ್ಜುನರ ಕಾಳಗ’, ‘ಕೀಚಕವಧೆ’ ಮತ್ತು ‘ಹರಿಶ್ಚಂದ್ರ’ ಮುಂತಾದ ಕನ್ನಡ ನಾಟಕಗಳನ್ನು ಬಳ್ಳಾರಿ ಪ್ರಾಂತ್ಯಾದ್ಯಂತ ಪ್ರದರ್ಶಿಸುತ್ತ ಪ್ರಸಿದ್ಧಿಯಾಗಿದ್ದಿತು. ಈ ಮಂಡಳಿಯಲ್ಲಿ ಖ್ಯಾತನಟ ಭಟ್ಟಪ್ಪ ಮತ್ತು ಹರಿಶ್ಚಂದ್ರ ಪಾತ್ರದ ಖ್ಯಾತ ಗಾಯಕನಟ ಬಳ್ಳಾರಿ ಬಸಪ್ಪನವರು ಇದ್ದರು. ೧೮೮೪-೮೫ರಲ್ಲಿ ಮೈಸೂರಿನಿಂದ ಮಹಾರಾಜಾ ಕಂಪನಿ (ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ

[illegible]

[illegible]

[illegible]

ಸಭಾ) ಮತ್ತು ರಂಗಚಾರ್ಲು ನಾಟಕ ಕಂಪನಿಯು ಬಳ್ಳಾರಿಗೆ ಆಗಮಿಸಿ ನಾಟಕಗಳನ್ನಾಡಿ ಪ್ರಭಾವ ಬೀರಿದುದು ಐತಿಹಾಸಿಕ ಸಂಗತಿಯಾಗಿದೆ. ಮೈಸೂರು ರಾಜ್ಯದ ಶಿಲ್ಪಿಗಳಲ್ಲಿ ಒಬ್ಬರಾದ ದಿವಾನ್ ಸಿ.ರಂಗಾಚಾರ್ಲುರವರ ಪ್ರೋತ್ಸಾಹದಿಂದ ಸ್ಥಾಪನೆಗೊಂಡ 'ಶಾಕುಂತಲ ನಾಟಕ' ಕಂಪನಿಯು ಇಲ್ಲಿಗೆ ಆಗಮಿಸಿ ಬಳ್ಳಾರಿಯ ಕಲಾಪ್ರೇಮಿಗಳಿಗೆ ರಸದೌತಣವನ್ನು ಉಣಬಡಿಸಿದ್ದಿತು."[೧]

"ಸಂಗೀತ, ಸಾಹಿತ್ಯ ಮತ್ತು ನಾಟಕ ಕಲೆಯಲ್ಲಿ ವಿಶೇಷ ಆಸಕ್ತಿಯನ್ನು ತಳೆದಿದ್ದ ಕೊಟ್ಟೂರಿನ ಮುಖಂಡರಾದ ಜಾಗಟಗೇರಿ (ಜಗತೇರಿ) ವೀರಭದ್ರಪ್ಪನವರು ನುರಿತ ಕಲಾವಿದರನ್ನು ಒಗ್ಗೂಡಿಸಿ ೧೯೧೨ರಲ್ಲಿ ಸರಸ್ವತಿ ನಾಟಕ ಸಭಾ ಎಂಬ ವೃತ್ತಿ ಕಂಪನಿಯನ್ನು ಕಟ್ಟಿ ನಾಡಿನಾದ್ಯಂತ ಪ್ರದರ್ಶನಗಳಿಗೆ ನಾಂದಿಯಾಡಿದ್ದರು. ಅವರು ಹೃದಯ ಶ್ರೀಮಂತಿಕೆಯ ವ್ಯಕ್ತಿಯಾಗಿ ಮತ್ತು ಕಂಪನಿಯ ಆದರ್ಶಪ್ರಾಯ ಯಜಮಾನರಾಗಿ ಹೆಸರು ಗಳಿಸಿದ್ದರು. ವೈ. ನಾಗೇಶಶಾಸ್ತ್ರಿಗಳು ಬರೆದ 'ಶ್ರೀ ಕೊಟ್ಟೂರೇಶ್ವರ ಮಹಿಮೆ' ನಾಟಕವನ್ನು ಆಡಿ ಜನಪ್ರಿಯತೆಗಳಿಸಿದ್ದರು. ಪಂಡಿತ ವೈ. ನಾಗೇಶಶಾಸ್ತ್ರಿಗಳು ಬಳ್ಳಾರಿಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಬದುಕಿನ ಕಲ್ಪವೃಕ್ಷದಂತಿದ್ದರು. ಅವರು ಶ್ರೀ ಮದ್ರಾಂಮಾಂಜನೇಯ ಲಿಂಗಧಾರಣ, ವಜ್ರಾಂಗುಳೀಯ, ಮಲ್ಹಣ, ಮೈರಾವಣ ಚರಿತ್ರೆ, ವಿಜಯನಗರರಾಭ್ಯುದಯ ಮತ್ತು ಪಂಪಾಂಬಿಕ ಪರಿಣಯ ನಾಟಕಗಳನ್ನು ಬರೆದು ಪ್ರಸಿದ್ಧಿ ಪಡೆದರು. ಸರಸ್ವತಿ ನಾಟಕ ಸಭಾವು ಹೇಮರೆಡ್ಡಿ ಮಲ್ಲಮ್ಮ, ಸತಿಸಾವಿತ್ರಿ, ಚಿತ್ರಾಂಗದಾ ಮತ್ತು ಕುರುಕ್ಷೇತ್ರ ಮುಂತಾದ ನಾಟಕಗಳನ್ನು ಅಭಿನಯಿಸುತ್ತಿದ್ದಿತು."[೨]

ಹೀಗೆ ಬಳ್ಳಾರಿ ಜಿಲ್ಲಾ ರಂಗಪರಂಪರೆಯು ಹಲವು ನಾಟಕ ಕಂಪನಿಗಳ ಪ್ರಭಾವ ಹಾಗೂ ಬೇರೆ ಬೇರೆ ನಟರ ಪ್ರಭಾವದಿಂದ ಬಳ್ಳಾರಿ ಜಿಲ್ಲೆಯ ನಟರು ನಾಟಕ ಬರೆದು ನಾಟಕ ಕಂಪನಿಗಳನ್ನು ಪ್ರಾರಂಭಿಸಲು ದಾವಣಗೆರೆಯ ಶ್ರೀಗುರು ಕೆ.ಬಿ.ಆರ್.ಡ್ರಾಮಾ ಕಂಪನಿಯ ತನ್ನ ಮೊದಲ ಹೆಸರಾದ 'ಶ್ರೀ ಕರಿಬಸವೇಶ್ವರ ನಾಟಕ ಮಂಡಳಿ' ಹೆಸರಿನಲ್ಲಿ ಪ್ರಾರಂಭವಾದುದು ಬಳ್ಳಾರಿ ಜಿಲ್ಲೆಯ ಕೊಟ್ಟೂರಿನಲ್ಲಿ. ೧೯೨೮ರಲ್ಲಿ ಕೊಟ್ಟೂರಿನ ಸರಸ್ವತಿ ನಾಟಕ ಸಭಾ ಮತ್ತು ಬಸವೇಶ್ವರ ನಾಟಕ ಮಂಡಳಿ ಹೆಸರಾದವು.

"ವಕೀಲ ಧರ್ಮಾವರಂ ಕೃಷ್ಣಮಾಚಾರ್ಯರ ಸಹೋದರ ಧರ್ಮಾವರಂ ಗೋಪಾಲಚಾರ್ಯರು ಒಂದು ಕನ್ನಡ ನಾಟಕವನ್ನು ಬರೆದು ಅದನ್ನು ಮಿತ್ರರೊಂದಿಗೆ ಅಭಿನಯಿಸಿದರಾದರೂ ಯಶಸ್ವಿಯಾಗಲಿಲ್ಲವೆಂದೂ ತಿಳಿದುಬರುತ್ತದೆ. ಆದರೆ ಧರ್ಮಾವರಂ ಕೃಷ್ಣಮಾಚಾರ್ಯರು 'ಬಾಣಸುರ'ವೆಂಬ ಕನ್ನಡ ನಾಟಕವನ್ನು ಬರೆದು ಪ್ರದರ್ಶಿಸಿ ಯಶಸ್ಸನ್ನು ಕಂಡರು. ಅನಂತರ ಅವರು ೨೮ ತೆಲುಗು ನಾಟಕಗಳ ಕರ್ತೃವಾಗಿ 'ಆಂಧ್ರನಾಟಕ ಪಿತಾಮಹ'ರೆನಿಸಿಕೊಂಡರು. ಅವರ ಮೊದಲ ಕನ್ನಡ ನಾಟಕವಾದ 'ಸ್ವಪ್ನಅನಿರುದ್ಧದ' ಮುನ್ನುಡಿಯಲ್ಲಿ ಕನ್ನಡ ಭಾಷೆಯನ್ನು ಕುರಿತು ಬಹಳ ಅಭಿಮಾನದ ಮಾತುಗಳನ್ನಾಡಿದರು. ತಾವು ಕನ್ನಡದಲ್ಲಿ ಪರಿಣಿತರಲ್ಲದಾಗ್ಯೂ ತಮ್ಮ ಮಿತ್ರರು ವ್ಯಕ್ತಪಡಿಸಿದಂತೆ ಕನ್ನಡ ಭಾಷೆಯು ಮಾತ್ರ ರಂಗಕ್ಕೆ ಸೂಕ್ತವೆಂಬುದನ್ನು ಅರಿತು ನಾಟಕ ರಚಿಸಿದುದಾಗಿ ತಿಳಿಸಿರುವರು. ಅವರು ಸ್ವತಃ ಉದ್ದಾಮ ನಟರೂ ಆಗಿದ್ದು, ಬಳ್ಳಾರಿ ನಗರದ ಗಣ್ಯರೊಡನೆ 'ಸರಸವಿನೋದಿನಿ ನಾಟಕ ಸಭಾ' (ಸ್ಥಾಪನೆ: ೧೮೮೫) ಎಂಬ ಅಮೆಚ್ಯೂರ್ ನಾಟಕ ಸಂಘವನ್ನು ಹೊಂದಿದ್ದರು. ಇವರಂತೆಯೇ

ಪ್ರಸಿದ್ಧವಕೀಲ, ನಾಟಕಕಾರ ನಿರ್ಮಾಪಕ ಹಾಗೂ ರಂಗಕಲಾವಿದರಾಗಿದ್ದ ಕೋಲಾಚಲಂ ಶ್ರೀನಿವಾಸರಾವ್‌ರವರು 'ಸುಮನೋರಮ ಸಭೆ' ಎಂಬ ಸಂಸ್ಥೆಯನ್ನು ಹೊಂದಿದ್ದು 'ವಿಜಯನಗರಪತನ' ಮತ್ತು 'ಹರಿಶ್ಚಂದ್ರ' ನಾಟಕಗಳನ್ನು ರಚಿಸಿ ಆಡುತ್ತಿದ್ದರು. ಇದನ್ನು ೧೯೦೨ರಲ್ಲಿ ಲೋಕಮಾನ್ಯ ಬಾಲಗಂಗಾಧರ ತಿಲಕರು ಉದ್ಘಾಟನೆ ಮಾಡಿದರು ಎನ್ನಲಾಗಿದೆ. ಹೊಸಪೇಟೆಯ ಅಚ್ಚಗನ್ನಡಿಗ ಸಿ.ಹನುಮಂತಗೌಡರು ಇದರ ಸಹಾಯಕರಾಗಿದ್ದರು. ಇವರೀರ್ವರ ನಾಟಕಗಳು ಮುದ್ರಣಯೋಗ ಕಂಡಿದ್ದವು. ಅದಲ್ಲದೆ ಇಬ್ಬರೂ ನಾಟಕ ಶಾಲೆಯನ್ನು ನಿರ್ಮಿಸಿ ನಡೆಸುತ್ತಿದ್ದರು. ಶ್ರೀನಿವಾಸ್‌ರಾವ್‌ರವರು ೧೯೦೮ರಲ್ಲಿ 'ದಿ ಡ್ರಮಾಟಿಕ್ ಹಿಸ್ಟರಿ ಆಫ್ ದಿ ವರ್ಲ್ಡ್' ಎಂಬ ಅತ್ಯಮೂಲ್ಯ ಗ್ರಂಥವನ್ನು ಬರೆದಿರುವರು."[೩]

ಒಟ್ಟಾರೆಯಾಗಿ ಬಳ್ಳಾರಿ ಜಿಲ್ಲಾ ರಂಗ ಪರಂಪರೆಯು ಈ ರೀತಿಯಾಗಿ ಬೆಳೆದು ಬಂದು ಮುಂದೆ ಬಳ್ಳಾರಿ ಜಿಲ್ಲಾ ರಂಗಭೂಮಿಯ ಇತಿಹಾಸದಲ್ಲಿ ನಾಟ್ಯಕಲಾ ಪ್ರಪೂರ್ಣ ಬಳ್ಳಾರಿ ರಾಘವಾಚಾರ್ಯರಂತವರು 'ಸರಸ ವಿನೋದಿನಿ ನಾಟಕ ಸಭಾ'ದಲ್ಲಿ ಕೆಲವು ಕಾಲ ಅಭಿನಯಿಸಿ ದೊಡ್ಡ ಹೆಸರಾಗಿ ಬಾಳಿ ಬೆಳಗಿದವರಾಗಿದ್ದಾರೆ.

೨.೧. ನಟರು

ನಾಟಕ ಸಾರಸ್ವತ ಲೋಕಕ್ಕೆ ಸಹಸ್ರಾರು ಕಲಾವಿದರು ಬದುಕಿ ಬಾಳಿದ್ದು ಗಮನಾರ್ಹವಾದುದು. ಕಲೆ ಕವಲೊಡೆಯಬೇಕಾದರೆ ಆಸಕ್ತಿ, ಶ್ರದ್ಧೆಯು ನೀರಾಗಬೇಕಾಗುತ್ತದೆ. ನಟನೆ ಮೈಗೂಡಬೇಕಾದರೆ ಕಲಾವಿದ ಅದನ್ನು ಆರಾಧಿಸಬೇಕಾಗುತ್ತದೆ. ವೇದಿಕೆಯ ಮೇಲೆ ಪಾತ್ರ ಮಾಡಿ ನಾಟಕಗಳಿಗೆ ಜೀವ ತುಂಬುವ ಕಲಾವಿದರ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ. ವೃತ್ತಿ ಪರಂಪರೆ ಹವ್ಯಾಸಿಗರು, ಅರೆವೃತ್ತಿ ಕಲಾವಿದರು ಬಳ್ಳಾರಿ ಜಿಲ್ಲೆಯ ರಂಗಭೂಮಿಯನ್ನು ಪ್ರಜ್ವಲಗೊಳಿಸಿದ್ದಾರೆ.

ಅಭಿಮಾನವನ್ನೇ ಜೀವನವನ್ನಾಗಿಸಿಕೊಂಡು ಬದುಕುವ ಮಾರ್ಗವನ್ನು ಕಂಡುಕೊಂಡ ಕಲಾವಿದರೆಷ್ಟೋ ಬಳ್ಳಾರಿ ಜಿಲ್ಲೆಯಲ್ಲಿ ಆಗಿ ಹೋಗಿದ್ದಾರೆ. ಅಂತಹವರಲ್ಲಿ ಪ್ರಮುಖವಾಗಿ ಕೊಟ್ಟೂರು ಬಸವಯ್ಯ, ಬಳ್ಳಾರಿಯ ರಾಘವ, ಜೋಳದರಾಶಿ ದೊಡ್ಡನಗೌಡರು, ವೈ.ಎಂ.ಚಂದ್ರಯ್ಯ ಬೆಳಗಲ್ ವೀರಣ್ಣ, ಎಲಿವಾಳ ಸಿದ್ಧಯ್ಯ, ಏಣಗಿ ಕಾಸಿಂಸಾಬ್, ಡಿ.ದುರ್ಗಾದಾಸ್, ಹಣ್ಣೆ ವೀರಭದ್ರಪ್ಪ, ಹೊಸಪೇಟೆ ಕೆ.ಶ್ರೀಶೈಲಪ್ಪ, ಹೆಚ್.ಮರಿಯಣ್ಣ, ಎಂ.ಪಿ.ಪ್ರಕಾಶ್, ಕೆ.ಜಂಬುನಾಥ, ಬಳ್ಳಾರಿ ಲಲಿತಮ್ಮ, ಸುಭದ್ರಮ್ಮ ಮನ್ಸೂರು, ಕೆ.ನಾಗರತ್ನಮ್ಮ, ಸೋಗಿರತ್ನ, ಮ.ಬ.ಸೋಮಣ್ಣ ಮುಂತಾದ ನಟರಿದ್ದಾರೆ. ಆದರೆ ಅಧ್ಯಯನದ ದೃಷ್ಟಿಯಿಂದ ಕೆಲ ಮುಖ್ಯ ನಟರನ್ನು ಆಯ್ಕೆ ಮಾಡಿಕೊಂಡು ಈ ಅಧ್ಯಯನದಲ್ಲಿ ನಿರೂಪಿಸಲಾಗಿದೆ.

೧. ಕೊಟ್ಟೂರು ಬಸವಯ್ಯ

ಇವರ ಹೆಸರನ್ನು ಕನ್ನಡನಾಡಿನಲ್ಲಿ ಕೇಳದವರೇ ವಿರಳ. ಕರ್ಣ ಎಂದರೆ ಕೊಟ್ಟೂರು ಬಸವಯ್ಯ, ಬಸವಯ್ಯ ಎಂದರೆ ಕರ್ಣ ಎನ್ನುವಷ್ಟು ಜನಪ್ರಿಯತೆಗಳಿಸಿದ್ದರು. ಅವರ ಕರ್ಣನ ಪಾತ್ರ 'ದಾನಶೂರ

ಕರ್ಣ' ನಾಟಕದ ಧ್ವನಿಮುದ್ರಿಕೆಗಾಗಿ ಅವರು ಹಾಡಿದ 'ಪರಮಾತ್ಮಾ ಹರೇ' ಎಂಬ ಹಾಡು ಇಂದಿಗೂ ಹಳ್ಳಿಗಳ ಪ್ರಮುಖ ಕಾರ್ಯಕ್ರಮಗಳಲ್ಲಿ ಮದುವೆ ಮನೆಗಳ ಸಮಾರಂಭಗಳಲ್ಲಿ ಪ್ರತಿಧ್ವನಿಸುತ್ತಿರುತ್ತದೆ. ಕರ್ಣನ ಪಾತ್ರದಲ್ಲಿ ಅವರು ತೋರುತ್ತಿದ್ದ ಅಪೂರ್ವಸಿದ್ಧಿ, ಅದ್ವಿತೀಯ ಕಲಾ ಪ್ರೌಢಿಮೆಯಿಂದಾಗಿ ಕನ್ನಡ ರಂಗಭೂಮಿಯ ಅತ್ಯಂತ ಜನಪ್ರಿಯ ಕಲಾವಿದರೆನಿಸಿದ್ದರು.

" ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲೂಕಿನ ಸೋಗಿ ಗ್ರಾಮದಲ್ಲಿ ಜನಿಸಿದರು. ಅತ್ಯಂತ ಭಾವುಕವಾದ ನಿರೂಪಣೆ, ಮೋಹಕವಾದ ಕಂಠಶ್ರೀ, ಸಜೀವವಾದ ಪಾತ್ರಾಭಿನಯ, ಉತ್ಸಾಹಪೂರ್ಣ ಕಲಾಶ್ರದ್ಧೆ ಇವುಗಳಿಂದ ಕನ್ನಡ ರಂಗಭೂಮಿಯ ಪ್ರತಿಭಾನ್ವಿತ ನಟರೆನಿಸಿಕೊಂಡಿದ್ದರು. ಅವರು ಬದುಕಿನ ಕ್ಲೇಶ ಕಷ್ಟಗಳಿಗೆ ಜಗ್ಗದೆ, ವಯಸ್ಸಿನ ಭಾರಕ್ಕೆ ಬಾಗದೆ ಯೌವನೋತ್ಸಾಹದಿಂದ ಏಳು ದಶಕಗಳ ಪರ್ಯಂತ ಕನ್ನಡ ರಂಗಭೂಮಿಯ ಸೇವೆಯನ್ನು ಸಲ್ಲಿಸಿದರು. ಪುರಾಣ ಪ್ರಸಿದ್ಧರಾದ ಮಹಾವ್ಯಕ್ತಿಗಳ ಪಾತ್ರಗಳನ್ನು ಪ್ರೇಕ್ಷಕರ ಮನಸ್ಸಿನಲ್ಲಿ ಕಡೆದು ನಿಲ್ಲಿಸುತ್ತಿದ್ದ ಅವರು ಸಂಸ್ಕೃತದ ಜೊತೆಗೆ ಜೈಮಿನಿ ಭಾರತ, ರಾಜಶೇಖರವಿಳಾಸವನ್ನೂ ಶೃತಿ, ಲಯಗಳನ್ನು ಅನುಸರಿಸಿ ಹಾಡುತ್ತಿದ್ದರು. ಸಣ್ಣ ವಯಸ್ಸಿನಲ್ಲೇ ಈ ರೀತಿ ಹಾಡುವ ಇವರ ನೈಪುಣ್ಯತೆ ಅನೇಕರಿಗೆ ಅಚ್ಚರಿ ತಂದಿತ್ತು. ಸ್ತ್ರೀ ಪಾತ್ರ ಮಾಡುವುದರಲ್ಲಿ ಹಾರ್ಮೋನಿಯಂ, ಸಿತಾರ್ ಮತ್ತು ಪಿಟೀಲು ವಾದ್ಯ ನುಡಿಸುವುದರಲ್ಲಿ ಪ್ರಾವೀಣ್ಯತೆಯನ್ನು ಗಳಿಸಿಕೊಂಡಿದ್ದರು.

ಕಂಪನಿ ನಾಟಕಗಳೊಂದಿಗೆ ಗದಗ, ಹುಬ್ಬಳ್ಳಿ, ಧಾರವಾಡ, ಮೈಸೂರು, ಮಂಗಳೂರು, ಬೆಂಗಳೂರು, ಬೆಳಗಾವಿ, ಮದರಾಸು ಇತ್ಯಾದಿ ಊರುಗಳನ್ನು ಸುತ್ತಿ ಕೊಟ್ಟೂರಪ್ಪನವರು ದೀರ್ಘಕಾಲ ಕಲಾ ಸೇವೆ ಸಲ್ಲಿಸಿದರು. ಪ್ರೌಢರಾದಂತೆ ರಂಗಾಸಕ್ತಿ ಹೆಚ್ಚು ಕಾಲ ಹೋಗಿ ವೆಂಕೋಬರಾಯರ ಶ್ರೀ ಮಹಾಲಕ್ಷ್ಮಿ ನಾಟಕ ಸಭಾವನ್ನು ಸೇರಿಕೊಂಡರು. ಅದು ನಿಂತು ಹೋದಾಗ ಪುನಃ 'ಚಾಮುಂಡೇಶ್ವರಿ ಕಂಪನಿ'ಗೆ ಸೇರಿ ಅಭಿನಯಕ್ಕೆ ಅಂಟಿಕೊಂಡರು. ಎರಡು ಕಂಪನಿಗಳಲ್ಲಿ ಇದ್ದು ಕೊಂಡು ಬಸವಯ್ಯನವರು 'ದಾನಶೂರಕರ್ಣ', 'ರಾಜಸೂಯಯಾಗ', 'ಶಾಕುಂತಲಾ', 'ಕುರುಕ್ಷೇತ್ರ' ಮೊದಲಾದ ನಾಟಕಗಳಲ್ಲಿ ಕರ್ಣ, ಆಂಜನೇಯ, ನಾರದ ಮೊದಲಾದ ಪಾತ್ರಗಳನ್ನು ಸಮರ್ಥ ರೀತಿಯಲ್ಲಿ ನಿರ್ವಹಿಸಿ 'ಶ್ರೇಷ್ಠನಟ' ಎಂಬ ಕೀರ್ತಿಗೆ ಭಾಜನರಾದರು. ಕರ್ಣನ ಪಾತ್ರದಲ್ಲಂತೂ ಅವರು ತೋರುತ್ತಿದ್ದ ತನ್ಮಯತೆ, ಅಭಿನಯ, ಹಾಡುಗಾರಿಕೆ ಅವರನ್ನು "ಕನ್ನಡ ರಂಗಭೂಮಿಯ ಅಭಿನವ ಕರ್ಣ" ಎಂಬ ಪ್ರಶಂಸೆಗೆ ಪಾತ್ರರನ್ನಾಗಿಸಿತು. ಶ್ರೀಯುತರ ಅಖಂಡ ಕಲಾ ಸೇವೆಯನ್ನು ಮೆಚ್ಚಿ ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿಯು ೧೯೬೪-೬೫ರಲ್ಲಿ ಪ್ರಶಸ್ತಿ ನೀಡಿ ಸನ್ಮಾನಿಸಿದೆ."[೪]

೨. ಬಳ್ಳಾರಿ ರಾಘವ

ಕನ್ನಡ ನಾಡಿನ ಕಲಾವಿದರೊಬ್ಬರಾದ ಬಳ್ಳಾರಿ ರಾಘವರು ವಿಶ್ವವಿಖ್ಯಾತ ನಾಟಕಕಾರರಾದ ಬರ್ನಾರ್ಡ್‌ಷಾ ಅವರಿಂದ ಪ್ರಶಂಸೆಯನ್ನು ಪಡೆದು, ಕನ್ನಡ ರಂಗಭೂಮಿಗೆ ಸೇವೆಸಲ್ಲಿಸಿದ 'ನಾಟ್ಯ ಯೋಗಿ'ಯೆಂದು ಕೀರ್ತಿಪಡೆದ್ದಿದ್ದಾರೆ. ಕನ್ನಡ ರಂಗಭೂಮಿಯಲ್ಲಷ್ಟೇ ಅಲ್ಲ, ತೆಲುಗು ಹಾಗೂ

ಇಂಗ್ಲೀಷ್ ಭಾಷೆಗಳಲ್ಲಿ ನಾಟಕಗಳನ್ನಾಡಿ ಕರ್ನಾಟಕ ಹಾಗೂ ಭಾರತದ ರಂಗಭೂಮಿಯ ಕೀರ್ತಿಯನ್ನು ಬೆಳಗಿದವರು ಬಳ್ಳಾರಿ ರಾಘವರು.

"ಇವರ ತಂದೆ ನರಸಿಂಹಾಚಾರ್ಯರು ಬಳ್ಳಾರಿಯ ಮುನಿಸಿಪಲ್ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದರು. ಇವರ ತಾಯಿ ಶೇಷಮ್ಮನವರು ದೈವಭಕ್ತರೂ, ಸಾತ್ವಿಕ ಸ್ವಭಾವದವರೂ ಆದ ಈ ದಂಪತಿಗಳಿಗೆ ಬಹಳಕಾಲ ಸಂತಾನವಿರಲಿಲ್ಲ. ಬಳ್ಳಾರಿಯಲ್ಲಿದ್ದ ಬಸವಪ್ಪನವರೆಂಬ ಅವಧೂತರೊಬ್ಬರ ಅನುಗ್ರಹದಿಂದ ಇವರು ೦೨.೦೮.೧೮೮೦ರಂದು ಜನಿಸಿದರು. ಇವರಿಗೆ ಬಸಪ್ಪನೆಂದೇ ಹೆಸರಿಟ್ಟರು. ಕಾಲ ಕ್ರಮೇಣ ಮುದ್ದಿಗಾಗಿ ರಾಘವನೆಂದು ಕರೆದರು. ಅದೇ ಹೆಸರು ಉಳಿಯಿತು. ರಾಘವರ ಅನಂತರ ಅವರಿಗೆ ಇಬ್ಬರು ಸೋದರರೂ ಒಬ್ಬಳು ತಂಗಿಯೂ ಜನಿಸಿದರು.

ಉಪಾಧ್ಯಾಯರಾಗಿದ್ದ ನರಸಿಂಹಾಚಾರ್ಯರಿಗೆ ತನ್ನ ಮಗ ದೊಡ್ಡ ವಕೀಲನಾಗಬೇಕೆಂಬ ಹಂಬಲ, ಅದರಂತೆ ಅವರಿಗೆ ಇಂಗ್ಲೀಷ್ ಕಲಿಸಿದರು. ಚುರುಕು ಬುದ್ಧಿಯ ರಾಘವರು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಎಫ್.ಎ.ಹಾಗೂ ಬಿ.ಎ.ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಎಲ್.ಎಲ್.ಬಿ ಪರೀಕ್ಷೆಯನ್ನೂ ಮುಗಿಸಿದರು; ತಂದೆಯ ಆಸೆಯನ್ನು ನೆರವೇರಿಸಿದರು.

ವಿದ್ಯಾರ್ಥಿ ದೆಸೆಯಲ್ಲಿ ಇದ್ದಾಗಲೇ ರಾಘವರಿಗೆ ನಾಟಕಗಳಲ್ಲಿ ಆಸಕ್ತಿ ಇತ್ತು. ಅವರು 'ಡಾಕ್ಟರ್ ಅಂಡ್ ಅಪಾತರಿ' ಎಂಬ ಇಂಗ್ಲೀಷ್ ನಾಟಕದಲ್ಲಿ ಅಭಿನಯಿಸಿದ್ದರು. ಅಲ್ಲದೆ ಮದರಾಸಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ 'ಬಾಂಬೆ ಪಾರ್ಸಿ ಥಿಯೇಟ್ರಿಕಲ್ ಕಂಪನಿ'ಯ ಪ್ರದರ್ಶನಗಳನ್ನು ನೋಡಿದ್ದರು. ದಾದಾಭಾಯಿ ಮಿಸ್ತ್ರಿ ಅವರ ಅಭಿನಯದಿಂದ ಬಹಳವಾಗಿ ಪ್ರಭಾವಿತರಾಗಿದ್ದರು.

ಬಳ್ಳಾರಿಯ ಅಂದಿನ ನಾಟಕ ಕಲಾಭಿರುಚಿಯ ವಾತಾವರಣ ರಾಘವರಲ್ಲಿ ಅಡಗಿದ್ದ ಕಲಾಸಕ್ತಿಗೆ ಪೋಷಕವಾಯಿತು. ರಾಘವರ ಸೋದರ ಮಾವಂದಿರಾದ ಧರ್ಮಾವರಂ ಕೃಷ್ಣಮಾಚಾರ್ಯರು 'ಸರಸ ವಿನೋದಿನಿ ಸಭೆ,' 'ಕೋಲಾಚಲಂ ಶ್ರೀನಿವಾಸರಾಯರು,' 'ಸುಮನೋರಮ ಸಭೆ' ಎಂಬ ನಾಟಕ ಮಂಡಳಿಗಳನ್ನು ನಡೆಸುತ್ತಿದ್ದರು. ಅದರಲ್ಲಿ ರಾಘವರು ಸಾಕಷ್ಟು ವಿಭಿನ್ನ ಪಾತ್ರಗಳಲ್ಲಿ ಅಭಿನಯಿಸಿದರು. ಅಂದು ಬಳ್ಳಾರಿಯಲ್ಲಿ ನಾಟಕ ಕಲೆಗೆ ಬಹಳ ಪ್ರೋತ್ಸಾಹ ದೊರಕುವ ಕಾಲವಾಗಿತ್ತು. ಅಲ್ಲದೆ ೧೮೮೮ರಲ್ಲಿ ಮೈಸೂರಿನ ಮಹಾರಾಜ ಕಂಪನಿ, ರಂಗಾಚಾರ್ಯ ಕಂಪನಿಯ ಪ್ರದರ್ಶನಗಳು ಬಳ್ಳಾರಿಯ ಜನತೆಯ ಮೇಲೆ ಬಹಳವಾಗಿ ಪರಿಣಾಮಕಾರಿಯಾಗಿದ್ದವು.

ನಾಟಕ ಕಲೆಗೆ ದೊರಕುತ್ತಿದ್ದ ಪ್ರೋತ್ಸಾಹ ಬಳ್ಳಾರಿ ನಗರಕ್ಕೆ ಮಾತ್ರ ಸೀಮಿತವಾಗಿರದೇ, ಬಳ್ಳಾರಿ ಜಿಲ್ಲೆಯ ಹಳ್ಳಿ ಹಳ್ಳಿಗಳಲ್ಲೂ ನಾಟಕ ಕಲೆಗೆ ಪ್ರೋತ್ಸಾಹವಿತ್ತು. ಹೊಸಪೇಟೆ, ತೋರಣಗಲ್ಲು ರಾಜಾರಾಯರು, ಚಿತ್ತವಾಡಿಗಿ ರಾವ್‌ಬಹದ್ದೂರ್ ಹನುಮಂತಗೌಡರು, ಪದ್ಮನಾಭ ವೆಂಕೋಬಾಚಾರ್ಯರು, ಬಳ್ಳಾರಿ ಮುನಿಸಿಪಲ್ ಹೈಸ್ಕೂಲಿನ ತೆಲುಗು ಪಂಡಿತರಾದ ಸುಬ್ಬಾಶಾಸ್ತ್ರಿಗಳು ಧರ್ಮಾವರಂ ಗೋಪಾಲಾಚಾರ್ಯರು, ಪಂಡಿತ ವೈ. ನಾಗೇಶ ಶಾಸ್ತ್ರಿಗಳು, ವಿಡುಪನಕಲ್ಲು ಹನುಮಂತಪ್ಪನವರು

ಮೊದಲಾದ ಕವಿಗಳು ನಾಟಕಗಳನ್ನು ರಚಿಸುತ್ತಿದ್ದರು. ಕೆಲವರು ತಮ್ಮ ನಾಟಕಗಳಲ್ಲಿ ಅಭಿನಯಿಸುತ್ತಲೂ ಇದ್ದರು.

"ಪೌರಾಣಿಕ ನಾಟಕಗಳನ್ನೇ ಆಡುತ್ತಿದ್ದ ಆ ಕಾಲದಲ್ಲಿ ಸಾಮಾಜಿಕ ಬದಲಾವಣೆಗಳನ್ನೂ ಅದರ ಲೋಪದೋಷಗಳನ್ನೂ ಬಿಂಬಿಸುವಂತಹ ನಾಟಕಗಳ ಅಗತ್ಯವನ್ನು ರಾಘುವರು ಮನಗಂಡರು. ಕನ್ನಡ ಭಾಷೆಯಲ್ಲಷ್ಟೇ ಅಲ್ಲದೇ ತೆಲುಗಿನಲ್ಲೂ ರಾಘುವರು ಗುರುತಿಸಲ್ಪಟ್ಟರು. ಅನಂತರ ಇಂಗ್ಲೀಷ್ ನಾಟಕಗಳಿಂದ ಈ ರೀತಿ ಪ್ರಭಾವಿತರಾದರೆಂದೇ ಹೇಳಬಹುದು. ವಟ್ಟಂ ಸಹೋದರರ ನೆರವಿನಿಂದ ಬಳ್ಳಾರಿಯಲ್ಲಿ 'ಷೇಕ್ಸ್‌ಪಿಯರ್ ಕ್ಲಬ್'ನ್ನು ಸ್ಥಾಪಿಸಿಕೊಂಡು ಕಿಂಗ್‌ಲಿಯರ್, ಒಥೆಲೋ, ಹ್ಯಾಮ್ಲೆಟ್, ಮ್ಯಾಕ್‌ಬೆತ್ ಮುಂತಾದ ನಾಟಕಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿದ ಕೀರ್ತಿ ರಾಘುವರಿಗೆ ಸಲ್ಲುತ್ತದೆ."[೫]

ಇಂಗ್ಲೀಷ್ ನಾಟಕಗಳ ಜೊತೆಗೆ 'ಭಕ್ತರಾಮದಾಸ್', 'ಸುಭದ್ರ', 'ಸಾರಂಗಧರ', 'ತಾಳಿಕೋಟೆ', 'ಪೃಥ್ವಿರಾಜ್', ಮುಂತಾದ ನಾಟಕಗಳನ್ನು ಪ್ರಯೋಗಿಸಿದರು. ಎಂತಹ ನಟನೆಯಾದರೂ ಅದರಲ್ಲಿ ಮಿಂಚಿಬಿಡುವ ಸಾಮರ್ಥ್ಯ ಅವರಿಗಿದ್ದುದರಿಂದಲೇ ಬೆಂಗಳೂರು ಅಮೇಚೂರ್ ನಾಟಕ ಸಂಘ ಮತ್ತು ಕಲಾವಿಲಾಸಿನಿ ಸಂಘದವರ ವತಿಯಿಂದ ಲಂಡನ್, ರಂಗೂನ್ ಮತ್ತು ಪ್ಯಾರೀಸ್‌ಗಳಲ್ಲಿ ಸಂಚರಿಸಿ ಅನೇಕ ನಾಟಕಕಾರರನ್ನು ಮತ್ತು ಬರ್ನಾರ್ಡ್ ಷಾ, ರಾಬರ್ಟ್‌ಸನ್, ವಿನ್‌ಸ್ಟನ್ ಚರ್ಚಿಲ್ ಮುಂತಾದವರನ್ನು ಭೇಟಿಯಾಗುವ ಅವಕಾಶ ಅವರಿಗೆ ದೊರಕಿತು.

"ಕನ್ನಡ, ತೆಲುಗು, ತಮಿಳು, ಇಂಗ್ಲೀಷ್, ಸಂಸ್ಕೃತ ಮತ್ತು ಹಿಂದಿ ಭಾಷೆಗಳಲ್ಲಿ ಅಪಾರ ಪರಿಶ್ರಮವಿದ್ದ ಅವರು ಈ ಎಲ್ಲ ಭಾಷೆಗಳಲ್ಲಿನ ನಾಟಕಗಳನ್ನು ಪರಿಶೋಧಿಸಿದ್ದರು. ಈ ನಾಟಕಗಳಲ್ಲಿ ಬಗೆ ಬಗೆಯ ಪಾತ್ರಗಳನ್ನು ಸಮರ್ಪಕವಾಗಿ ಅಭಿನಯಿಸಿ ಭಾರತ ದೇಶದ ಅಗ್ರಶ್ರೇಣಿಯ ನಟನೆಂದು ಖ್ಯಾತನಾಮರಾಗಿದ್ದರು. ರಂಗಭೂಮಿಯ ಪಿತಾಮಹ ಶಿಶಿರಕುಮಾರ್ ಚೌದರಿ, ರವೀಂದ್ರನಾಥ ಠಾಕೂರ್ ಮಹಾರಾಷ್ಟ್ರದ ಬಾಲಗಂಧರ್ವ, ಕನ್ನಡದ ಗುಬ್ಬಿ ವೀರಣ್ಣ, ತಮಿಳು ನಾಟಕರಂಗದ ಪಿತಾಮಹ ಮೊದಲಿಯಾರ್ ಮುಂತಾದವರಿಂದ 'ಉತ್ತಮ ನಟ'ನೆಂದು ಹೊಗಳಿಸಿಕೊಂಡಿದ್ದ ರಾಘುವರು ಭಾರತ ರಂಗಭೂಮಿಯ ಕೀರ್ತಿಯನ್ನು ವಿದೇಶಗಳಲ್ಲೂ ಬೆಳಗಿದ ಅಸಾಧಾರಣ ಪ್ರತಿಭಾವಂತರು.

ಶ್ರೀನಿವಾಸರಾಯರಿಂದ ರಚಿತವಾದ 'ವಸ್ತ್ರಾಪಹರಣ'ವೆಂಬ ಪೌರಾಣಿಕ ನಾಟಕದಲ್ಲಿ ರಾಘುವರು ದುರ್ಯೋಧನನ ಪಾತ್ರವನ್ನು ಅಭಿನಯಿಸಿದ್ದಾರೆ. ಧರ್ಮಾವರಂ ಗೋಪಾಲಾಚಾರ್ಯರು 'ಸುಭದ್ರಾರ್ಜುನೀಯ' ವೆಂಬ ನಾಟಕದಲ್ಲಿ ರಾಘುವರು ಅರ್ಜುನನ ಪಾತ್ರವನ್ನು ವಹಿಸಿದ್ದರು. ಇದೊಂದು ಪುರಾಣ ಕಾಲದ ಕನ್ಯಾಪಹರಣದ ಕಥೆಯಾಗಿತ್ತು.

ಪಾಶ್ಚಾತ್ಯರ ನಾಟಕಗಳನ್ನು ಮೆಚ್ಚಿ ಅವರಿಂದ ಪ್ರಭಾವಿತರೂ ಆಗಿದ್ದ ಬಳ್ಳಾರಿ ರಾಘುವರು 'ಆರ್ಟ್ಸ್ ಲವರ್ಸ್ ಲೀಗ್' ಎಂಬ ಮತ್ತೊಂದು ಸಂಘವನ್ನು ಹುಟ್ಟು ಹಾಕಿದರು. ನಾಲ್ಕು ದಶಕಗಳಷ್ಟು ಕಾಲ ಅಪ್ರತಿಮ ಕಲಾವಿದರಾಗಿ ಜಿಲ್ಲೆಯ ರಂಗಭೂಮಿಗೆ ಅಪಾರ ಕೊಡುಗೆ ಕೊಟ್ಟಿದ್ದಾರೆ. ರಂಗಭೂಮಿಯ

ವಿಷಯದ ಬಗ್ಗೆ ಯಾರೇ ಮಾತಾಡಲಿ ಅಥವಾ ಬರೆಯಲಿ ರಾಘವರನ್ನು ಮರೆಯುವಂತೆಯೇ ಇಲ್ಲ, ಅಷ್ಟರ ಮಟ್ಟಿಗೆ ಅವರು ತಮ್ಮ ಗಾಢ ನೆನಪನ್ನು ಬಳ್ಳಾರಿಯ ನೆಲದಲ್ಲಿ ಬಿಟ್ಟು ಹೋಗಿದ್ದಾರೆ. ಇವರ ಹೆಸರಿನಲ್ಲಿ 'ರಾಘವ ಮಂದಿರ'ವನ್ನು ಇವರ ಶಿಷ್ಯರಾದ ಜೋಳದ ರಾಶಿ ದೊಡ್ಡನಗೌಡರು ಮತ್ತವರ ಗೆಳೆಯರು ಕಟ್ಟಿಸಿರುವುದು ಕಾಣಬಹುದಾಗಿದೆ."[೬]

ರಂಗಭೂಮಿಗೆ ರಾಘವ ನೀಡಿರುವ ಅಗಾಧ ಸೇವೆಗೋಸ್ಕರ ೧೯೬೬-೬೭ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ.

೩. ಜೋಳದರಾಶಿ ದೊಡ್ಡನಗೌಡರು

ಬಳ್ಳಾರಿ ಜಿಲ್ಲೆಯ ಗಡಿಯಂಚಿನ ಕುಗ್ರಾಮ ಜೋಳದರಾಶಿಯಲ್ಲಿ ೧೯೧೦ರಲ್ಲಿ ಪಂಪನಗೌಡ, ರುದ್ರಮ್ಮ ದಂಪತಿಗಳ ಏಕಮಾತ್ರ ಪುತ್ರನಾಗಿ ಶ್ರೀ ದೊಡ್ಡನಗೌಡರು ಜನಿಸಿದರು. ಗೌಡರ ತಾತ ಸಣ್ಣ ಹೊನ್ನೇಗೌಡರು ಮೂಲತಃ ಪ್ರಸಿದ್ಧ ಬಯಲಾಟದ ಕವಿ ನಟ ಆಗಿದ್ದುದರಿಂದ ದೊಡ್ಡನ ಗೌಡರಿಗೂ ಸಂಗೀತ ಮತ್ತು ರಂಗಭೂಮಿಯ ಒಲವುಗಳಿಗೆ ಪ್ರೋತ್ಸಾಹ ದೊರಕಿತು.

"೧೯೩೧ರಲ್ಲಿ 'ಸರ್ವಜನ ಮನೋರಂಜನಾ ನಾಟಕ ಸಭಾ'ದ ಪ್ರಖ್ಯಾತ ನಾಟಕಗಳಾದ ಗರುಡ ಗರ್ವಭಂಗ, ಜಲಂಧರ, ಚವತಿ ಚಂದ್ರ, ಶಾಪವಿಮೋಚನೆಯಂಥವುಗಳಲ್ಲಿ ಕಬೀರ್, ನಾರದ, ಚಂದ್ರಗುಪ್ತ ಮೊದಲಾದ ಪಾತ್ರಗಳನ್ನು ಅಭಿನಯಿಸಿ ಜನಕೋಟಿಯ ಮೆಚ್ಚುಗೆ ಪಡೆದು ಜೋಳದ ರಾಶಿಯಲ್ಲಲ್ಲದೆ ಬಳ್ಳಾರಿ, ಆದೋನಿ, ರಾಯಚೂರು, ಕೊಪ್ಪಳ, ಉರವಕೊಂಡ ಹಲವಾರು ಪ್ರದೇಶಗಳನ್ನು ಸುತ್ತಿ ಪ್ರದರ್ಶನವಿತ್ತರು.

'ಶ್ರೀ ಗವಿಮಠದ ಚೆನ್ನಬಸವೇಶ್ವರ ಕೃಪಾಪೋಷಿತ ಸಂಗೀತ ನಾಟಕ ಸಂಘ' ಎಂಬ ಸ್ವಂತ ನಾಟಕ ಮಂಡಳಿಯನ್ನು ಆರಂಭಿಸಿದರು. ಇಲ್ಲಿಯ ಬಹುಪಾಲು ಕಲಾವಿದರು ಒಕ್ಕಲು ಮಕ್ಕಳಾಗಿದ್ದುದು. ಇವರಿಗೆ ರಂಗಭೂಮಿಯ ವೃತ್ತಿಗಿಂತ ಮಿಗಿಲಾಗಿ ಕಲೆಯ ಒಲವೇ ಹೆಚ್ಚಾಗಿರುವುದು ವಿಶೇಷವಾಗಿದೆ."[೭]

೧೯೩೫ರಲ್ಲಿ ಗೌಡರು ಬಳ್ಳಾರಿ ರಾಘವ ಅವರ 'ಆರ್ಟ್ಸ್ ಲವರ್ಸ್ ಲೀಗ್'ನಲ್ಲಿ ಹಲವಾರು ಪಾತ್ರಗಳಲ್ಲಿ ರಂಜಿಸುತ್ತಾ ಕರ್ನಾಟಕದಾಚೆಗೆ ಆಂಧ್ರದಲ್ಲೂ ಸುತ್ತಿ ಹೆಸರಾದರು. ಗೌಡರು ಕಲೆಯನ್ನು ಆತ್ಮ ವಿಕಾಸದ ಸಾಧನವೆಂದು ಭಾವಿಸಿ ಕಲೆಯ ಎಲ್ಲಾ ಪ್ರಕಾರಗಳನ್ನು ಅಭ್ಯಾಸ ಮಾಡಿದವರು. ಕರ್ನಾಟಕ, ಆಂಧ್ರ ಎಲ್ಲೆಡೆಯ ಮಹಾವ್ಯಕ್ತಿಗಳೂ ಇವರ ಗಾನ ಭಕ್ತಿಗಳ ಪಾರವಶ್ಯವನ್ನು ಕಂಡು ಮೆಚ್ಚಿ ನುಡಿದ್ದಾರೆ.

"೧೯೪೮ರಲ್ಲಿ ಗ್ರಾಮೀಣ ನಾಟಕ ಕಲಾವಿದರ ಕಲಾಭಿವೃದ್ಧಿಗಾಗಿ 'ಬಳ್ಳಾರಿ ಜಿಲ್ಲಾ ನಾಟಕ ಕಲಾ ಪರಿಷತ್ತು' ಸ್ಥಾಪಿಸಿದರು. ಜೋಳದರಾಶಿಯಲ್ಲಿ ಗರುಡ ಸದಾಶಿವರಾಯರು,ಬಳ್ಳಾರಿಯಲ್ಲಿ ಆರ್.ನಾಗೇಂದ್ರರಾಯರು, ಕಣೆಕಲ್‌ದಲ್ಲಿ ಅ.ನ.ಕೃಷ್ಣರಾಯರು ಇವರುಗಳ ಅಧ್ಯಕ್ಷತೆಯಲ್ಲಿ ಮೂರು ರಾಜ್ಯಮಟ್ಟದ ನಾಟಕ ಸಮಾವೇಶಗಳನ್ನು ಜರುಗಿಸಿದರು.

‘ಬಳ್ಳಾರಿ ರಾಘವ ಸ್ಮಾರಕ ಕಲಾಸಮಿತಿ’ಗೆ ಅಧ್ಯಕ್ಷರಾಗಿ ಕಲಾವಿದ ರಾಘವರ ಚಿರನೆನಪಿಗಾಗಿ ‘ರಾಘವ ಕಲಾ ಮಂದಿರ’ವನ್ನು ನಿರ್ಮಿಸುವಲ್ಲಿ ಗೌಡರು ಮಹತ್ವದ ಪಾತ್ರವಹಿಸಿದ್ದಾರೆ. ಜೋಳದ ರಾಶಿಯಲ್ಲಿ ‘ರಾಮೇಶ ಕಲಾಮಂದಿರ’ ರಚನೆಗೊಳ್ಳಲು ಅವರೇ ಕಾರಣಕರ್ತರಾಗಿದ್ದಾರೆ.

ದೊಡ್ಡನಗೌಡರು ಕವಿ, ಗಮಕಿ, ನಟ, ನಾಟಕಕಾರರಾಗಿ ಅನುಪಮ ಸೇವೆ ಸಲ್ಲಿಸಿರುವರು. ಇದನ್ನು ಮನಗಂಡ ಕರ್ನಾಟಕ ಆಂಧ್ರದ ಹಲವಾರು ಸಂಘ ಸಂಸ್ಥೆಗಳು, ಸರಕಾರ ಬಿರುದು ಪ್ರಶಸ್ತಿ ನೀಡಿ ಸನ್ಮಾನಿಸಿರುವವು.

ಹಲವು ಬಿರುದು-ಬಾವಲಿಗಳು ಇವರ ಗಮಕ ಕಲೆಗೆ ಸಂದಿವೆ. ಅವುಗಳಲ್ಲಿ ೧೯೪೩ರಲ್ಲಿ ಬಳ್ಳಾರಿ ವೀರಶೈವ ವಿದ್ಯಾವರ್ಧಕ ಸಂಘವು ತನ್ನ ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಸನ್ಮಾನಿಸಿ ‘ಗಮಕ ಕಲಾ ಪ್ರವೀಣ’, ೧೯೪೫ರಲ್ಲಿ ಧಾರವಾಡದ ಮರುಘಾಮಠವು ‘ಗಮಕ ಕಲಾನಿಧಿ’, ೧೯೭೧ರಲ್ಲಿ ಗುಬ್ಬಿ ವೀರಣ್ಣನವರು ಗುಬ್ಬಿಯಲ್ಲಿ ‘ಶರಣಕವಿ’, ೧೯೭೯ರಲ್ಲಿ ಗದುಗಿನ ತೋಂಟದಾರ್ಯ ಮಠವು ‘ಗಮಕ ಗಂಧರ್ವ’ ಎಂಬ ಬಿರುದುಗಳನ್ನು ದಯಪಾಲಿಸಿದ್ದಾಗಿವೆ.

೧೯೪೭ರಲ್ಲಿ ಗೋಕಾಕ್‌ದಲ್ಲಿ ನಡೆದ ಜನಪದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

೧೯೬೬-೬೭ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿಗಳಿಸಿದರು. ಅನೇಕ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್ ನೀಡಿಸನ್ಮಾನಿಸಿವೆ.

೧೯೭೭ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ತನ್ನ ವಜ್ರಮಹೋತ್ಸವದಲ್ಲಿ ಪ್ರಶಸ್ತಿ ನೀಡಿದೆ.

೧೯೮೭ರಲ್ಲಿ ಕರ್ನಾಟಕ ಗಾನಕಲಾ ಪರಿಷತ್ತು ಪ್ರಶಸ್ತಿ ನೀಡಿದೆ. ಕರ್ನಾಟಕ ಸರ್ಕಾರದ ೧೯೮೫-೮೬ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿ ದೊರೆತಿದೆ. ಕಲೆಯನ್ನು ಶುದ್ಧವಾದ ಭಕ್ತಿಪೂರ್ಣವಾದ ರೀತಿಯಲ್ಲಿ ಸ್ವೀಕರಿಸಬೇಕೆನ್ನುವ ಪರಿಪೂರ್ಣತೆಗಾಗಿ ದುಡಿದ ಗೌಡರು ಶ್ರೇಷ್ಠ ಕಲಾವಿದರು. ೧೯೬೪ರಲ್ಲಿಆಂಧ್ರ ಕರ್ನಾಟಕ ಕಲಾ ಪರಿಷತ್ತಿನವರು ರಂಗಭೂಮಿಗೆ ಸಲ್ಲಿಸಿದ ಸೇವೆಗಾಗಿ ವಿಜಯ ಪತ್ರವನ್ನಿತ್ತು ಸನ್ಮಾನಿಸಿದ್ದಾರೆ. ೧೯೮೦ರಲ್ಲಿಕರ್ನಾಟಕ ವಿಶ್ವವಿದ್ಯಾಲಯ ಆಶ್ರಯದಲ್ಲಿ ಗುಲಬರ್ಗಾದಲ್ಲಿ ಜರುಗಿದ ಐದನೆಯ ಅಖಿಲ ಕರ್ನಾಟಕ ಜಾನಪದ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಗೊಂಡಿದ್ದರು. ೧೯೮೫ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯವು ತನ್ನ ವಾರ್ಷಿಕ ಘಟಿಕೋತ್ಸವದಲ್ಲಿ ಡಿ.ಲಿಟ್ ಪದವಿಯನ್ನು ದಯಪಾಲಿಸಿತು.”[೮]

೪. ವೈ.ಎಂ.ಚಂದ್ರಯ್ಯ

“ರಂಗನಟ, ಚಿತ್ರನಟ, ನಾಟಕಕಾರ, ಗಮಕಿ, ಕೀರ್ತನಕಾರರಾದ ವೈ.ಎಂ.ಚಂದ್ರಯ್ಯನವರು ೧೯೨೦ರಲ್ಲಿ ಬಳ್ಳಾರಿ ತಾಲೂಕು ಏಳುಬೆಂಚಿ ಗ್ರಾಮದ ಜಂಗಮ ಚೆನ್ನಬಸಯ್ಯ ತಾಯಿ ಚೆನ್ನವೀರಮ್ಮ ಎಂಬ ದಂಪತಿಗಳ ಮಗನಾಗಿ ಜನಿಸಿದರು. ಇವರು ಓದಿದ್ದು ಏಳನೆಯ ತರಗತಿಯವರೆಗೆ, ಬಾಲ್ಯದಲ್ಲಿಯೇ ಸಂಗೀತ ನಾಟಕಗಳ ಆಸಕ್ತಿಯಿಂದಾಗಿ ಮುಂದಿನ ಶಿಕ್ಷಣಕ್ಕೆ ವಿದಾಯ ಹೇಳಿಬಿಟ್ಟರು.

ಏಳುಬೆಂಚಿಯಿಂದ ಸಿಡಿಗಿನಮಳೆ ಗ್ರಾಮಕ್ಕೆ ಪ್ರಯಾಣ ಬೆಳೆಸಿ ಅಲ್ಲಿಂದ ಅಕ್ಕನ ಮನೆಯಲ್ಲಿ ಆಶ್ರಯ ಪಡೆದರು. ಪಕ್ಕದೂರಾದ ಜೋಳದರಾಶಿ ದೊಡ್ಡನಗೌಡರಲ್ಲಿ ನಿತ್ಯ ಅಲೆದಾಡಿ ಕಾವ್ಯವಾಚನ, ನಾಟಕಾಭಿನಯ, ಸಂಗೀತದಲ್ಲಿ ಶಿಕ್ಷಣ ಪಡೆದು ಅವರ ಶಿಷ್ಯರಾದರು. ಗೌಡರ ಮಂಡಳಿಯಲ್ಲಿ ನಟರಾಗಿಯೂ ಸೇರಿದರು. ಬಳ್ಳಾರಿಯ ಖ್ಯಾತ ನಾಟಕಕಾರ ರಾಘವರ ಪರಿಚಯವಾಯಿತು. ರಾಘವ ಗೌಡರ ಸಹವಾಸದಿಂದ ರಂಗಭೂಮಿಯ ನಿಕಟ ಪರಿಚಯ ಪಡೆದು ವಿವಿಧ ಪಾತ್ರಗಳಲ್ಲಿ ಅಭಿನಯ ಪ್ರಾವೀಣ್ಯತೆ ಪಡೆದರು.

೧೯೩೦ರ ಸುಮಾರಿಗೆ ಸಿಡಿಗಿನಮಳೆ ಗ್ರಾಮದಲ್ಲಿ 'ಶ್ರೀ ನಟರಾಜ ನಾಟ್ಯ ಮಂಡಳಿ'ಯನ್ನು ಸ್ವಂತವಾಗಿ ಸ್ಥಾಪಿಸಿದರು. 'ದೇವದಾಸಿ', 'ಕಿತ್ತೂರ ಚನ್ನಮ್ಮ', 'ಟೀಪೂಸುಲ್ತಾನ್', 'ಮಕಮಲ್ ಟೋಪಿ', 'ಹೇಮರೆಡ್ಡಿ ಮಲ್ಲಮ್ಮ' ಮುಂತಾದ ನಾಟಕಗಳನ್ನು ಬಳ್ಳಾರಿ ಭಾಗ ಹಾಗೂ ಆಂಧ್ರದ ಆದೋನಿ, ಆಲೂರು, ರಾಯದುರ್ಗಗಳಲ್ಲಿ ಪ್ರದರ್ಶಿಸಿ ಖ್ಯಾತಿವಂತರಾದರೂ ಆರ್ಥಿಕ ತೊಂದರೆಯಿಂದಾಗಿ ಅದನ್ನು ಮುಚ್ಚಿದರು. ಮುಂದೆ ಹೊನ್ನಪ್ಪ ಭಾಗತರ ಮಂಡಳಿಯಲ್ಲಿ ಕೆಲಕಾಲ ಸೇವೆಸಲ್ಲಿಸಿದರು. ೧೯೩೪ರ ಸುಮಾರಿಗೆ ಮದ್ರಾಸಿನಲ್ಲಿ ಚಿತ್ರರಂಗದಲ್ಲಿ ಅವಕಾಶ ಪಡೆದು 'ಸ್ಕೂಲ್‌ಮಾಸ್ಟರ್', 'ಶ್ರೀ ಕೃಷ್ಣಗಾರುಡಿ', 'ಭೂ ಕೈಲಾಸ', 'ಆದರ್ಶ ಸತಿ' ಇತ್ಯಾದಿ ಇಪ್ಪತ್ತು ಚಿತ್ರಗಳಲ್ಲಿ ಚಿಕ್ಕಪುಟ್ಟ ಪಾತ್ರ ವಹಿಸಿರುವುದಲ್ಲದೇ ಒಂದೆರಡು ತೆಲುಗು ಚಿತ್ರಗಳಲ್ಲೂ ಅಭಿನಯಿಸಿದ್ದಾರೆ.

೧೯೩೮ರಲ್ಲಿ ಮತ್ತೆ 'ವೈ.ಎಂ.ಚಂದ್ರಯ್ಯನವರ ಮಿತ್ರ ಮಂಡಳಿ ಸಿಡಿಗಿನಮಳೆ ಎಂಬ ಮಂಡಳಿ' ಸ್ಥಾಪಿಸಿ ತಾವೇ ಬರೆದು ನಿರ್ದೇಶಿಸಿದ 'ಚೋರಬಸವೇಶ್ವರ ಎಂಬ ನಾಟಕ'ವನ್ನು ಕೆಲಕಾಲ ಪ್ರದರ್ಶಿಸಿ ಅದರಲ್ಲೂ ಕೈ ಸುಟ್ಟುಕೊಂಡ ಪರಿಣಾಮವಾಗಿ ಧಾರವಾಡ ಶ್ರೀ ಮೃತ್ಯುಂಜಯಪ್ಪಗಳ ಸಲಹೆ ಹಾಗೂ ಆಶೀರ್ವಾದದ ಮೇರೆಗೆ ನಾಟಕವನ್ನು ಕೈಬಿಟ್ಟು ಶಿವಾನುಭವ, ಪುರಾಣ, ಕೀರ್ತನ ಕಾರ್ಯವನ್ನು ಕೈಗೊಂಡರು. ಸ್ವಲ್ಪ ಅವಧಿಯಲ್ಲಿಯೇ ಪುರಾಣ ಪ್ರವಚನಗಳಲ್ಲಿ ಹೆಸರುಗಳಿಸಿದರು. ಬಳ್ಳಾರಿ ಭಾಗದಲ್ಲೆಲ್ಲಾ ಮಠ-ಮಾನ್ಯಗಳಲ್ಲಿ ಸನ್ಮಾನಿತರಾದರು. ಕಂಪಲಿಯ ಓದಿಸೋ ಕರಿಬಸಯ್ಯನವರ ಧರ್ಮ ಭಾಂಡಾರ ಸಂಸ್ಥೆಯು 'ಪುರಾಣ ರತ್ನ' ಪದವಿ ನೀಡಿತು.

ಮೈಸೂರು ಸರ್ಕಾರವು ಕುಟುಂಬ ಯೋಜನೆ ಹಾಗೂ ಜನ ಕಲ್ಯಾಣ ಕಾರ್ಯಕ್ರಮಗಳ ಪ್ರಸಾರಕ್ಕಾಗಿ ಇವರನ್ನು ಅಧಿಕೃತ ಕಲಾವಿದರೆಂದು ನೇಮಿಸಿ ಬಳ್ಳಾರಿ, ರಾಯಚೂರು, ಗುಲಬರ್ಗಾ, ವಿಜಾಪುರ ಜಿಲ್ಲೆಗಳಲ್ಲಿ ಪ್ರತಿ ತಿಂಗಳು ಒಂದು ಕಾರ್ಯಕ್ರಮ ನೀಡಲು ಕೇಳಿಕೊಂಡಿತು. ಅದರಲ್ಲಿಯೂ ತಮ್ಮ ಕಲೆಯನ್ನು ಪ್ರದರ್ಶಿಸಿ ಜನತೆ ಹಾಗೂ ಸರ್ಕಾರದಿಂದ ಮೆಚ್ಚುಗೆ ಪಡೆದರು. ಇವರ ನಾಟಕ ಸೇವೆಯನ್ನು ಪರಿಗಣಿಸಿ ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿಯು ೧೩.೧೨.೧೯೭೨ರಂದು ರಾಜಧಾನಿಯಲ್ಲಿ ಸನ್ಮಾನಿಸಿತು. ರಾಜ್ಯ ಅಕಾಡೆಮಿ ಪ್ರಶಸ್ತಿ ವಿಜೇತರೆನಿಸಿದರು.

ಇವರು ಬರೆದ 'ಚೋರಬಸವೇಶ್ವರ ನಾಟಕ' ೧೯೬೯ರಲ್ಲಿ ಪ್ರಕಟವಾಯಿತು. 'ನಮ್ಮ ಸಂಸಾರ' (ನಾಟಕ) 'ಚೇಳಗುರ್ಕಿ ಎರ್ರಿತಾತನವರ ಚರಿತ್ರೆ' ಪ್ರಕಟಗೊಂಡಿಲ್ಲ. ಬೆಂಗಳೂರಿನಲ್ಲಿ ಮದುವೆಯೊಂದಕ್ಕೆ

ಹೋಗಿದ್ದಾಗ ದಿನಾಂಕ ೮.೦೨.೧೯೭೫ರಂದು ವಿಧಾನ ಸೌಧ ನೋಡಿ ವಾಪಾಸ್ಸಾಗುವಾಗ ಹೃದಯಾಘಾತಕ್ಕೆ ಒಳಗಾಗಿ ಸ್ಥಳದಲ್ಲಿಯೇ ಶಿವೈಕ್ಯರಾದರು. ದಿನಾಂಕ.೧೧.೦೨.೧೯೭೫ರಂದು ಅವರ ಪಾರ್ಥಿವ ಶರೀರವನ್ನು ಸಿಡಿಗಿನಮಳೆಗೆ ತಂದು ಸಮಾದಿ ಮಾಡಲಾಯಿತು."[೯]

೫. ಬೆಳಗಲ್ ವೀರಣ್ಣ

"ಬೆಳಗಲ್ ವೀರಣ್ಣನವರು ಬಳ್ಳಾರಿ ತಾಲ್ಲೂಕು, ಜಿಲ್ಲೆಯ ಬೆಳಗಲ್ ಎಂಬಲ್ಲಿ ಕಿಳ್ಳೆಕ್ಯಾತರ ಕುಟುಂಬದಲ್ಲಿ ೧೯೩೪ರಲ್ಲಿ ದೊಡ್ಡ ಹನುಮಂತಪ್ಪ ಮತ್ತು ಈರಮ್ಮ ಎಂಬ ದಂಪತಿಗಳ ಮಗನಾಗಿ ಜನಿಸಿದರು. ಮೊದಲು ಅವಿದ್ಯಾವಂತರಾಗಿ ಮುಂದೆ ಸಿಡಿಗಿನಮಳೆಯ ವೈ.ಎಂ.ಚಂದ್ರಯ್ಯಸ್ವಾಮಿ ಶಿಷ್ಯರಾಗಿ ಓದಲು ಬರೆಯಲು ಕಲಿತು ರಂಗಭೂಮಿಗೆ ಅವರ ಗುರುಗಳ ಪ್ರೇರಣೆಯಿಂದ ಒಬ್ಬ ಕಲಾವಿದರಾಗಿ ಹೊರ ಹೊಮ್ಮಿದರು. ಬಾಲ್ಯದಲ್ಲಿಯೇ ಸಂಗೀತ ನಾಟಕಗಳ ಆಸಕ್ತಿಯಿಂದಾಗಿ ಅವರ ತಂದೆ ಬಯಲಾಟದ ಮಾಸ್ತರರು ಅವರು ಬಯಲಾಟಗಳಲ್ಲಿ 'ಸಖಿ' ಪಾತ್ರ ಮಾಡಿಸುತ್ತಿದ್ದರು. ನಂತರವಾಗಿ ಪ್ರಹ್ಲಾದ ನಾಟಕದಲ್ಲಿ 'ಪ್ರಹ್ಲಾದ'ನ ಪಾತ್ರ ಮಾಡಿದರು. ಅಂದು ಸಂಗೀತ ಪ್ರಧಾನ ನಾಟಕಗಳು, ಇದ್ದುದ್ದರಿಂದ ಪ್ರಹ್ಲಾದ ನಾಟಕದಲ್ಲಿ ಕನ್ನಡದ ಭಕ್ತಿಗೀತೆಗಳನ್ನು ವಿಷ್ಣುವಿನ ಮೇಲೆ ಹಾಡುವುದರ ಮೂಲಕ ತೆಲುಗಿನಲ್ಲಿ ಹಾಡಿದ್ದೂ ಉಂಟು. ನಂತರ ಕಾಳಿದಾಸ ನಾಟಕದಲ್ಲಿ 'ಚೂಡಾಮಣಿ' ಪಾತ್ರ ಮಾಡಿದರು. ಇವೆಲ್ಲ ಪಾತ್ರಗಳನ್ನು ೧೬ನೇ ವಯಸ್ಸಿನಲ್ಲಿ ಮಾಡಿದ್ದರು.

ಇವರು ಪ್ರಮುಖವಾಗಿ ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ನಾಟಕಗಳಲ್ಲಿ ಅಭಿನಯಿಸಿ ಉತ್ತಮ ಹಾಡುಗಾರಿಕೆಯಲ್ಲಿಯಲ್ಲಿ ಸಹ ಮೈಗೂಡಿಸಿಕೊಂಡಿದ್ದಾರೆ. ಇವರ ಅಭಿನಯದ ಪ್ರಮುಖ ನಾಟಕಗಳೆಂದರೆ 'ಕಾಳಿದಾಸ', 'ಪ್ರಹ್ಲಾದ', 'ಉಷಾಸ್ವಯಂವರ', 'ಕುರುಕ್ಷೇತ್ರ', 'ಶಿವನಾಣೆ', 'ಮಾಯ ಪ್ರಭಾವ', 'ದೇವದಾಸಿ', 'ಮಕ್‌ಮೇಲೆಟೋಪಿ', 'ಯೋಗಾಶಕ್ತಿ', 'ಗರುಡು ಗರ್ವಭಂಗ', 'ವೀರ ಅಭಿಮನ್ಯು', 'ಉತ್ತರ ಭೂಪ' ಮುಂತಾದ ನಾಟಕದಲ್ಲಿ ನಟನೆ ಮಾಡಿದ್ದಾರೆ.

ನಂತರ ಇಪ್ಪತ್ತು ವರ್ಷಗಳ ಹಿಂದೆ ವೃತ್ತಿರಂಗ ಭೂಮಿ ಬಿಟ್ಟು ತೊಗಲುಗೊಂಬೆಯಾಟದ ಕ್ಷೇತ್ರಕ್ಕೆ ವಾಲಿದರು. ವಂಶಪಾರಂಪರ್ಯವಾಗಿ ಬಂದಿರುವ ತೊಗಲು ಗೊಂಬೆಯಾಟವನ್ನು ಮುಖ್ಯ ನೆಲೆಗಟ್ಟನ್ನಾಗಿ ಮಾಡಿಕೊಂಡು ಯಶಸ್ವಿಯಾಗಿದ್ದಾರೆ.

ಇವರ ಕಲೆಗೆ ಅನೇಕ ಸಂಘ ಸಂಸ್ಥೆಗಳಿಂದ ಸನ್ಮಾನ, ಪ್ರಶಸ್ತಿ ಸ್ವೀಕರಿಸಿ, ಅಕಾಡೆಮಿಯ ಮಾನ್ಯತೆಗಳನ್ನು ಪಡೆದಿದ್ದಾರೆ. ೧೯೯೦ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ೧೯೯೨ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ೧೯೯೯ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ಜಾನಪದ ಪ್ರಶಸ್ತಿ ಪಡೆದಿದ್ದಾರೆ."[೧೦]

೬. ಎಲಿವಾಳ ಸಿದ್ಧಯ್ಯ

"ಪ್ರಸ್ತುತ ಈ ಹಿರಿಯರನ್ನು ಬಿಟ್ಟರೆ ಜಿಲ್ಲೆಯ ರಂಗಭೂಮಿಯನ್ನು ಮತ್ತಷ್ಟು ಉಜ್ವಲಗೊಳಿಸಿದವರು ಎಂದರೆ ಎಲಿವಾಳ ಸಿದ್ಧಯ್ಯನವರು. ಶ್ರೀ ಎಲಿವಾಳ ಸಿದ್ಧಯ್ಯನವರು ಕರ್ನಾಟಕದ ರಂಗಭೂಮಿಯ

ಮತ್ತು ಚಲನಚಿತ್ರರಂಗದ ಬೆರಳೆಣಿಕೆಯ ಸುಪ್ರಸಿದ್ಧ ನಟರಲ್ಲಿ ಒಬ್ಬರಾಗಿದ್ದಾರೆ. ಕನ್ನಡನಾಡು ಕಂಡಿರುವ ಅತ್ಯಂತ ಪ್ರತಿಭಾವಂತ ನಟರಲ್ಲಿ ಒಬ್ಬರಾಗಿದ್ದ ಸಿದ್ಧಯ್ಯನವರು ಬದುಕಿರುವಾಗಲೇ ದಂತ ಕತೆಯಾಗಿದ್ದಂಥವರು. ಅವರಷ್ಟು ಜನಪ್ರಿಯತೆಯನ್ನು ಪಡೆದಿರುವಂಥವರು ತೀರಾ ವಿರಳ. ನಾಟಕವೆಂದರೆ, ನಾಟಕದವರೆಂದರೆ ಮೂಗು ಮುರಿಯುವ ಸಮಾಜದಲ್ಲಿ ನಟನೊಬ್ಬ ತಾರೆಯಾಗಿ ಜನಮನದಲ್ಲಿ ನೆಲೆಸಬಲ್ಲನೆಂಬುದಕ್ಕೆ ಸಿದ್ಧಯ್ಯನವರು ಉತ್ತಮ ಉದಾಹರಣೆಯಾಗಿದ್ದಾರೆ. ತನ್ನ ಅಂತಃ ಸತ್ವವನ್ನು ಕಳೆದುಕೊಂಡು ಕ್ಷೀಣಿಸುತ್ತಿರುವ ನಮ್ಮ ವೃತ್ತಿ ರಂಗಭೂಮಿ ಇಂತಹ ನಟಶ್ರೇಷ್ಠರನ್ನು ಮತ್ತೇ ಕಂಡೀತೆಂದು ಭವಿಷ್ಯವನ್ನು ಹೇಳಲಾಗುವುದಿಲ್ಲ."[೧೧]

ಎಲಿವಾಳ ಎಂಬುದು ಹುಬ್ಬಳ್ಳಿ ಸಮೀಪದ ಒಂದು ಹಳ್ಳಿ. ಅಲ್ಲಿ ೧೯೨೭ರಲ್ಲಿಸಿದ್ಧಯ್ಯನವರ ಜನನ. ತಂದೆಯಿಂದ ಪ್ರಾಥಮಿಕ ಸಂಗೀತಾಭ್ಯಾಸ ಅವರಿಗೆ ದೊರೆಯಿತು. ಒಂಭತ್ತು ವರ್ಷದ ಬಾಲಕನಾಗಿದ್ದಾಗ ಬಯಲಾಟದಲ್ಲಿ ಮಾರ್ಕಂಡೇಯನ ಪಾತ್ರವಹಿಸುವುದರ ಮೂಲಕ ರಂಗಭೂಮಿಗೆ ನೇರವಾಗಿ ಪ್ರವೇಶಿಸಿದರು. ಬಾಲ್ಯದಲ್ಲಿಯೇ ಬಯಲಾಟ, ನಾಟಕ, ಭಜನೆ ಪದಗಳನ್ನು ಅನುಕರಣೆಯಿಂದ ಹಾಡುವ ಹುಚ್ಚು ಅಂಟಿಕೊಂಡಿತು. ತಂದೆ ತಾಯಿಗಳಿಬ್ಬರನ್ನು ಕಳೆದುಕೊಂಡು ದಿಕ್ಕೆಟ್ಟು ಅಲೆದಾಡಿದ ನಂತರ ಗದುಗಿಗೆ ಬಂದು ಪಂಚಾಕ್ಷರಿ ಗವಾಯಿಗಳವರ ಶಿಷ್ಯತ್ವವನ್ನು ಸ್ವೀಕರಿಸಿದರು. ಸಿದ್ಧಯ್ಯನವರ ಕಂಠಮಾಧುರ್ಯ ಮತ್ತು ಸುರದ್ರೂಪತೆ ಅವರನ್ನು ಗವಾಯಿಗಳವರ ನಾಟಕ ಕಂಪನಿಗೆ ಕರೆತಂದವು. ಅಲ್ಲಿಂದ ಸಿದ್ಧಯ್ಯನವರು ಬಾಲಪಾತ್ರ ಮತ್ತು ಸ್ತ್ರೀಪಾತ್ರಗಳನ್ನು ಮಾಡುತ್ತ ರಂಗಭೂಮಿಯ ಸಂಪೂರ್ಣ ಸಂಬಂಧ ಬೆಳೆಸಿಕೊಂಡರು.

"ಯೌವ್ವನದಲ್ಲಿ ಅನೇಕ ನಾಟಕ ಕಂಪನಿಗಳಲ್ಲಿ ಪಾತ್ರವಹಿಸಿದರು. ಜಮಖಂಡಿಯ ಗಜಾನನ ನಾಟ್ಯ ಸಂಘದಲ್ಲಿ ಎರಡು ವರ್ಷವಿದ್ದು ಎಲ್ಲ ತರಹದ ಸ್ತ್ರೀಪಾತ್ರ ನಿರ್ವಹಿಸಿ ಹೆಸರನ್ನು ಮಾಡಿದರು. ಅವರ ಕೀರ್ತಿಯನ್ನು ಕೇಳಿದ ಪ್ರಸಿದ್ಧ ಗೋಕಾಕ್ ಕಂಪನಿಯ ಮಾಲೀಕರಾದ ಬಸವಣ್ಣೆಪ್ಪನವರು ತಮ್ಮ ಕಂಪನಿಗೆ ಕರೆಸಿಕೊಂಡರು. ಈ ಕಂಪನಿಯಿಂದ ಸಿದ್ಧಯ್ಯನವರು ಒಬ್ಬ ಪಕ್ಕ ಹಾಸ್ಯನಟ ಎಂಬುದೇ ಸ್ಥಿರವಾಯಿತು. ನಡುವೆ ಒಂದೆರಡು ವರ್ಷದ ನ್ಯಾಮತಿ ಕಂಪನಿ, ಇನಾಮದಾರರ ಕಂಪನಿಗಳಲ್ಲಿ ದುಡಿದು ಪುನಃ ೧೯೪೮ರಲ್ಲಿ ಗೋಕಾಕ್ ಕಂಪನಿಗೆ ಸೇರಿದಾಗ ಸಿದ್ಧಯ್ಯನವರಿಗೆ ಭರ್ತಿ ಪ್ರಾಯ. ಅಪ್ಪೊತ್ತಿಗಾಗಲೇ ಅವರೊಬ್ಬ ಪ್ರೌಢನಟರಾಗಿ ನಾಡಿನಾದ್ಯಂತ ಹೆಸರುಗಳಿಸಿದ್ದರು. ನಾಯಕ, ಖಳನಾಯಕ, ಹಾಸ್ಯ ಪಾತ್ರಗಳನ್ನು ಮಾಡುವುದರಲ್ಲಿ ನಿಸ್ಸೀಮರೆನಿಸಿದ್ದರು."[೧೨] "ಉಕ್ಕುವ ಪ್ರಾಯ ಸಿದ್ಧಯ್ಯನವರಿಗಷ್ಟೇ ಅಲ್ಲ, ಗೋಕಾಕ್ ಕಂಪನಿಗೂ ಅದು ತಾರುಣ್ಯದ ಅವಧಿ, ಭರ್ಜರಿ ರಂಗಸಜ್ಜಿಕೆ, ಹೆಸರಾಂತ ನಟ ನಟಿಯರು, ಸಂಗೀತಗಾರರು, ಶಿಸ್ತಿನ ಆಡಳಿತ ಇವು ಗೋಕಾಕ್ ಕಂಪನಿಯ ಜೀವಾಳವಾಗಿದ್ದವು. ಹೀಗಾಗಿ ಆ ಅವಧಿ ಗೋಕಾಕ್ ಕಂಪನಿಯ ಹಾಗೂ ಸಿದ್ಧಯ್ಯನವರ ಜೀವನದಲ್ಲಿ ಸ್ವರ್ಣಯುಗವೆನಿಸಿದ್ದು ಸಹಜವಾಗಿತ್ತು.

ಕರ್ನಾಟಕದ ಶೇಕ್ಸ್‌ಪಿಯರ್ ಎಂದು ಹೆಸರಾಗಿರುವ ಕಂದಗಲ್ಲು ಹನುಮಂತರಾಯರು ಸಿದ್ಧಯ್ಯನವರ ಅಭಿನಯ ಕೌಶಲ್ಯಕ್ಕೆ ಮನಸೋತವರು. ಅವರ ಹೆಸರನ್ನು ಅಜರಾಮರವಾಗಿಸಿರುವ ರಕ್ತರಾತ್ರಿ ನಾಟಕ ರಚನೆಗೆ ಸಿದ್ಧಯ್ಯನವರೇ ಪ್ರೇರಕಶಕ್ತಿ ಎಂದರೆ ತಪ್ಪಾಗದು. ಅಶ್ವತ್ಥಾಮನ ಪಾತ್ರಕ್ಕೆ ಸಿದ್ಧಯ್ಯನವರನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರಿಗಾಗಿಯೇ 'ರಕ್ತರಾತ್ರಿ' ಬರೆದವರು ಕಂದಗಲ್ಲು ಹನುಮಂತರಾಯರು. ಕಂದಗಲ್ಲು ಹನುಮಂತರಾಯರು, ಅಶ್ವತ್ಥಾಮ, ಸಿದ್ಧಯ್ಯನವರು ಈ ಮೂರೂ ಹೆಸರುಗಳ ಅವಿನಾಭಾವ ಸಂಬಂಧ ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ಶಾಶ್ವತವಾಗಿ ಉಳಿಯುವಂತಹದ್ದು, ಅಶ್ವತ್ಥಾಮನ ಪಾತ್ರ ನಿರ್ವಹಣೆ ಸಿದ್ಧಯ್ಯನವರನ್ನು ಜನಪ್ರಿಯತೆಯ ತುತ್ತ ತುದಿಗೇರಿಸಿತು. ಅವರಂತೆ ಆ ಪಾತ್ರವನ್ನು ಇಲ್ಲಿಯವರೆಗೆ ಯಾರೂ ಅಭಿನಯಿಸಿಲ್ಲವೆಂದು ಹೇಳಿದರೆ ಅತಿಶಯೋಕ್ತಿ ಎನಿಸಲಾರದು. ೧೯೩೦ರಿಂದ ಈ ರಕ್ತರಾತ್ರಿ ನಾಟಕವು ಅದೆಷ್ಟು ಸಾವಿರ ಪ್ರಯೋಗಗಳನ್ನು ಕಂಡಿದೆಯೊ ಏನೊ! ಲೆಕ್ಕವಿಟ್ಟವರಾರು?

೧೯೪೪ರಲ್ಲಿ ಗುಬ್ಬಿ ಕಂಪನಿ ಪ್ರವೇಶಿಸಿ ದಶಾವತಾರ ನಾಟಕದಲ್ಲಿ 'ಪರಶುರಾಮನ' ಪಾತ್ರವಹಿಸಿ, ಕರ್ನಾಟಕ ಪ್ರೊಡಕ್ಷನ್ ಸಂಸ್ಥೆಯ ಮೂಲಕ ಸಿನಿಮಾ ಕ್ಷೇತ್ರ ಪ್ರವೇಶಿಸಿದರು. ಆರೇಳು ವರ್ಷಗಳಲ್ಲಿ ಸತಿನಳಾಯಿನಿ, ಓಹಿಲೇಶ್ವರ, ಭಕ್ತವಿಜಯ, ಶ್ರೀಕೃಷ್ಣಗಾರುಡಿ, ಭೂ ಕೈಲಾಸ ಮುಂತಾದ ಹನ್ನೊಂದು ಸಿನಿಮಾಗಳಲ್ಲಿ ಪ್ರಮುಖ ಪಾತ್ರಗಳನ್ನು ಮಾಡಿದರು. ಶ್ರೀ ಕೃಷ್ಣಗಾರುಡಿಯಲ್ಲಿ ಸಿದ್ಧಯ್ಯನವರು 'ಶ್ರೀ ಕೃಷ್ಣನ' ಪಾತ್ರವನ್ನು ಮನಮೋಹಕವಾಗಿ ಅಭಿನಯಿಸಿದ್ದಾರೆ. ಕನ್ನಡ ಚಿತ್ರರಂಗದ ಚರಿತ್ರೆಯಲ್ಲಿ ಶ್ರೀಕೃಷ್ಣಗಾರುಡಿ ಒಂದು ಸ್ಮರಣೀಯ ಅಧ್ಯಾಯವಾಗಿದೆ. ಕಚ್ಚಾ ಫಿಲ್ಮಿನ ಅಭಾವದಿಂದ ೧೯೬೦ರಲ್ಲಿ ಚಿತ್ರರಂಗ ತಲ್ಲಣಿಸಿತು. ಸಿದ್ಧಯ್ಯನವರು ಪುನಃ ರಂಗಭೂಮಿಗೆ ಮರಳಿದರು. ೧೯೭೪ರಲ್ಲಿ ಕೆಲವು ತೆಲುಗು ಸಿನಿಮಾದ ಡಬ್ಬಿಂಗ್ ಕಾರ್ಯದಲ್ಲಿ ಸಿದ್ಧಯ್ಯನವರು ಎಸ್.ವಿ.ರಂಗರಾವ್ ಅವರಿಗೆ ಧ್ವನಿ ನೀಡಿದ್ದಾರೆ.

ಅಲ್ಲಿಂದೀಚೆಗೆ ಸಿದ್ಧಯ್ಯನವರು ಬಳ್ಳಾರಿ ತಾಲೂಕಿನ ಗೆಣಿಕಿಹಾಳ ಮತ್ತು ಕಲಕಂಬ ಗ್ರಾಮಗಳಲ್ಲಿ ನೆಲೆಗೊಂಡು ಬಳ್ಳಾರಿ ಜಿಲ್ಲೆಯವರಾದರು. ಹಳ್ಳಿಗಳ ಹವ್ಯಾಸಿ ತಂಡದವರು ರಕ್ತರಾತ್ರಿ ನಾಟಕವಾಡಿದರೆ ಅದಕ್ಕೆ ಸಿದ್ಧಯ್ಯನವರು ಬರಲೇಬೇಕು. ಅವರ ಬಗ್ಗೆ ಹಳ್ಳಿಗರ ಅಭಿಮಾನ, ಭಕ್ತಿಗಳು, ವಿಪರೀತ, ಸಿದ್ಧಯ್ಯನವರಿಗೆ ನಾಡಿನ ತುಂಬ ಕಲಾಬಳಗವಿದೆ. ಸುಮಾರು ನೂರೈವತ್ತು ಜನ ಶಿಷ್ಯರು ಅವರಿಗಿದ್ದಾರೆ. 'ರಂಗಭೂಮಿ ನಟ ಚಕ್ರವರ್ತಿ', 'ವಿನೋದ ಪುಷ್ಪ' ಮುಂತಾದ ಬಿರುದುಗಳಿಂದ ಅವರು ಸನ್ಮಾನಿತರಾಗಿದ್ದಾರೆ. ಇಳಿವಯಸ್ಸಿನಲ್ಲಿಯೂ ನಾಟಕಗಳಲ್ಲಿ ಪಾತ್ರವಹಿಸುತ್ತ ನಿರ್ದೇಶಿಸುತ್ತ ಸದಾ ಚಟುವಟಿಕೆಯಲ್ಲಿರುತ್ತಿದ್ದ ಸಿದ್ಧಯ್ಯನವರು ಸಂಚಾರಿ ಜೀವಿಯಾಗಿದ್ದರು. ಅವರಿದ್ದಲ್ಲಿ ಜನವಿರುತ್ತಿತ್ತು, ಉತ್ಸಾಹ ಚೈತನ್ಯವಿರುತ್ತಿತ್ತು. ಅಲ್ಲಿ ಬಂದು ಇತಿಹಾಸವೇ ಪುಟ ಬಿಚ್ಚಿಕೊಳ್ಳುತ್ತಿತ್ತು. ಸಿದ್ಧಯ್ಯನವರು ನಿಗರ್ವಿ ಮತ್ತು ಸ್ನೇಹಭಾವ ಜೀವಿಯಾಗಿದ್ದರು. ಕನ್ನಡ ರಂಗಭೂಮಿಗೆ ಅವರು ನೀಡಿರುವ ಅಪೂರ್ವ ಕೊಡುಗೆಯನ್ನು ಗಮನಿಸಿ ಕರ್ನಾಟಕ ನಾಟಕ ಅಕಾಡೆಮಿ ಇವರಿಗೆ ೧೯೮೭ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ. ಬಳ್ಳಾರಿಯಂತಹ ಕನ್ನಡ ನೆಲ ಮರೆಯಲಾರದ ಶ್ರೇಷ್ಠ ನಟ ಎಲಿವಾಳ ಸಿದ್ಧಯ್ಯನವರು"[೧೩]

೨. ಏಣಿಗಿ ಕಾಸಿಂ ಸಾಹೇಬ್

“ಗ್ರಾಮೀಣ ಪ್ರದೇಶದಲ್ಲಿ ಅತ್ಯುದ್ಭುತವಾದ ನಟನೆ ನೀಡಬಲ್ಲ ಕಲಾವಿದರು ನೂರಾರು ಜನರಿದ್ದಾರೆ. ಎಲೆಮರೆಯ ಕಾಯಿಯಂತೆ ಅವರ ಕಲೆ ಗೌಪ್ಯವಾಗಿದೆ. ಅದಕ್ಕೆ ಉತ್ತಮವಾದ ಉದಾಹರಣೆಯೆಂದರೆ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಏಣಿಗಿ ಗ್ರಾಮದ ಕಾಸಿಂ ಸಾಹೇಬರು. ಇವರು ೫೦೦ಕ್ಕೂ ಹೆಚ್ಚು ನಾಟಕಗಳನ್ನು ನಿರ್ದೇಶಿಸಿದ ಅಪ್ರತಿಮ ಕಲಾವಿದರು.”[೧೪]

“ಇವರ ಹುಟ್ಟು ೧೯೨೭ರಲ್ಲಿ ವ್ಯಾಸಂಗ ಆರನೇ ತರಗತಿಯವರೆಗೆ ಮಾತ್ರ. ವಿದ್ಯಾಭ್ಯಾಸ ನಿಂತ ಮೇಲೆ ಸಂಗೀತ ಹೆಚ್ಚು ಹತ್ತಿರವಾಗತೊಡಗಿತು. ಅವರ ಹುಚ್ಚಿಗೆ ಬೆಂಬಲವಾಗಿಯೋ ಎಂಬಂತೆ ೧೯೪೪ರಲ್ಲಿ ಹಂಪಸಾಗರಕ್ಕೆ ‘ಪಂಚಾಕ್ಷರಿ ನಾಟಕ ಕಂಪನಿ’ ಬಂದಿತ್ತು. ಕಾಸಿಂಗೆ ಪೈಸೆ ಪೈಸೆ ಕೂಡಿಸಿ ನೋಡುವ ಹುಚ್ಚು ಕ್ರಮೇಣ ಮನಸ್ಸಿಗೆ ಮಚ್ಚಾಗತೊಡಗಿತು. ಎಷ್ಟು ಸಾಧ್ಯವೋ ಅಷ್ಟು ನಾಟಕ ಪ್ರಯೋಗಗಳನ್ನು ನೋಡಿದರು. ಯಾವಾಗಲೂ ಚಿಕ್ಕವರಿದ್ದಾಗ ಹಾರ್ಮೋನಿಯಂ ಮಾಸ್ತರ ಪಕ್ಕದಲ್ಲಿಯೇ ಕುಳಿತುಕೊಳ್ಳುತ್ತಿದ್ದರು. ಕೆಲವು ದಿನ ಕಾದು ಕಂಪನಿಯ ಮಾಸ್ತರರಾದ ನಾಗಭೂಷಣ ಗವಾಯಿಗಳನ್ನು ಪರಿಚಯ ಮಾಡಿಕೊಂಡ ಸಾಹೇಬರು ಅನಂತರ ಅವರನ್ನೇ ಗುರುಗಳೆಂದು ಸ್ವೀಕರಿಸಿದರು.”[೧೫]

ಹಂಪಸಾಗರದಲ್ಲಿ ೧೯೪೫ರಲ್ಲಿ ‘ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ’ ನಾಟಕದಲ್ಲಿ ಅಭಿನಯಿಸುವುದರ ಮೂಲಕ ಕಾಸಿಂ ರಂಗಭೂಮಿಗೆ ಪಾದಾರ್ಪಣೆ ಮಾಡಿದರು. ನಾಟಕಕ್ಕೆ ಅಭೂತಪೂರ್ವ ಯಶಸ್ಸು ದೊರೆಯಿತು. ನೆರೆಯ ಊರುಗಳಾದ ತಂಬ್ರಹಳ್ಳಿ, ನಾರಾಯಣದೇವರಕೆರೆ ಮೊದಲಾದ ಕಡೆ ಪ್ರದರ್ಶನಗೊಂಡು ಮನೆ ಮಾತಾಯಿತು. ಕಾಸಿಂರಿಗೆ ಒಂದೆರಡು ವರ್ಷಗಳಲ್ಲಿಯೇ ನಟನೆ ಬೇಜಾರಾಯಿತು. ಹೀಗಾಗಿ ನಾಟಕದ ನಿರ್ದೇಶನಕ್ಕೂ ಕೈ ಹಾಕಿದರು. ಹೇಮರೆಡ್ಡಿ ಮಲ್ಲಮ್ಮ, ಸತ್ಯಹರಿಶ್ಚಂದ್ರ, ಚಿತ್ರಾಂಗದ, ರಕ್ತರಾತ್ರಿ, ದೇವರ ದುಡ್ಡು, ರಾಜಾವಿಕ್ರಮ, ಮಹಾಸತಿ ಅನಸೂಯ, ಕುರುಕ್ಷೇತ್ರ, ಅಕ್ಷಯಾಂಬರ, ನರವೀರ ಪಾರ್ಥ, ಕಿತ್ತೂರ ಚೆನ್ನಮ್ಮ, ವೀರಸಿಂಧೂರ ಲಕ್ಷ್ಮಣ, ಸಂಗೊಳ್ಳಿರಾಯಣ್ಣ ಮೊದಲಾದ ಸಾಮಾಜಿಕ, ಪೌರಾಣಿಕ ನಾಟಕಗಳನ್ನು ಅನಕ್ಷರಸ್ಥರಿಗೂ ಪರಿಣಾಮಕಾರಿಯಾಗಿ ಕಲಿಸಿದರು. ನಾರದ, ಅರ್ಜುನ, ಮಲ್ಲಿಕಾರ್ಜುನ, ಅಶ್ವತ್ಥಾಮ, ಭೀಮ, ರಾಜಾವಿಕ್ರಮ, ಹರಿಶ್ಚಂದ್ರ ಮೊದಲಾದ ಪಾತ್ರಗಳನ್ನು ಲೀಲಾಜಾಲವಾಗಿ ನಿರ್ವಹಿಸಿ ಉತ್ತಮನಟ ಅನ್ನಿಸಿಕೊಂಡರು.

ಗುಡಿಗೇರಿ ಬಸವರಾಜರ ಕಂಪನಿ, ಸುಳ್ಳದ ದೇಸಾಯಿಯವರ ಕಂಪನಿ, ಕುಕನೂರ ಕಂಪನಿ, ಬನ್ನಿಕಲ್ಲು ಕಂಪನಿ ಇತ್ಯಾದಿ ನಾಟಕ ಕಂಪನಿಗಳಲ್ಲಿ ದುಡಿದ ಅನುಭವಗಳಿಸಿದ್ದ ಕಾಸಿಂ ಸಾಹೇಬರು ‘ಮಾರುತಿ ಪ್ರಸಾದಿತ ನಾಟ್ಯ ಸಂಘ’ ಸ್ಥಾಪಿಸಿ ಅದರ ಉಸ್ತುವಾರಿ ನೋಡಿಕೊಂಡರು.

ಉತ್ತಮ ಕಂಠ ಮಾಧುರ್ಯದಿಂದ ಅತ್ಯುತ್ತಮ ಗಾಯಕರೂ ಆಗಿರುವುದರಿಂದ ಗಾಯಕ, ನಟರಾಗೇ ಜನಪ್ರಿಯರಾದರು. ಹೊನ್ನಾಳಿಯ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳಿಂದ, ಮುಂಡರಗಿಯ ಅನ್ನದಾನೇಶ್ವರ ಮಹಾಸ್ವಾಮಿಗಳಿಂದ, ಗದುಗಿನ ತೋಂಟದಾರ್ಯ ಸ್ವಾಮಿಗಳಿಂದ, ಕಾಸಿಂರು

[illegible]

ಸನ್ಮಾನಿತರಾಗಿದ್ದಾರೆ. ಮುಂಡರಗಿ ಹವ್ಯಾಸಿ ಕಲಾವೃಂದದವರು ೧೯೭೬ರಲ್ಲಿ ಇವರಿಗೆ ನಾಟಕ ಕಲಾ ಭೂಷಣ ಬಿರುದನ್ನು ನೀಡಿ ಗೌರವಿಸಿದ್ದಾರೆ. ೧೯೮೪ರಲ್ಲಿ ನಾಟಕ ಅಕಾಡೆಮಿ ಪುರಸ್ಕಾರ ದೊರೆತಿದೆ."[೧೬]

೮. ಡಿ.ದುರ್ಗಾದಾಸ್

"ಹೊಸಪೇಟೆ ತಾಲ್ಲೂಕಿನ ನಾರಾಯಣಕೆರೆ ಗ್ರಾಮದವರು. ಇವರು ರಂಗ ಭೂಮಿಗೆ ಮೂಡಲಪಾಯ ಮತ್ತು ಬಯಲಾಟದ ಮುಖಾಂತರ ಪಾದಾರ್ಪಣೆ ಮಾಡಿದರು. ಮುಂದೆ ವೃತ್ತಿ ನಾಟಕ ಸಂಸ್ಥೆ ಸೇರಿದರು. ಗರುಡ ಸದಾಶಿವರಾಯರ ಕಂಪನಿಯಲ್ಲಿ ಏಳು ವರ್ಷದ ಬಾಲಕನಾಗಿದ್ದಾಗಿನಿಂದ ಬಣ್ಣ ಹಚ್ಚಿದವರು. ಡಿ.ದುರ್ಗಾದಾಸರು ಬಳ್ಳಾರಿ ಜಿಲ್ಲೆಯಲ್ಲದೇ, ಕನ್ನಡ ರಂಗಭೂಮಿಯು ಮರೆಯಲಾಗದ ಅಪ್ಪಟ ಪ್ರತಿಭೆ.

ಆರಂಭವು ನಾಟಕ ಮಂದಿರವೇ ಶಿಕ್ಷಣದ ಮೂಲವಾಯಿತು. ಇವರ ಅಕ್ಕ ಡಿ.ಹನುಮಂತಮ್ಮ ವಿಶ್ವಕಲಾದರ್ಶನ ನಾಟಕ ಕಂಪನಿಯನ್ನು ಕಟ್ಟಿದಂತಹ ಮಹಿಳೆ. ಹೆಣ್ಣು ಮಕ್ಕಳೇ ರಂಗಭೂಮಿಯಲ್ಲಿ ಇರದಂತಹ ಪರಿಸ್ಥಿತಿಯಲ್ಲಿ ಒಬ್ಬ ಮಹಿಳೆ ನಾಟಕ ಕಂಪನಿ ಕಟ್ಟುವುದು ಎಂದರೆ ಸಾಮಾನ್ಯ ಮಾತೇನು ಅಲ್ಲ. ಕಲಾ ಆಸಕ್ತಿ ಇದ್ದ ದುರ್ಗಾದಾಸರಿಗೆ ಇನ್ನೂ ಕೇಳಬೇಕೆ ಚಿಗುರೊಡೆದ ಕಾಲ ಚೇತನ ಅವರಲ್ಲಿ ಮೈಗೂಡಿಕೊಂಡಿತು. ಇವರ ಕುಟುಂಬವೇ ಮೂಡಲಪಾಯ ಬಯಲಾಟ ಆಡುತ್ತಿದ್ದರು. ಕುಟುಂಬದ ಸಹೋದರ, ಸಹೋದರಿಯರು ಬಣ್ಣ ಹಚ್ಚಿಕೊಂಡು ಕ್ಷೇತ್ರಕ್ಕೆ ಕಾಲಟ್ಟಿದ್ದರಿಂದ ಇವರಿಗೆ ಬಣ್ಣ ಹಚ್ಚಿಕೊಳ್ಳುವ ಕಲೆಯು ಕಷ್ಟದಾಯಕವೆನ್ನಿಸಲಿಲ್ಲ."[೧೭]

"ವಾಮನರಾವ್ ಮಾಸ್ತರರ ಕಂಪನಿಯಲ್ಲಿ, ತಮ್ಮ ಸಹೋದರಿಯ ವಿಶ್ವಕಲಾದರ್ಶನ ನಾಟಕ ಕಂಪನಿಯಲ್ಲಿ ದುಡಿದರು. ಕಂದಗಲ್ಲರ ಶ್ರೀ ಅರವಿಂದ ನಾಟ್ಯ ಸಂಘದ ಬಡತನದ ಭೂತ ನಾಟಕದ 'ಇಂದಿರಾಚರಣ'ನ ಪಾತ್ರದಲ್ಲಿ ಜನಪ್ರಿಯರಾದರು. ಅಂದಿನ ಯುವ ಜನಾಂಗಕ್ಕೆ ಇವರು ಒಂದು ಮಾದರಿ ಎಂಬಷ್ಟು ಇವರ ಶೈಲಿ ಜನಪ್ರಿಯವಾಗಿತ್ತು. ಅನಂತರ ನಾಟಕ ರಚನೆಗೂ ಕೈ ಹಾಕಿ ಹಲವಾರು ಪ್ರಸಿದ್ಧ ನಾಟಕಗಳನ್ನು ರಚಿಸಿದರು. ಇವರ ಅನೇಕ ನಾಟಕಗಳನ್ನು ಬೇರೆ ಬೇರೆ ಕಂಪನಿಗಳವರು ಅಭಿನಯಿಸಿದ್ದಾರೆ.

ಇವರ ನಿರ್ಮಲ, ದ್ರುಪದ ಕನ್ಯೆ ನಾಟಕಗಳನ್ನು ನಾಡಿನ ಹೆಸರಾಂತ ವೃತ್ತಿ ನಾಟಕ ಸಂಸ್ಥೆಗಳು ಅಭಿನಯಕ್ಕೆತ್ತಿಕೊಂಡು ಜನಪ್ರಿಯಗೊಳಿಸಿವೆ. ಹಲವಾರು ಕನ್ನಡ ನಾಟಕಗಳನ್ನು ಮರಾಠಿ ಭಾಷೆಗೆ ತರ್ಜುಮೆ ಮಾಡಿದ್ದಾರೆ. ಹಾಗೆಯೇ ಆಂಧ್ರಪ್ರದೇಶ, ತಮಿಳುನಾಡಿನಲ್ಲಿಯೂ ಅನೇಕ ನಾಟಕಗಳನ್ನು ಭಾಷಾಂತರಗೊಳಿಸಿ ಆಡಿಸಿ ತೋರಿಸಿ ಕನ್ನಡ ರಂಗಭೂಮಿಯ ಪರಂಪರೆಯನ್ನು ಕಾಪಾಡಿದ್ದಾರೆ. ಉತ್ತಮ ಅಭಿನಯ, ನಿರ್ದೇಶನ, ಸಂಗೀತ, ನೃತ್ಯ ಹಾಗೂ ಉಡುಗೆ-ತೊಡುಗೆಗಳಲ್ಲಿ ಔಚಿತ್ಯದಿಂದ ನಿರ್ದೇಶನ ಮಾಡಿದ್ದಾರೆ. ಬಳ್ಳಾರಿಯ ರಾಘವ ಸ್ಮಾರಕ ಸಮಿತಿಯವರು ೧೯೭೯ರಲ್ಲಿ ದುರ್ಗಾದಾಸರವರಿಗೆ "ಕಲಾಕಿನ್ನರ" ಎಂಬ ಬಿರುದಿತ್ತು ಸನ್ಮಾನಿಸಿದ್ದಾರೆ. ವಿಜಾಪುರದಲ್ಲಿ ಕಂದಗಲ್ ಹನುಮಂತರಾಯ ಸ್ಮೃತಿ

ನಾಟಕೋತ್ಸವ ಸಂದರ್ಭದಲ್ಲಿ ೧೯೬೫ರಲ್ಲಿ ಕರ್ನಾಟಕ ಶೇಕ್ಸ್‌ಪಿಯರ್ "ನಾಟಕ ಕೇಸರಿ" ಎಂಬ ಬಿರುದು ನೀಡಿ ಗೌರವಿಸಲಾಗಿದೆ."[೧೮]

೬. ಹಣ್ಣೆ ವೀರಭದ್ರಪ್ಪ

ಹಣ್ಣೆ ವೀರಭದ್ರಪ್ಪನವರು ಹೂವಿನಹಡಗಲಿಯಲ್ಲಿ ಆಗಸ್ಟ್, ೧೯೧೪ರಂದು ಹುಟ್ಟಿದರು. ಕಲಿತದ್ದು ನಾಲ್ಕನೇ ತರಗತಿಯವರೆಗೆ ಮಾತ್ರ. ಮನೆಯ ಆರ್ಥಿಕ ಪರಿಸ್ಥಿತಿಯಿಂದ ಓದಿಗೆ ತಿಲಾಂಜಲಿ ನೀಡಲಾಯಿತು. ಚಿಕ್ಕಂದಿನಿಂದಲೇ ತಾಯಿ ಮಮತೆಯಿಂದ ದೂರಾದ ಇವರು ಮಾವಂದಿರ ಪೋಷಣೆಯಲ್ಲಿ ಬೆಳೆದರು. ಮನೆಯಲ್ಲಿ ಮಲತಾಯಿ ಮತ್ತು ಸಂಬಂಧಿಕರ ಕಿರುಕುಳ ತಾಳಲಾರದೆ ಎಳೆ ಜೀವ ತನ್ನ ಹದಿನಾಲ್ಕನೇ ವಯಸ್ಸಿನಲ್ಲಿ ಮನೆ ತೊರೆದು ಹೊಸಪೇಟೆವೊಂದರಲ್ಲಿ ಜೀವನ ಸಾಗಿಸಬೇಕಾಯಿತು.

೧೯೨೮ರಲ್ಲಿ ಗದುಗಿನ ಡಂಬಳ ನಾಟಕ ಕಂಪನಿವೊಂದರಲ್ಲಿ ಕಲಾಜೀವನಕ್ಕೆ ಕಾಲಿಟ್ಟರು. ವಾಣಿ ವಿಲಾಸ ನಾಟಕ ಕಂಪನಿಯಲ್ಲಿ ಬಾಲ ಕಲಾವಿದರಾಗಿ ಜೀವನ ಪ್ರಾರಂಭಿಸಿದರು. ಇವರು ಅಲ್ಲಿಂದ ಮುಂದೆ ಅಸಂಖ್ಯಾತ ನಾಟಕಗಳಲ್ಲಿ ಅಭಿನಯಿಸಿ ತಮ್ಮಲ್ಲಿ ಅಡಗಿದ್ದ ನಟನಾ ಶಕ್ತಿಗೆ ಚಾಲನೆ ನೀಡಿದರು. ಮಲ್ಲಿಕಾರ್ಜುನ ಮನ್ಸೂರು, ಬಸವರಾಜ ಮನ್ಸೂರು, ರಾಘುವರು ನಟಿಸಿದ ಕಿತ್ತೂರು ಚೆನ್ನಮ್ಮ ನಾಟಕದಲ್ಲಿ ಇವರ 'ಬಾಪುವಿನ' ಪಾತ್ರವನ್ನು ಪ್ರೇಕ್ಷಕರ ಮನಮಿಡಿಯುವಂತೆ ನಿರ್ವಹಿಸಿದ್ದು ಮುಂದಿನ ಅವರ ಕಲಾ ಜೀವನಕ್ಕೆ ಸಿಕ್ಕ ಪ್ರೋತ್ಸಾಹವೇ ಸರಿ ಎನ್ನಬಹುದು. ಕಿತ್ತೂರು ಚೆನ್ನಮ್ಮ ನಾಟಕದಲ್ಲಿನ ಕಮಿಷನರ್ ಪಾತ್ರವನ್ನು ಮೆಚ್ಚಿ ಅಂದಿನ ಮಂತ್ರಿಗಳಾಗಿದ್ದ ಎಸ್.ಆರ್.ಕಂಠಿಯವರು ಇವರಿಗೆ ಕಮೀಷನರ್ ಎಂಬ ಬಿರುದನ್ನಿತ್ತು ಸನ್ಮಾನ ಮಾಡಿದ್ದಾರೆ ಮುಂದೆ ಕಂದಗಲ್ಲರ ಕಲೋದ್ಧಾರ ಕರ್ನಾಟಕ ನಾಟಕ ಸಂಘವನ್ನು ಸೇರಿ ಅಕ್ಷಯಾಂಬರ, ಎಚ್ಚಮನಾಯಕ, ಬಡತನದ ಭೂತ, ಇತ್ಯಾದಿ ನಾಟಕಗಳನ್ನು ಅಭಿನಯಿಸಿ ಪ್ರೇಕ್ಷಕರ ಗಮನಸೆಳೆದಿದ್ದಾರೆ.

೧೯೪೧-೪೨ ರಷ್ಟೊತ್ತಿಗೆ ಹಡಗಲಿ ತಾಲ್ಲೂಕಿನವರೇ ಆದ ಹಕ್ಕಂಡಿ ವೀರಪ್ಪನವರ "ವಿಶ್ವ ರಂಜನಿ ನಾಟಕ ಕಂಪನಿ" ಪ್ರಾರಂಭವಾದ್ದರಿಂದ ಕಲಾಸೇವೆಗೈಯಲು ತಕ್ಕ ಸಂದರ್ಭವೆಂದು ಇಲ್ಲಿಗೆ ಅಡಿಯಿಟ್ಟರು. ಮುಟ್ಟಿದ್ದೆಲ್ಲವೂ ಚಿನ್ನವೆಂಬಂತೆ ಹಾಸ್ಯ ಪಾತ್ರಗಳೇ ಇರಲಿ, ಸ್ತ್ರೀ ಪಾತ್ರಗಳೇ ಇರಲಿ, ಗಂಭೀರ ಪಾತ್ರಗಳೇ ಇರಲಿ, ಕುಡುಕ, ಭಿಕ್ಷುಕ, ಮುದುಕ ಹೀಗೆ ಯಾವುದೇ ಪಾತ್ರ ಮಾಡಿದರು ಅದಕ್ಕೊಂದು ಜೀವತುಂಬಿ ಪ್ರೇಕ್ಷಕರನ್ನು ಮಂತ್ರ ಮುಗ್ಧರನ್ನಾಗಿಸುತ್ತಿದ್ದರು. ಇವರ ಟಿಪ್ಪುಸುಲ್ತಾನದ 'ಕಾರ್ನವಾಲಿಸ್‌ನ' ಪಾತ್ರ ಜನಮನ್ನಣೆಗಳಿಸಿ ಇವರಿಗೆ ಅದೇ ಹೆಸರು ಜನತೆಯಿತ್ತು ಅಭಿಧಾನವಾಗಿದೆ. ಇವರ ಅಭಿನಯದ ಕಲೆ ದೆಹಲಿಯವರೆಗೂ ತಲುಪಿತ್ತು. ಬಳ್ಳಾರಿ ರಾಘುವರಿಂದ ಶಹಭಾಶ್‌ಗಿರಿ ಪಡೆದರು. ಶಿವರಾಮಕಾರಂತರ ನೃತ್ಯ ತಂಡಕ್ಕೆ ಕೊಳಲು ನುಡಿಸಿ ಮೆಚ್ಚಿಗೆ ಪಡೆದವರು ನಾಟಕಗಳಲ್ಲಿಯೇ ವಿಶೇಷವಾಗಿರುವ "ದಾರುಬಂದಿ" ಎಂಬ ನಾಟಕವನ್ನು ಸ್ವತಃ ರಚಿಸಿದರು.

ಕೋಲು ಮುಖ ನೀಟಾದ ಮೈಕಟ್ಟು ಕಂಚಿನ ಕಂಠವಾದ ಸ್ವರ, ಸನ್ನಿವೇಶಕ್ಕೆ ತಕ್ಕಂತೆ ಠೀವಿ, ಸಂಭಾಷೆಯಲ್ಲಿ ಅಚ್ಚುಕಟ್ಟುತನ ಹಾಗೂ ಸ್ಪಷ್ಟವಾದ ಭಾಷೆ, ನಡಿಗೆಯಲ್ಲಿ ವಿನೂತನ ಶೈಲಿ, ಹಣ್ಣಿ ವೀರಭದ್ರಪ್ಪನವರ ಪಾತ್ರಗಳನ್ನು ಜೀವಂತಗೊಳಿಸಿದ್ದವು. ತಮ್ಮಷ್ಟಕ್ಕೆ ತಾವೇ ಅಲಂಕಾರ ವೇಷ ಭೂಷಣ ಮಾಡಿಕೊಳ್ಳುವುದು ಅಷ್ಟೊಂದು ಸುಲಭ ಸಾಧ್ಯವಾದುದೇನೂ ಅಲ್ಲ. ಅಪಾರವಾದ ಕಲಾ ಪ್ರತಿಭೆ ಇದ್ದರೆ ಮಾತ್ರ ಸಾಧ್ಯ ಇದನ್ನು ಅವರು ಸಾಧಿಸಿಕೊಂಡಿದ್ದರು. ತಾವೇ ಬರೆದ "ದಾರುಬಂದಿ" ನಾಟಕ ಪ್ರಕಟಗೊಂಡು ಯಶಸ್ವಿ ಕಂಡಿದ್ದರೆ ರಂಗಕಲೆಯು ಇತಿಹಾಸದಲ್ಲೇ ವಿಶಿಷ್ಟ ಸ್ಥಾನ ಪಡೆಯುತ್ತಿತ್ತು. ನಾಟಕವು ಹಸ್ತಪ್ರತಿಯಲ್ಲಿದ್ದುದರಿಂದ ಪ್ರಚಾರ ಹೊಂದದೇ ಅದು ಯಶಸ್ವಿಗೊಳ್ಳಲಿಲ್ಲ. ಇವರು ಅಭಿನಯಿಸಿದ ನಾಟಕಗಳು ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿರದೇ ಮಹಾರಾಷ್ಟ್ರ, ಮುಂಬೈ, ಆಂಧ್ರಪ್ರದೇಶ, ಮದ್ರಾಸ್, ದೆಹಲಿಯ ಪ್ರೇಕ್ಷಕರನ್ನು ರೋಮಾಂಚನಗೊಳಿಸಿದವು."[೪೯] ಇವರು ರಂಗಭೂಮಿಯ ಉತ್ತಮ ಕಲಾವಿದರೆಂದು ಗುರುತಿಸಿ ನಾಟಕ ಅಕಾಡೆಮಿಯು ೧೯೯೨ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ.

೧೧. ಹೊಸಪೇಟೆ ಕೆ. ಶ್ರೀಶೈಲಪ್ಪ

"ಹೊಸಪೇಟೆ ಕೆ.ಶ್ರೀಶೈಲಪ್ಪನವರನ್ನು ಕಂಡಾಗ ನಾಟಕ ರಂಗದ ಬಗ್ಗೆ ನಿಜವಾದ ಕಳಕಳಿಯಿರುವ ವ್ಯಕ್ತಿ ಎಂದೆನಿಸುತ್ತದೆ. ೧೯೪೩ರ ಕ್ವಿಟ್ ಇಂಡಿಯಾ ಚಳುವಳಿಯ ಸಮಯದಿಂದ ಸಾಗಿ ಬಂದು ೧೯೪೨ರಲ್ಲಿ ರಾಜಶೇಖರ ಎಂಬ ಐತಿಹಾಸಿಕ ನಾಟಕದಿಂದ ರಂಗಬದುಕಿಗೆ ಕಾಲಿಟ್ಟಿದ್ದಾರೆ. ಅಂದಿನ ನಾಟಕದಲ್ಲಿ ಪಿಯಾನೋ ವಾದಕರಾಗಿದ್ದ ದಿವಂಗತ ಹನುಮಂತರಾವ್ ಅವರು ಇವರ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಿ, ತಮ್ಮ ಶಿಷ್ಯರನ್ನಾಗಿ ಸ್ವೀಕರಿಸಿ, 'ಚಂದ್ರಕಾಂತ' ಎಂಬ ಸಾಮಾಜಿಕ ನಾಟಕದಲ್ಲಿ ಪ್ರಮುಖ ಪಾತ್ರಕ್ಕೆ ತರಬೇತಿ ನೀಡಿದರು. ಅಂದಿನ ವಿಜಯಾ ನಾಟಕದಿಂದ ಜನಮೆಚ್ಚಿಗೆಗೆ ಪಾತ್ರರಾದರು. ಗಜಾನನೋತ್ಸವದಲ್ಲಿ ಈಗಲೂ ಪ್ರತಿವರ್ಷ ಭಕ್ತ ಕನಕದಾಸ, ಶಾಂತಿ ಎಲ್ಲಿ, 'ಹೃದಯದೇಗುಲ', 'ಅಳಿಯ ದೇವರು', 'ಉತ್ತರ ಭೂಪ' ಹಾಗೂ ದಿವಂಗತ ಹಿರಣ್ಣಯ್ಯನವರ 'ದೇವದಾಸಿ' ನಾಟಕಗಳನ್ನು ಆಡುತ್ತಾ ಬಂದಿದ್ದಾರೆ. ಈಗಲೂ ಒಂದಲ್ಲ ಒಂದು ನಾಟಕದಲ್ಲಿ ನಿರ್ದೇಶನ, ರಂಗಸಜ್ಜಿಕೆಗಳಲ್ಲಿ ದಕ್ಷತೆಯಿಂದ ಕಲಾ ಸೇವೆ ಮಾಡುತ್ತಿದ್ದಾರೆ.

೧೯೭೪ರಲ್ಲಿ ಚಳ್ಳಕೇರಿಯಲ್ಲಿ ರಾಜ್ಯ ಮಟ್ಟದ ನಾಟಕ ಸ್ಪರ್ಧೆಯಲ್ಲಿ 'ದತ್ತಕಮಗ' ನಾಟಕಕ್ಕೆ ಪ್ರಥಮ ಬಹುಮಾನ ಗಳಿಸಿದ್ದಲ್ಲದೆ ೧೯೫೧ರಲ್ಲಿ ದೆಹಲಿಯಲ್ಲಿ ಆಗಿನ ಸಾರಿಗೆ ಮಂತ್ರಿ ಶ್ರೀಮತಿ ಸರೋಜಿನಿ ಮಹಿಷಿಯರ ಸಮ್ಮುಖದಲ್ಲಿ ನಡೆದ ಸರ್ವಭಾಷಾ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸಿ ಎಲ್ಲರ ಮೆಚ್ಚುಗೆಗಳಿಸಿದ್ದಾರೆ."[೫೦] ಇವರು ಪೌರಾಣಿಕ ನಾಟಕಗಳಲ್ಲಿ ಅಭಿನಯಿಸದೆ ಇರುವುದು ಗಮನಿಸಬೇಕಾದ ಅಂಶವಾಗಿದೆ.

[illegible]

೧೧. ಹೆಚ್.ಮರಿಯಣ್ಣ

"ಉತ್ತರ ಕರ್ನಾಟಕದ ವೃತ್ತಿರಂಗಭೂಮಿಯಲ್ಲಿ 'ಆಪದ್ಬಾಂಧವ ನಟ'ನೆಂದೇ ಹೆಸರುವಾಸಿಯಾಗಿರುವ ಹೊಸಪೇಟೆ ಹೆಚ್.ಮರಿಯಣ್ಣನವರು, ಹಲವಾರು ವೃತ್ತಿ ನಾಟಕ ಕಂಪನಿಗಳಲ್ಲಿ ಕಳೆದ ಅರ್ಧಶತಮಾನಕ್ಕೂ ಹೆಚ್ಚು ಕಾಲ ಸೇವೆಸಲ್ಲಿಸಿರುವ ಹರಿವಾಳದ ಮರಿಯಣ್ಣ ಯಾವ ಪಾತ್ರದ ಕೊರತೆ ಬಂದರೂ ನಿರ್ವಹಿಸಲು ಸದಾ ಸಿದ್ಧರಾಗಿರುತ್ತಾರೆ. ತಬಲ, ಹಾರ್ಮೋನಿಯಂ ಬಾರಿಸಲು, ಮೇಕಪ್ ಮಾಡಲು ಹಾಗೂ ಕಂಪನಿಯ ನಿರ್ವಹಣೆ ಮಾಡುವುದನ್ನೂ ಅವರು ಅರಿತಿದ್ದಾರೆ. ಬಾಲನಟನಾಗಿ ಭರತನ ಪಾತ್ರದಿಂದ 'ಕೊಂಡು ತಂದ ಗಂಡ' ನಾಟಕದ ನಾಯಕ ನಟನಾಗಿ ಮೆರೆದ ಕಾಲವನ್ನು ಇಂದಿಗೂ ಅವರು ನೆನೆಯುತ್ತಾರೆ. ಹುಟ್ಟು ಕುರುಡರಾದ ಬಸವಣ್ಣಪ್ಪನವರ ಯೋಗ ಕ್ಷೇಮ ನೋಡಿಕೊಳ್ಳಲು ಜವಾಬ್ದಾರಿ ಹೊತ್ತ ಸಹೋದರ ಮರಿಯಣ್ಣನ ಪಾಲಿಗೆ ಬಂತು. ಎಂಟು ವರ್ಷದವರಿದ್ದಾಗಲೇ ಬಸವಣ್ಣಪ್ಪನವರ ಜೊತೆ ಬಾಲಕ ಮರಿಯಣ್ಣ ಅಲೆಯ ತೊಡಗಿದರು. ಈ ಸಂದರ್ಭದಲ್ಲಿ ಮರಿಯಣ್ಣನ ಅಣತಿ ಪ್ರಕಾರ ಹುಲಿಮನಿ ಸೀತಾರಾಮಶಾಸ್ತ್ರಿ ಅವರ ಕಂಪನಿಯಲ್ಲಿ ಬಾಲ ನಟನಾಗಿ ವೃತ್ತಿ ರಂಗಭೂಮಿಗೆ ಧುಮುಕಿದರು. ಬರುಬರುತ್ತಾ ಸ್ತ್ರೀ ಪಾತ್ರದಲ್ಲಿ ಮಿಂಚಿ, ನಂತರ ಪುರುಷ ಪಾತ್ರಗಳಲ್ಲಿ ಲೀಲಾಜಾಲವಾಗಿ ಅಭಿನಯ ನೀಡಿ ನೋಡುಗರ ಮೆಚ್ಚುಗೆಗಳಿಸಿದರು.

ಕೌಲಿ ಚೆನ್ನಬಸಪ್ಪನವರ 'ಕಲಾ ಪ್ರಕಾಶನಾಟ್ಯ ಸಂಘ' ಬ್ಯಾಡಗಿ, ಏಣಗಿ ಬಾಳಪ್ಪನವರ ಕಂಪನಿ, ಬಿ.ಆರ್.ಅರಿಶಿಣ ಗುಡಿ ಕಂಪನಿ ಇತ್ಯಾದಿ ಹಲವಾರು ಕಂಪನಿಗಳಲ್ಲಿ ಅಭಿನಯ, ಹಾಡು, ವಾದನ, ಆಡಳಿತ ನಿರ್ವಹಣೆ ಮುಂತಾದವುಗಳಲ್ಲಿ ಪರಿಣಿತಿ ಪಡೆದಿದ್ದಾರೆ. "ಲವ್ ಇನ್ ಹುಬ್ಬಳ್ಳಿ" ಎಂಬುದು ಹುಬ್ಬಳ್ಳಿ ನಗರದ ಸಮಸ್ಯೆಗಳ ಬಗ್ಗೆ ಇರುವ ಹೊಸ ಪ್ರಯೋಗವೊಂದನ್ನು ಮರಿಯಣ್ಣ ಪ್ರಯೋಗಿಸಿದ್ದರು. ಮರಿಯಣ್ಣ ತಮ್ಮ ಅರವತ್ತೆಂಟನೆಯ ವಯಸ್ಸಿನಲ್ಲಿಯೂ ವೃತ್ತಿ ನಾಟಕ ಕಂಪನಿಗಳಿಂದ ಯಾವುದೇ ಪಾತ್ರಕ್ಕೆ ಕರೆ ಬಂದರೂ ಕೆಲಸ ಮಾಡಲು ಹೋಗುತ್ತಾರೆ. ಈ ಇಳಿವಯಸ್ಸಿನಲ್ಲೂ ಅಂಥ ಕುಗ್ಗದ ಉತ್ಸಾಹ ಮರಿಯಣ್ಣ ಅವರದು. ಮರಿಯಣ್ಣನವರ ಮೂಲಕ ಸಾಹಿತ್ಯಕ್ಕೆ ಬೆಲೆಕೊಟ್ಟು ನಿರ್ದೇಶಕನ ಹಿರಿತನದಲ್ಲಿ ನಾಟಕಗಳು ಸಿದ್ಧವಾಗುತ್ತಿದ್ದವು. ಆದರೆ ಇಂದು ಬದುಕುವುದಕ್ಕಾಗಿ ಪ್ರೇಕ್ಷಕನ ಅಭಿರುಚಿ ಕೆಡೆಸುತ್ತಿರುವ ವೃತ್ತಿ ರಂಗಭೂಮಿ ತಿದ್ದಿಕೊಳ್ಳಬೇಕಾದ ಅನಿವಾರ್ಯತೆಯ ಕಾಲ ಬಂದಿದೆ ಎನ್ನುತ್ತಾ ವಿಷಾದದಿಂದ ನುಡಿಯುತ್ತಾರೆ. ಈ ಹಿರಿಯ ನಟನಿಗೆ ನಾಟಕ ಅಕಾಡೆಮಿ ಪ್ರಶಸ್ತಿಯು ೧೯೯೯ರಲ್ಲಿ ಇವರ ಕಲಾ ಸೇವೆಗೆ ಸಂದಿದೆ."[೨೨]

೧೨. ಎಂ.ಪಿ.ಪ್ರಕಾಶ್

"ಕನ್ನಡ ಹವ್ಯಾಸಿ ರಂಗಭೂಮಿಯ ಬೆಳವಣಿಗೆಯನ್ನು ನಾವು ನೋಡಿದರೂ ರಂಗಕ್ರಿಯಾ ಶೀಲತೆಗೆ ಒತ್ತುಕೊಟ್ಟು ಸೃಜನಶೀಲತೆಯನ್ನು ಮೆರೆದವರಲ್ಲಿ ಎಂ.ಪಿ.ಪ್ರಕಾಶ್ ಅವರೂ ಒಬ್ಬರು. ಅವರ ಕೊಡುಗೆ ಅನನ್ಯವಾದುದೇ ಸರಿ. ರಂಗಕರ್ಮಿ ಎಂ.ಪಿ.ಪ್ರಕಾಶ್ ಅವರು ಸತತ ಅಭ್ಯಾಸಿಗಳ ಆಳವಾದ ವಿಷಯ

ಜ್ಞಾನ ಹೊಂದಿರುವ ಉತ್ತಮ ವಾಗ್ಮಿಗಳು, ಸಮಯ ಪ್ರಜ್ಞೆ, ಸಂಯಮತೆ ಹಾಗೂ ಸಂಸ್ಕತಿ ನೃತ್ಯ ಕಲಾವಿದರೊಡನೆ ಸಕ್ರಿಯ ಸಂಪರ್ಕವಿಟ್ಟುಕೊಂಡು ರಂಗ ಕಲೆಯ ಭವಿಷ್ಯಕ್ಕಾಗಿ ಶ್ರಮಿಸುತ್ತಿರುವುದು ಅವರ ಸಾಂಸ್ಕೃತಿಕ ಕಾಳಜಿಯ ದ್ಯೋತಕವಾಗಿದೆ."[೨೨]

"ಕರ್ನಾಟಕ ರಾಜ್ಯದ ರಾಜಕೀಯ ವಲಯದಲ್ಲಿ ಸಮಾಜವಾದಿ ಹಿನ್ನೆಲೆಯಿಂದ ಬಂದ ಬೆರಳೆಣಿಕೆಯ ಬಹು ಪ್ರಮುಖ ರಾಜಕಾರಣಿಗಳಲ್ಲಿ ಎಂ.ಪಿ.ಪ್ರಕಾಶ್ ಒಬ್ಬರು. ಸಮಾಜವಾದದ ತಾತ್ವಿಕ ಚಿಂತನೆ ಹಾಗೂ ಬೌದ್ಧಿಕ ಶ್ರೀಮಂತಿಕೆಯೊಂದಿಗೆ ರಾಜ್ಯದ ಸೃಜನಶೀಲ ವಲಯದಲ್ಲಿಯೂ ಗುರುತಿಸಿಕೊಂಡು ಇವರು ಸಾಹಿತ್ಯ, ಸಂಗೀತ, ನಾಟಕಗಳಂಥ ವೈವಿಧ್ಯಮಯ ಕಲಾಪ್ರಕಾರಗಳಲ್ಲಿ ಆಸಕ್ತಿಯನ್ನಿರಿಸಿಕೊಂಡಿದ್ದಾರೆ.

ಪ್ರಕಾಶ್‌ರವರಿಗೆ ರಂಗಭೂಮಿಯೊಂದಿಗೆ ಸ್ನೇಹ ಲಭಿಸಿದ್ದೇ ಅವರ ೧೧ನೇ ವಯಸ್ಸಿನ ಬಾಲ್ಯದ ಅಂಗಳದಲ್ಲಿ ಆಡುವ ಹೊತ್ತಿಗೆ ಇವರ ಮನಸ್ಸು ರಂಗದ ಕಡೆಗೆ ತಿರುಗಿತು. 'ಜರಾಸಂಧ' ನಾಟಕದ ಮೂಲಕ ಬಣ್ಣದ ಬದುಕಿಗೆ ಇಳಿದ ಇವರು ಅನಂತರದಲ್ಲಿ ಪೃಥ್ವಿ ಮಾಧವ ಭೂಮಾಸುರದಲ್ಲಿ ನಟಿಸಿದರು. ಅವರ ದೊಡ್ಡಪ್ಪನವರೇ ಮಿತ್ರಕೂಟ ಮಂಡಳಿಯನ್ನು ಸ್ಥಾಪಿಸಿದ್ದರಿಂದ ಅಸಂಖ್ಯಾತ ನಾಟಕಗಳಲ್ಲಿ ಪಾತ್ರ ಮಾಡುವ ಅವಕಾಶ ಸುಲಭವಾಗಿ ಸಿಕ್ಕಿತು. ಹಾಗಾಗಿ ನೂರಾರು ನಾಟಕಗಳಲ್ಲಿ ಪಾತ್ರ ಮಾಡಿ ಬಹುಮುಖ ಅನುಭವಗಳಿಸಿದ್ದರಿಂದ ಅವರೊಬ್ಬ ಆದರ್ಶ ನಟರಾಗಿ ಮಾರ್ಪಾಟು ಹೊಂದಿದರು. ಮುಂಬೈಯಲ್ಲಿದ್ದಾಗ ಕೈಲಾಸಂ, ಪರ್ವತವಾಣಿ, ಎ.ಕೆ.ಮೂರ್ತಿಯವರ ನಾಟಕಗಳನ್ನು ಪ್ರದರ್ಶಿಸಿದರು. ಹಾಗೆಯೇ ತಾಯಿ, ಸಾಕ್ರೇಟೀಸ್ ಹೃದಯದೇಗುಲ ಮುಂತಾದ ನಾಟಕಗಳನ್ನು ರಂಗಕ್ಕೆ ತಂದಿದ್ದರು.

ಮುಂಬೈ ಜೀವನ ಆಳವಾದ ಅನುಭವ ದೊರಕಿಸಿಕೊಟ್ಟಿದ್ದರಿಂದ ಅಂಗುಲಿಮಾಲದಲ್ಲಿ ರಾಮಕೃಷ್ಣ ಪರಮಹಂಸರ ಪಾತ್ರದಲ್ಲಿಹಾಗೂ ಅಮ್ರಪಾಲಿ ನಾಟಕದಲ್ಲಿ ಯಶಸ್ಸಿನ ಪಾತ್ರ ಮಾಡಿ ಅಪಾರ ಕೀರ್ತಿಗಳಿಸಿದ್ದಾರೆ. ಹೂವಿನ ಹಡಗಲಿಗೆ ವಕೀಲ ವೃತ್ತಿಗೆ ಬಂದು ಅಲ್ಲಿನ ಹವ್ಯಾಸಿಗಳನ್ನು ಒಂದೆಡೆ ಸೇರಿಸಿ ರಂಗಭಾರತಿಯಂತಹ ತಂಡಗಳನ್ನು ಕಟ್ಟಿದರು. ಆ ಮೂಲಕ ಆರಂಭದಲ್ಲಿ ಏಕಾಂಕ ನಾಟಕಗಳನ್ನು ಆರಂಭಿಸಿ, ಅಸಂಗತ ನಾಟಕಗಳನ್ನು ಮಾಡಿದರು. ಮುಂದುವರೆದ ದಿನಗಳಲ್ಲಿ ಆಷಾಡ ಒಂದುದಿನದಲ್ಲಿ 'ಕಾಳಿದಾಸನ' ಪಾತ್ರದಲ್ಲಿ, ಜೋಕುಮಾರಸ್ವಾಮಿಯಲ್ಲಿ 'ಸೂತ್ರಧಾರನಾಗಿ', ಸೂರ್ಯಶಿಕಾರಿಯಲ್ಲಿ 'ಚಂದ್ರಗುಪ್ತ'ನಾಗಿ ಅಭಿನಯಿಸಿದ್ದರು. ಅಳಿಯ ದೇವರು, ಟಿಪ್ಪುಸುಲ್ತಾನ್, ಬಾಳೊಂದು ನಂದನ, ಯಯಾತಿ, ಆಷಾಡದ ಒಂದು ದಿನ, ಜೋಕುಮಾರಸ್ವಾಮಿ, ಸಂಗ್ಯಾಬಾಳ್ಯಾ ಇತ್ಯಾದಿ ನಾಟಕಗಳಿಗೆ ನಿರ್ದೇಶನವನ್ನು ನೀಡಿದ್ದಾರೆ. ರಂಗಭಾರತಿ ತಂಡವನ್ನು ರಾಜ್ಯದ ರಾಜಧಾನಿ ಬೆಂಗಳೂರು ಹಾಗೂ ರಾಷ್ಟ್ರದ ರಾಜಧಾನಿ ದೆಹಲಿಯ ತನಕ ಪರಿಚಯಿಸುವ ಪ್ರಮುಖ ಸಾಧನೆ ಇವರದಾಗಿದೆ. ಉತ್ಪಲದತ್ತರ ಬಂಗಾಳಿ ನಾಟಕ ಇವರ ಕಣ್ಣಿಗೆ ಬಿದ್ದು ಸೂರ್ಯಶಿಕಾರಿಯ ಹೆಸರಿನಲ್ಲಿ ಕನ್ನಡ ಅನುವಾದವಾಯಿತು. ಇದು ಕರ್ನಾಟಕ ರಂಗಭೂಮಿಗೆ ನೀಡಿದ ಬಹುಮುಖ್ಯ ಕೊಡುಗೆಯಾಗಿದೆ.

ಅಲ್ಲಿಂದೀತನಕ ತಾಲ್ಲೂಕು, ಜಿಲ್ಲೆ ಹಾಗೂ ರಾಜ್ಯ ಮಟ್ಟದಲ್ಲಿ ಅನೇಕ ಜನ ಸಾಹಿತಿಗಳೊಂದಿಗೆ, ಕಲಾವಿದರೊಂದಿಗೆ ಗಾಢ ಸಂಬಂಧವನ್ನು ಇಟ್ಟುಕೊಂಡ ಇವರು ಆ ಮೂಲಕ ಇಡಿ ರಾಜ್ಯದಲ್ಲಿಯೇ ಸಾಹಿತ್ಯಿಕ ತಿಳುವಳಿಕೆ ಇರುವ ಒಬ್ಬ ವಿಶಿಷ್ಟ ಅಪರೂಪದ ರಾಜಕಾರಣಿಯಾಗಿ, ರಂಗತಜ್ಞರಾಗಿಯೇ ಗುರುತಿಸಿಕೊಂಡಿದ್ದಾರೆ. ರಂಗಭೂಮಿ ವಿವಿಧ ಕಲಾ ಪ್ರಕಾರಗಳಲ್ಲಿ ರಂಗ ಸಾಹಿತ್ಯ ಕುರಿತಂತೆ ವಿಶೇಷ ಅಧ್ಯಯನದ ಫಲವಾಗಿ ೧೯೯೮ರ ಸಾಲಿನ ಕರ್ನಾಟಕದ ನಾಟಕ ಅಕಾಡೆಮಿಯ "ಫೆಲೋಷಿಪ್"ನ ಗೌರವಕ್ಕೆ ಪಾತ್ರರಾದರು."[೨೩]

೧೩. ಕೆ.ಜಂಬುನಾಥ

"ಸುಮಾರು ೫೦ವರ್ಷಗಳ ಮೇಲ್ಪಟ್ಟು ರಂಗಾನುಭವ ಪಡೆದಿರುವ ಕೆ.ಜಂಬುನಾಥರವರು ೧೯೩೮ರಲ್ಲಿ ರಂಗಪ್ರವೇಶ ಮಾಡಿದರು. ಹೆಚ್ಚಾಗಿ ಹಾಸ್ಯ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದವರು. ಅಂತೆಯೇ 'ಲಂಕಾದಹನ', 'ಮೋಹಿನಿ ರುಕ್ಮಾಂಗದ', 'ಶ್ರೀಕೃಷ್ಣತುಲಾಭಾರ', 'ನಾರದ ಗರ್ವಭಂಗ', 'ಹಣೆಬರಹ', ನಾಟಕಗಳಲ್ಲಿಯೂ ಹಾಸ್ಯ ಪಾತ್ರಗಳು ಪ್ರಧಾನವಾಗಿವೆ. ಇಲ್ಲಿನ ಅಭಿನಯಕ್ಕಾಗಿ ಪ್ರೇಕ್ಷಕರಿಂದ ದೊರೆತ ಪುರಸ್ಕಾರ ಅಪಾರವಾಗಿದೆ.

ಕೆ.ಜಂಬುನಾಥ ಅವರ ದತ್ತುಮಗ ನಾಟಕದಲ್ಲಿನ 'ಸಕ್ಕುಬಾಯಿ' ಎಂಬ ಬಾಲ ವಿಧವೆಯ ಪಾತ್ರ ವಿಶಿಷ್ಟವಾದುದು. ದೇವದಾಸಿ ನಾಟಕದಲ್ಲಿನ ನಾಜೂಕಯ್ಯನ, ಕುಡುಕನ ಪಾತ್ರಾಭಿನಯಕ್ಕೆ ಪ್ರೇಕ್ಷಕರಿಂದ ಬಂದ ಪ್ರತಿಕ್ರಿಯೆ ಸ್ಮರಣೀಯವಾದುದು. 'ಬೃಹನ್ನಳೆ', 'ರಕ್ಷಿತಾ', 'ಗಂಡ್ಸಲ್ಲ ಗಂಡ್ಸು' ನಾಟಕಗಳಲ್ಲಿನ ನಾಯಕನ ಪಾತ್ರ ವಿಶಿಷ್ಟ ಆಕರ್ಷಣೆ ಹೊಂದಿದ್ದವು. ನನ್ನ ರಾಮರಾಜ್ಯ ನಾಟಕದಲ್ಲಿ 'ಗಾಂಧೀಜಿಯ' ಪಾತ್ರ ಮಾಡಿ ಇಂದಿಗೂ ಬಳ್ಳಾರಿ ಗಾಂಧಿಯಂತಲೇ ಕರೆಸಿಕೊಂಡವರು."[೨೪]

ನಟರಾಗಿ, ಪುರುಷನಿಂದ ಸ್ತ್ರೀಪಾತ್ರದವರೆಗೆ ನಾಯಕನಿಂದ ಖಳನಾಯಕನ ಪಾತ್ರದವರೆಗೆ ಹಾಸ್ಯದಿಂದ ಅಂಧನ ಪಾತ್ರದವರೆಗೆ ವಿವಿಧ ರಸಪೋಷಣೆಯ ಪಾತ್ರಗಳನ್ನು ಯಶಸ್ವಿಯಾಗಿ ನಿರ್ವಹಿಸಿದ ಜಂಬುನಾಥರು ಹಲವಾರು ಸಂಘ ಸಂಸ್ಥೆಗಳಿಂದ ಗೌರವಿಸಿಕೊಂಡಿದ್ದಲ್ಲದೇ ನಾಟಕ ಅಕಾಡೆಮಿಯ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

೧೪. ಬಳ್ಳಾರಿ ಲಲಿತಮ್ಮ

ಪ್ರಸಿದ್ಧ ರಂಗನಟಿ ಬಳ್ಳಾರಿ ಲಲಿತಮ್ಮನವರು ಸುಮಾರು ಎರಡೂವರೆ ದಶಕಗಳ ಕಾಲ ಬಗೆ ಬಗೆಯ ಪಾತ್ರಗಳಿಂದ ರಂಗಶಾರದೆಯ ಸೇವೆ ಮಾಡಿ ಕೀರ್ತಿವಂತರಾಗಿದ್ದಾರೆ. ಇಂತಹ ಕಲಾವಿದೆಯ ಬಣ್ಣದ ಬದುಕು ನಾಡಿನ ಸಂಪದವೇ ಸರಿ.

ಪಿಟೀಲು ವಿದ್ವಾಂಸರಾದ ತಿಮ್ಮಪ್ಪ ಇವರ ತಂದೆ. ಬಳ್ಳಾರಿ ಜಿಲ್ಲೆಯ ಆಮಿದ್ಯಾಲ ಇವರ ಗ್ರಾಮ. ತಂದೆಯ ಪ್ರೋತ್ಸಾಹದಿಂದಾಗಿ ಸಂಗೀತ, ನಾಟ್ಯ ಮತ್ತು ಅಭಿನಯ ಕಲೆಗಳನ್ನು ಒಗ್ಗೂಡಿಸಿಕೊಂಡು ಚಿತ್ರರಂಗದಿಂದ ರಂಗಭೂಮಿಗೆ ಬಂದವರು. ರಂಗಭೂಮಿಯಿಂದ ಚಿತ್ರರಂಗಕ್ಕೆ ಹೋದವರಲ್ಲ. ಜಯಪ್ರದ ಇದು ಲಲಿತಮ್ಮನವರ ಮೊಟ್ಟಮೊದಲನೆಯ ತೆಲುಗು ಚಿತ್ರ. ಸುಮತಿ, ದಾಕ್ಷಿಣಾತ್ಯ, ಬಾಲನಾಗಮ್ಮ ಅಪಾರ ಕೀರ್ತಿ ತಂದುಕೊಟ್ಟ ಚಿತ್ರಗಳಿವು.

ಚಿತ್ರ ರಂಗದಲ್ಲಿದ್ದಾಗಲೇ ಪರಿಚಯವಾದ ಕೆ.ಹಿರಣ್ಣಯ್ಯನವರ ಮೂಲಕ ರಂಗಭೂಮಿಗೆ ಹಿಂದಿರುಗಿದರು. ಇವರು ರಂಗಭೂಮಿಯ ಪ್ರಯುಕ್ತ ಶ್ರದ್ಧೆಯಿಂದ ಕನ್ನಡವನ್ನು ಓದಿ ಪಾತ್ರಗಳನ್ನು ಅಭ್ಯಾಸ ಮಾಡಿ ರೂಢಿಸಲು ಕಲಿತರು. ಆ ದಿನಗಳಲ್ಲಿ ಹೊಸ ಪ್ರಯೋಗ ಎನಿಸಿದ ಸದಾರಮೆ ನಾಟಕದ 'ಸದಾರಮೆ' ಪಾತ್ರದ ಮುಖಾಂತರ ರಂಗಭೂಮಿಯನ್ನು ಪ್ರವೇಶಿಸಿದ ಲಲಿತಮ್ಮ ಅವರು ಕನ್ನಡ ಕಲಾಭಿಮಾನಿಗಳ ಮನಸ್ಸನ್ನು ಆಯಸ್ಕಾಂತದಂತೆ ಸೆರೆಹಿಡಿದರು. ಎಚ್ಚಮನಾಯಕ ನಾಟಕದಲ್ಲಿ ಮೋಹಿನಿ, ಪಂಗನಾಮ, ಮಕ್ಮಲ್‌ಟೋಪಿಯಲ್ಲಿ ಪಂಕಜಾಕ್ಷಿ, ರಾಮಾಯಣದಲ್ಲಿ ಸೀತೆ, ಮಂಡೋದರಿ ಪಾತ್ರ ಮಾಡಿದ್ದಾರೆ. ಸಂಸಾರನೌಕೆ, ಟಿಪ್ಪುಸುಲ್ತಾನ್, ಕಾಳಿದಾಸ ಮೊದಲಾದ ನಾಟಕಗಳಲ್ಲೂ ಲಲಿತಮ್ಮ ಅವರು ಪ್ರಧಾನ ನಾಯಕಿಯ ಪಾತ್ರಗಳನ್ನು ನಿರ್ವಹಿಸಿ ಹುಟ್ಟು ಕಲಾವಿದೆ ಎಂಬುದನ್ನು ಸ್ಥಿರಪಡಿಸಿಕೊಟ್ಟರು. ಇವರು ಲಲಿತಕಲಾ ಸಂಘ ಎಂಬ ಸಂಸ್ಥೆಯನ್ನು ಕಟ್ಟಿ, ಕರ್ನಾಟಕದಾದ್ಯಂತ ನಾಟಕ ಪ್ರದರ್ಶನ ಮಾಡಿ ರಸಿಕರ ಮನವನ್ನು ರಂಜಿಸಿದ್ದರು."[೨೫]

ಬಳ್ಳಾರಿ ಲಲಿತಮ್ಮ ಅವರದು ಸಂಸ್ಕಾರ ಪೂರಿತ ಅಭಿನಯ ಕಲೆ. ದೈವದತ್ತವಾದ ಸೌಂದರ್ಯ, ಕೋಮಲ ಶಾರೀರ, ಇವರು ಯಾವ ಪಾತ್ರವನ್ನು ಮಾಡಿದರೂ ಅದಕ್ಕೆ ಜೀವ ತುಂಬಿ ಸಮರ್ಥ ಅಭಿನೇತ್ರಿ ಎಂದು ಖ್ಯಾತಿಗಳಿಸಿದ್ದರು. ಸಂಗೀತ ಮತ್ತು ನಾಟ್ಯ ಎರಡರಲ್ಲೂ ಪರಿಶ್ರಮವಿದ್ದುದು ಇವರ ಅಭಿನಯಕ್ಕೆ ಇಂಬುಗೊಡುತ್ತಿತ್ತು. ಕನ್ನಡ ರಂಗಭೂಮಿಯಲ್ಲಿ ವೈಭವದಿಂದ ಸೇವೆ ಸಲ್ಲಿದ ಕಲಾವಿದೆಯರಲ್ಲಿ ಲಲಿತಮ್ಮ ಅವರಿಗೆ ಅಗ್ರಸ್ಥಾನವಿದೆ. ೧೯೭೯ರಲ್ಲಿ ನಾಟಕ ಅಕಾಡೆಮಿಯು ಇವರಿಗೆ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ೧೯೮೦ರಲ್ಲಿ ರಾಜ್ಯ ಪ್ರಶಸ್ತಿ, ೧೯೯೦ರಲ್ಲಿ ರಾಜ್ಯೋತ್ಸವ ಪ್ರಶಸ್ತಿಯೂ ದೊರಕಿದೆ.

೧೫. ಸುಭದ್ರಮ್ಮ ಮನ್ಸೂರು

"ಸುಭದ್ರಮ್ಮ ಮನ್ಸೂರು ಅವರು ತಮ್ಮ ಇಂಪಾದ ಕಂಠದಿಂದ, ಪ್ರೌಢ ಅಭಿನಯದಿಂದ ರಂಗಭೂಮಿಯ ಶ್ರೀಮಂತಿಕೆಯನ್ನು ಕಾಪಾಡಿಕೊಂಡು ಬಂದಿರುವುದು ನಮಗೆಲ್ಲರಿಗೂ ಅಭಿಮಾನದ ಸಂಗತಿಯಾಗಿದೆ. ಬಳ್ಳಾರಿಯಲ್ಲಿ ಕೆಳ ಮಧ್ಯಮದ ವರ್ಗದಲ್ಲಿ ೧೯೩೯ರಲ್ಲಿ ಜನಿಸಿದ ಸುಭದ್ರಮ್ಮನವರಿಗೆ ಹಾಡುಗಾರಿಕೆಯು ತಂದೆ ತಾಯಿಗಳಿಂದ ದೊರೆತ ವರವಾಗಿದೆ. ತಾಯಿ ಭಾಗ್ಯಮ್ಮನವರು ದಕ್ಷಿಣಾದಿ ಸಂಗೀತ ವಿದೂಷಿ, ತಾಯಿಯೇ ಮೊದಲಗುರು. ತಂದೆ ಜ್ವಾಲಾಪತಿ ವೃತ್ತಿಯಲ್ಲಿ ಮೆಕಾನಿಕ್ ಆಗಿದ್ದರೂ ಪ್ರವೃತ್ತಿಯಲ್ಲಿ ಹಾರ್ಮೋನಿಯಂ ವಾದಕರಾಗಿದ್ದರು. ಇಂಥ ಸಾಂಸ್ಕೃತಿಕ ಹಿನ್ನೆಲೆಯುಳ್ಳ ಸಂಸಾರದಲ್ಲಿ ಹುಟ್ಟಿ ಸಂಗೀತದ ಹುಚ್ಚು ಅಂಟಿಕೊಂಡಿದ್ದು ತೀರಾ ಸಹಜವೆಂದೇ ಹೇಳಬೇಕು."[೨೬]

ಓದು ಆರನೇ ತರಗತಿಗೇ ಮೊಟಕಾದರೂ ಕೂಡ ರಂಗಭೂಮಿಯಲ್ಲಿ ಅಚ್ಚಳಿಯದ ಹೆಸರು. ಸುಭದ್ರಮ್ಮನವರು ಧಾರವಾಡ ಜಿಲ್ಲೆಯ ಸುಪ್ರಸಿದ್ಧ ಸಂಗೀತಗಾರ ಮಲ್ಲಿಕಾರ್ಜುನ ಮನ್ಸೂರರವರ ಅಳಿಯಂದಿರಾದ ಲಿಂಗರಾಜು ಮನ್ಸೂರರನ್ನು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸದ ಹಂತದಲ್ಲಿಯೇ ವಿವಾಹವಾದರು ಆರಂಭದಲ್ಲಿ ಶ್ರೀಧರರಾವ್ ಅವರ 'ಶ್ರೀಸರ್ವಮಂಗಳ ನಾಟ್ಯ ಸಂಘ'ದಲ್ಲಿ ದುಡಿದರು.

ಮುಂದೆ ಅದೇ ಅವರ ಮಾಲೀಕತ್ವದಲ್ಲಿ 'ಕಟೀಲು ದುರ್ಗಾ ಪರಮೇಶ್ವರಿ ನಾಟ್ಯ ಸಂಘ' ಆದಾಗಲೂ ಅಲ್ಲಿಯ ನಾಟಕಗಳಲ್ಲಿ ನಾಯಕಿಯಾಗಿ ಬೆಳಗಿದರು.

ಏಣಗಿ ಬಾಳಪ್ಪನವರ 'ಕಲಾ ವೈಭವ ನಾಟಕ ಮಂಡಳಿ'ಯಲ್ಲಿ ಇಬ್ಬರೂ ದಂಪತಿಗಳು ಸೇರಿದರು. ಮೊದಲು ಬಾಲನಟಿ ಈಗ ನವನಾಯಕಿ, ಜಗಜ್ಯೋತಿ ಬಸವೇಶ್ವರದಲ್ಲಿ ಗಂಗಾ, ಕಲಾವತಿ, ನೀಲಾಂಬಿಕೆ, ಅಕ್ಕಮಹಾದೇವಿ, ಹೇಮರೆಡ್ಡಿ ಮಲ್ಲಮ್ಮದಲ್ಲಿ 'ಮಲ್ಲಮ್ಮ', 'ನಾಗಮ್ಮ', 'ಮಾದೇವಿ', ಕುರುಕ್ಷೇತ್ರದಲ್ಲಿ 'ದ್ರೌಪತಿ' ಮೊದಲಾಗಿ ಇನ್ನೂ ಅನೇಕ ಪೌರಾಣಿಕ ನಾಟಕಗಳಲ್ಲಿ ನಾಯಕಿ ಪಾತ್ರಗಳನ್ನು ಮಾಡಿ ಅಪಾರ ಜನ ಮೆಚ್ಚುಗೆ ಗಳಿಸಿದವರು.

"ಹಾಡುಗಾರಿಕೆಯೇ ಅಂದಿನ ಸಂಗೀತ ಪ್ರಧಾನ ನಾಟಕಗಳಲ್ಲಿ ನಟನಟಿಯರ ಮುಖ್ಯವಾದ ಬಂಡವಾಳವಾಗಿತ್ತು. ದೈವದತ್ತವಾದ ಮಧುರ ಕಂಠ ಮತ್ತು ತಾಯಿಯಿಂದ ಲಭಿಸಿದ ಸಂಗೀತ ಜ್ಞಾನಗಳನ್ನು ಬಳಸಿಕೊಂಡು ಸುಭದ್ರಮ್ಮನವರು ಯಶಸ್ವಿ ಗಾಯಕಿ ನಟಿ ಎನ್ನಿಸಿಕೊಂಡರು. ಏಣಗಿಯವರ ಕಂಪನಿಯಲ್ಲಿ ಎಂಟು ವರ್ಷ ಸೇವೆ ಸಲ್ಲಿಸಿದ ನಂತರ ಮಾಸ್ಟರ್ ಹಿರಣ್ಣಯ್ಯನವರ ಕಂಪನಿಯಲ್ಲಿ ದಂಪತಿಗಳು ಐದುವರ್ಷ ದುಡಿದರು.

ಒಮ್ಮೆ ಬೆಂಗಳೂರಿನಲ್ಲಿ ಮಾಸ್ಟರ್ ಹಿರಣ್ಣಯ್ಯನವರ ಲಂಚಾವತಾರ ದ ೫೧ನೇ ಪ್ರಯೋಗದ ಉತ್ಸವ ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮಿಯವರು ಆಗ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ಈ ಸಂದರ್ಭಕ್ಕೆ ಒಂದು ವಚನ ಹಾಡಿದರೆ ಚೆನ್ನಾಗಿರುತ್ತದೆ ಎಂದು ಯೋಚಿಸಿದರು. ಯೋಗಾನರಸಿಂಹರು ಅಕ್ಕ ಮಹಾದೇವಿಯ 'ಬೆಟ್ಟದಾ ಮೇಲೊಂದು ಮನೆಯ ಮಾಡಿ...' ವಚನಕ್ಕೆ ರಾಗ ಸಂಯೋಜನೆ ಮಾಡಿದರು. ಸುಭದ್ರಮ್ಮ ಈ ವಚನವನ್ನು ಹಾಡಿದಾಗ ಪ್ರೇಕ್ಷಕರ ಮೆಚ್ಚುಗೆ ಪಡೆಯಿತು. ಅಂದಿನಿಂದ ಇಂದಿಗೂ ಈ ವಚನ ಜಯಭೇರಿ ಹೊಡೆದಿದೆ. ಅಕ್ಕನ ವಚನಕ್ಕೆ ಸುಭದ್ರಮ್ಮನವರ ಮಧುರ ಕಂಠ ಸೇರಿ ಅಂಥ ಮೋಡಿ ಮಾಡಿದ್ದು ಅವರ ಮಲ್ಲಿನಾಥನಧ್ಯಾನ ಇನ್ನೂ ಅನೇಕ ಹಾಡುಗಳು ಕ್ಯಾಸೆಟ್ ಮೂಲಕ ಜನಪ್ರಿಯಗೊಂಡಿದ್ದರಿಂದ, ಸುಭದ್ರಮ್ಮನವರನ್ನು ಬಳ್ಳಾರಿ ಜಿಲ್ಲೆಯ 'ರಂಗ ಕೋಗಿಲೆ' ಎಂದೇ ಕರೆಯುತ್ತಾರೆ."[೨೭]

"ಬಾಗಲಕೋಟೆಯ ಬೆನಕಟ್ಟಿ ಕಂಪನಿ ಮತ್ತು ಚಿಕ್ಕೇನಕೊಪ್ಪ ಶರಣರ ನಾಟಕ ಕಂಪನಿಗಳಲ್ಲಿ ೧೯೬೭ರವರೆಗೆ ತಮ್ಮ ರಂಗಸೇವೆಯನ್ನು ಸಲ್ಲಿಸಿದ ಸುಭದ್ರಮ್ಮನವರು, ಆಧುನಿಕ ರಂಗಭೂಮಿಯ ದಂತಕತೆ. ಅಂದಿನ ದಿನಗಳಲ್ಲಿಯೇ ಸುಭದ್ರಮ್ಮನವರು ಮಹಾಭಾರತ ಹಾಗೂ ರಾಮಾಯಣ ಕಥೆಗಳನ್ನಾಧರಿಸಿದ ಪೌರಾಣಿಕ ಮತ್ತು ಐತಿಹಾಸಿಕ ನಾಟಕಗಳಲ್ಲಿ ನಾಯಕಿ ಪಾತ್ರಗಳನ್ನು ಮಾಡಿ ಸೈ ಎನಿಸಿಕೊಂಡರು. ಕಂದಗಲ್ ಹನುಮಂತರಾಯರು ವಿರಚಿತ ಚಿತ್ರಾಂಗದ, ಬಾಣಸಿಗ ಭೀಮ, ಪಾಂಚಾಲಿ, ಪಾರ್ಥ ಮುಂತಾದ ಪೌರಾಣಿಕ ಮಹಾಭಾರತ ನಾಟಕಗಳಲ್ಲಿ ದ್ರೌಪದಿ ಪಾತ್ರವನ್ನು ಅತ್ಯಂತ ಲೀಲಾಜಾಲವಾಗಿ ಅಭಿನಯಿಸಿದ್ದಾರೆ. ಅಂದಿನಿಂದ ಇಂದಿಗೂ ಅಭಿನಯಿಸುತ್ತಾ ಬಂದ ಇವರ ಕಲಾಪ್ರೌಢಿಮೆ ಎಂತಹುದೆಂದು ಅರ್ಥವಾಗುತ್ತದೆ.

ಉತ್ತರ ಕರ್ನಾಟಕದಲ್ಲೆಲ್ಲಾ ಸುಭದ್ರಮ್ಮನವರು ಮನೆಮಾತಾಗಿದ್ದಾರೆ. ಸುಭದ್ರಮ್ಮನವರ ಪಾತ್ರಾಭಿನಯದ ಬಗೆಗೆ ಜನರಿಗೆ ಅಪಾರವಾದ ಅಭಿಮಾನವಿದೆ. ಸುಭದ್ರಮ್ಮ ಎಂದರೆ ದ್ರೌಪದಿ, ದ್ರೌಪದಿ ಎಂದರೆ ಸುಭದ್ರಮ್ಮ. ರಾಯಚೂರು, ಬಳ್ಳಾರಿ ಜಿಲ್ಲೆಗಳಲ್ಲಿ ಹೆಚ್ಚು ಕಡಿಮೆ ಎಲ್ಲಾ ಹವ್ಯಾಸಿ ತಂಡಗಳು ಅವರನ್ನು ಕರೆಸಿಕೊಂಡು ನಾಟಕ ಮಾಡಿವೆ. ಸುಭದ್ರಮ್ಮನವರು ಪಾತ್ರವಹಿಸಲು ಬರುತ್ತಾರೆಂದರೆ ಆ ಕಳೆಯೇ ಬೇರೆ. ದ್ರೌಪತಿ ಮತ್ತು ಮಲ್ಲಮ್ಮನ ಪಾತ್ರಕ್ಕೆ ಸುಭದ್ರಮ್ಮನವರೇ ಬೇಕು ಅವರ ಹೊರತಾಗಿ ಮತ್ತೊಬ್ಬರನ್ನು ಆ ಪಾತ್ರಗಳಲ್ಲಿ ನೋಡಲು ಜನ ಒಪ್ಪುವುದಿಲ್ಲ. ಆ ರೀತಿಯಾಗಿ ಸುಭದ್ರಮ್ಮ ಪಾತ್ರದೊಂದಿಗೆ ತಾದ್ಯಾತ್ಮತೆಯನ್ನು ಸಾಧಿಸಿದ್ದಾರೆ.

ಬಹುಭಾಷಾ ಪ್ರವೀಣೆಯಾದ ಸುಭದ್ರಮ್ಮನವರು ಮುಂದೆ ಕಂಪನಿಗಳನ್ನು ಬಿಟ್ಟು ಆಹ್ವಾನವಿದ್ದಾಗ ಹೋಗಿ ಅಭಿನಯಿಸಿ ಬರತೊಡಗಿದರು. ಸುಭದ್ರಮ್ಮ ಇದ್ದರೆ ಗಲ್ಲಪೆಟ್ಟಿಗೆಗೆ ಯಾವ ಕಂಪನಿಗೂ ಮೋಸವಿಲ್ಲ ಎಂಬಂಥ ಗಟ್ಟಿಕಲಾವಿದೆ. ಇಂದಿಗೂ ಇವರ ಹಾಡುಗಾರಿಕೆ, ಅಭಿನಯಕ್ಕೆ ಜನ ಮುಗಿಬೀಳುತ್ತಾರೆ. ಇವರ ಕಲಾ ಸೇವೆಯನ್ನು ಗಮನಿಸಿ ನಾಟಕ ಅಕಾಡೆಮಿಯು ೧೯೮೫-೮೬ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ. ಅಲ್ಲದೆ ೨೦೦೪ನೇ ಸಾಲಿನ ನಾಡೋಜ ಪ್ರಶಸ್ತಿಯನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯ ನೀಡಿಗೌರವಿಸಿದೆ. ೧೯೯೬ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, ೧೯೮೬ರಲ್ಲಿ ಕರ್ನಾಟಕ ನಾಟಕ ಪರಿಷತ್ತು, ಕನ್ನಡ ಸಾಹಿತ್ಯ ಪರಿಷತ್ತು, ವಿಶ್ವವಿದ್ಯಾಲಯಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಸಂಘ ಸಂಸ್ಥೆಗಳಿಂದ ಹತ್ತು ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ. ೧೯೯೫ರಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರಾಗಿ, ೨೦೦೩ರಲ್ಲಿ ಜಾನಪದ ಶ್ರೀ ಪ್ರಶಸ್ತಿ ಆಯ್ಕೆ ಸಮಿತಿಯ ಸದಸ್ಯರಾಗಿ, ೨೦೦೨ರಿಂದ ಮಾಶಾಸನ ಮಂಜೂರಾತಿ ಆಯ್ಕೆ ಸಮಿತಿ ಸದಸ್ಯರಾಗಿ ಇವರು ಸೇವೆ ಸಲ್ಲಿಸಿದ್ದಾರೆ.

೨೦೦೯ರ ಸಾಲಿನ "ಗುಬ್ಬಿ ವೀರಣ್ಣ ಪ್ರಶಸ್ತಿ" ಫೆ.೧೨ ರಂದು ನೀಡಲಾಯಿತು. ನಾಡಿನ ಪ್ರತಿಷ್ಠಿತ ರಂಗ ಸಂಸ್ಥೆಗಳಾದ ರಂಗಾಯಣ, ರಂಗಭಾರತಿ, ನೀನಾಸಂಗಳೊಡನೆ ನಿಕಟ ಸಂಪರ್ಕವಿಟ್ಟು ಕೊಂಡಿದ್ದಾರೆ. ಇವರು ಹಾಡಿರುವ ರಂಗಗೀತೆಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಬಳ್ಳಾರಿ ಕೋಟೆ ಮಲ್ಲೇಶ್ವರ ಸ್ವಾಮಿ ಕ್ಯಾಸೆಟ್‌ಗಳು ಇಂದಿಗೂ ಜನಪ್ರಿಯ. ಇವರನ್ನು ಕುರಿತ (ವ್ಯಕ್ತಿಶ್ರೀ) ಕಿರುಚಿತ್ರವೂ ದೂರದರ್ಶನದಲ್ಲಿ ಪ್ರಸಾರವಾಗಿದೆ. ಅಷ್ಟೇ ಅಲ್ಲದೇ ಕರ್ನಾಟಕ ನಾಟಕ ಅಕಾಡೆಮಿಯು ಇವರ ಜೀವನ ಚರಿತ್ರೆಯನ್ನು (ಲೇ ಕುಂ.ವೀ.) ಪ್ರಕಟಿಸಿದೆ. ರಾಜ್ಯ ಪಠ್ಯಪುಸ್ತಕ ನಿರ್ದೇಶನಾಲಯವು (ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ) ಒಂಭತ್ತನೆಯ ತರಗತಿಯ ಕನ್ನಡ ಪಠ್ಯಪುಸ್ತಕದಲ್ಲಿ "ರಂಗಸಿರಿ ಸುಭದ್ರಮ್ಮ ಮನ್ಸೂರು" ಎಂಬ ಪಾಠವನ್ನು ಪಠ್ಯವಾಗಿ ಅಳವಡಿಸಿದೆ. 'ಗಾನಕೋಗಿಲೆ', 'ರಂಗಸಿರಿ ಗ್ರಾಮೀಣ ರಂಗಭೂಮಿ ಅಭಿನೇತ್ರಿ' ಎಂಬಿತ್ಯಾದಿ ಬಿರುದು ಬಾವಲಿಗಳನ್ನು ಇವರು ಪಡೆದುಕೊಂಡಿರುವುದು ಇವರ ಜನಪ್ರಿಯತೆಗೆ ಸಾಕ್ಷಿಯಾಗಿದೆ."[೨೮]

೧೬. ಕೆ.ನಾಗರತ್ನಮ್ಮ

"ಓದುತ್ತಿರುವಾಗಲೇ ನಾಟಕದ ಗೀಳು ಹಚ್ಚಿಕೊಂಡು ೧೦ನೇ ತರಗತಿಯವರೆಗೆ ಓದಿ ತಂದೆ ಮಾರಪ್ಪರ ಪ್ರೋತ್ಸಾಹದಿಂದ ರಂಗಭೂಮಿಗೆ ಕಾಲಿಟ್ಟರು. ಮಾರಪ್ಪನವರ ಬಯಲಾಟದ ಕಲೆ ಇವರ ಮೇಲೆ ಪ್ರಭಾವ ಬೀರಿತು. ಸುಮಾರು ಒಂದುವರೆ ದಶಕದ ಹಿಂದೆ ಮರಿಯಮ್ಮನಹಳ್ಳಿಯಲ್ಲಿ ಹವ್ಯಾಸಿ ರಂಗತಂಡವೊಂದನ್ನು ಹುಟ್ಟುಹಾಕಿದವರಲ್ಲಿ ನಾಗರತ್ನಮ್ಮನವರೇ ಒಬ್ಬರು. ೧೯೮೦ರ ದಶಕದಲ್ಲಿ ಮಹಿಳೆಯರೇ ನಾಟಕವಾಡುವ ಮಂಡಳಿಯೊಂದು ಅಸ್ತಿತ್ವದಲ್ಲಿದ್ದು ಕ್ರಿಯಾಶೀಲವಾಗಿತ್ತು. ಕೆಲವು ಕಾಲ ಸ್ಥಗಿತಗೊಂಡಿದ್ದ ಆ ಮಂಡಳಿಯನ್ನು "ಮಹಿಳಾ ವೃತ್ತಿರಂಗ ಕಲಾವಿದರ ಸಂಘ" ಎಂದು ಪುನರ್ ನಾಮಕರಣ ಮಾಡಿ ಆರಂಭಿಸಿದ್ದು ನಾಗರತ್ನಮ್ಮನವರ ಹೆಚ್ಚುಗಾರಿಕೆ."[೨೯] ತಮ್ಮ ಹನ್ನೊಂದನೆಯ ವಯಸ್ಸಿನಲ್ಲಿ 'ಸಂಸಾರ' ಎಂಬ ನಾಟಕದಿಂದ ರಂಗ ಪ್ರವೇಶ ಮಾಡಿದ ಇವರು ಇದುವರೆಗೂ ವೃತ್ತಿ ಹವ್ಯಾಸ ನಾಟಕಗಳಲ್ಲಿ ವರ್ಷಕ್ಕೆ ಸುಮಾರು ಎಪ್ಪತ್ತರಿಂದ ನೂರರವರೆಗೆ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

"ನಾಗರತ್ನಮ್ಮನವರು ಒಂದು ರೀತಿಯಲ್ಲಿ ಹಳೆಯ ಕಂಪನಿ ನಾಟಕಗಳಲ್ಲಿ ಹೊಸ ಕಂಪನಿ ನಾಟಕಗಳಿಗೂ ಕೊಂಡಿಯಂತೆ, ಎರಡೂ ತುದಿಗಳನ್ನು ಅವರು ಬೆಸೆಯಬಲ್ಲರು. ಇವರ ದೊಡ್ಡಪ್ಪ ನಾಟಕದ 'ಸಿಂಗಾರಿಯ' ಪಾತ್ರ, ಕಾಡುಕುದುರೆಯ 'ದುರ್ಗ', ರಂಗಾಂತರಂಗ ವಿಲಾಸದಲ್ಲಿ ಗೌಡತಿ ರಕ್ತರಾತ್ರಿಯ 'ಉತ್ತರೆ', ಅಣ್ಣತಂಗಿ ನಾಟಕದ 'ಗಂಗೆ', ರತ್ನ ಮಾಂಗಲ್ಯದಲ್ಲಿ 'ಶಕೀಲಾ', ಶೀಲಾವತಿಯಲ್ಲಿ 'ಶೀಲಾವತಿ' ಈ ಎಲ್ಲಾ ಪಾತ್ರಗಳು ಉತ್ತರ ಕರ್ನಾಟಕದಲ್ಲಿ ಮನೆಮಾತಾಗಿವೆ. ಜೋಕುಮಾರಸ್ವಾಮಿ, ಅಕ್ಷಯಾಂಬರ, ವೀರಅಭಿಮನ್ಯು, ಮಹಾರಥಿ ಕರ್ಣ, ಚಿತ್ರಾಂಗದಾ, ಕುರುಕ್ಷೇತ್ರ, ಸಂಗ್ಯಾ ಬಾಳ್ಯಾ, ರಾವಿ ನದಿಯ ದಂಡೆಯ ಮೇಲೆ ಮೊದಲಾದ ನಾಟಕಗಳಲ್ಲಿ ಪಾತ್ರವಹಿಸಿ ಪ್ರೇಕ್ಷಕರ ಮನಸೂರೆಗೊಂಡ ಕೀರ್ತಿ ನಾಗರತ್ನಮ್ಮನವರದಾಗಿದೆ."[೩೦] ಈ ಕಲಾವಿದೆಯ ಮನೆ ಪ್ರವೇಶಿಸಿದರೆ ಗೋಡೆ ತುಂಬ ಅಭಿಮಾನಿಗಳು ನೀಡಿರುವ ಸ್ಮರಣೆಗಳು, ಪ್ರಶಸ್ತಿ ಪತ್ರಗಳನ್ನು ಕಣ್ಣಾರೆ ಕಾಣಬಹುದಾಗಿದೆ.

"ಹಲವಾರು ರೂಪಕಗಳು, ಸ್ಥಳದ ವಿಶೇಷಗಳ ಬಗ್ಗೆ ಚಿತ್ರಿಸಿಕೊಂಡು ಚಲನಚಿತ್ರ ಹಾಗೂ ಟಿ.ವಿ, ಧಾರವಾಹಿಗಳಲ್ಲೂ ಮಾತನಾಡುತ್ತಾ ನಾಗರತ್ನಮ್ಮ ವೇದಿಕೆಯ ಮೇಲೆ ಹರಳು ಹುರಿದಂತೆ ಮಾತನಾಡುತ್ತಾ ತಮ್ಮ ನಟನಾ ಕೌಶಲ್ಯದಿಂದ ಪ್ರೇಕ್ಷಕರನ್ನು ದಂಗು ಬಡಿಸುತ್ತಾರೆ. ಈವರೆಗೂ ಸಾವಿರಕ್ಕೂ ಮೀರಿ ನಾಟಕಗಳಲ್ಲಿ ಅಭಿನಯಿಸಿದ್ದಲ್ಲದೆ, ಇವರು ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳಲ್ಲಿ ಎಲ್ಲ ರಂಗತಂತ್ರಗಳಲ್ಲೂ, ತಜ್ಞರ ಜೊತೆಯಲ್ಲೂ ಅಭಿನಯಿಸಿದ ಪ್ರತಿಭಾವಂತೆ ನಾಗರತ್ನಮ್ಮ."[೩೧]

ನಾಗರತ್ನಮ್ಮನವರು ರಾಜ್ಯಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದ ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಇಲ್ಲಿಯವರೆಗೆ ಸುಮಾರು ೪೦ಕ್ಕೂ ಹೆಚ್ಚು ನಟಿ ಸ್ಪರ್ಧೆಗಳಲ್ಲಿ ಅತ್ಯುತ್ತಮ ನಟಿ ಪ್ರಶಸ್ತಿಯನ್ನು ಪಡೆದಿದ್ದಾರೆ. ಅಲ್ಲದೇ ಕರ್ನಾಟಕ ನಾಟಕ ಅಕಾಡೆಮಿ ಸದಸ್ಯರಾಗಿದ್ದರು. ೧೯೯೪ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪಡೆದರು. ರಾಜ್ಯೋತ್ಸವ ಪ್ರಶಸ್ತಿ, ಸಾವಿತ್ರಮ್ಮ ದೇಜಗೌ ಪ್ರಶಸ್ತಿ, ಮೈಸೂರು ಇವರಿಗೆ ನೀಡಿ ಗೌರವಿಸಿದ್ದಾರೆ.

೧೭. ಸೋಗಿ ರತ್ನ

"ಬಯಲಾಟದಲ್ಲಿ ಬಳ್ಳಾರಿ ಜಿಲ್ಲೆಯ ಸೋಗಿ ರತ್ನ ಚಿರಪರಿಚಿತವಾದ ಹೆಸರು. ರತ್ನ ರಂಗಭೂಮಿಗೆ ಕಾಲಿಟ್ಟಿದ್ದು ೧೯೭೭ರಲ್ಲಿ. ಅಲ್ಲಿಂದ ಇಲ್ಲಿಯವರೆಗೂ ಆಡಿದ ನಾಟಕಗಳು, ಮಾಡಿದ ವೈವಿಧ್ಯಮಯ ಪಾತ್ರಗಳು ಲೆಕ್ಕವಿಲ್ಲದಷ್ಟು, ಓದಿದ್ದು ಎರಡನೇ ತರಗತಿಯವರೆಗೆ, ಬಯಲಾಟ ದೊಡ್ಡಾಟಗಳೇ ಇಂದು ಅಪರೂಪವಾದ ದಿನಮಾನದಲ್ಲಿ ಮಹಿಳೆಯೊಬ್ಬಳೂ ಬಯಲಾಟದ ತಂಡ ಕಟ್ಟಿಕೊಂಡು ಸುತ್ತಲು ನೂರಾರು ಗ್ರಾಮಗಳಲ್ಲಿ ಸಂಚರಿಸಿ ಉತ್ತಮ ಕಲಾ ಪ್ರದರ್ಶನಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ಗಳಿಸಿದ್ದು ಸುಲಭದ ಮಾತಲ್ಲ. ಸೋಗಿ ರತ್ನ ಎಂದೇ ರಂಗಭೂಮಿಯಲ್ಲಿ ಹೆಸರು ಪಡೆದು ಐತಿಹಾಸಿಕ, ಸಾಮಾಜಿಕ ಹಾಗೂ ಪೌರಾಣಿಕ ಪಾತ್ರಗಳಿಗೆ ತನ್ನ ಪ್ರತಿಭೆಯ ಕಲೆಯಿಂದ ಜೀವಕಳೆ ತುಂಬಿದವಳು. ಹಾಸ್ಯ ಪಾತ್ರಗಳಿಗೆ ರತ್ನ ಎತ್ತಿದ ಕೈ, ಖಳನಾಯಕಿ ಪಾತ್ರಗಳಲ್ಲಿ ರತ್ನ ಮಿಂಚಿರುವುದು ಉಂಟು. ಮೊದಲು ಅನೇಕ ನಾಟಕ ಕಂಪನಿಯಲ್ಲಿ ರಂಗ ನಟಿಯಾಗಿ ದುಡಿದು ಅನುಭವದಿಂದ ಪಕ್ವವಾದ ನಟಿಯಾದವರು. 'ಕಡಪಟ್ಟಿ ಪ್ರಕಾಶನ ನಾಟಕ ಕಂಪನಿ', 'ಚಿತ್ರದುರ್ಗ ಕುಮಾರಸ್ವಾಮಿ ಕಂಪನಿ', 'ಆಲಮಟ್ಟಿ ರಾಜಣ್ಣ ಕಂಪನಿ', 'ಬೀಳಗಿ ಕುಳೀಸ್ಯ ಕಂಪನಿ', ಹೀಗೆ ವಿವಿಧ ಕಂಪನಿಗಳಲ್ಲಿ ರಂಗ ಕಲಾವಿದೆಯಾಗಿ ದುಡಿದರು. 'ಪ್ರಮೀಳಾ ದರ್ಬಾರು', 'ಗಿರಿಜಾ ಕಲ್ಯಾಣ', 'ಲಕ್ಷ್ಮೀಸ್ವಯಂವರ', 'ಭಕ್ತಮಾರ್ಕಂಡೇಯ' ಇಂತಹ ಹಳೆಯ ನಾಟಕಗಳ ಜೊತೆ 'ಸತಿ ಸಂಸಾರದ ಜ್ಯೋತಿ', 'ಮನೆಮಗಳು', 'ಮಡದಿ ಕೊಟ್ಟಮಾತು', 'ಬದುಕು ಬಂಗಾರವಾಯ್ತು', 'ಹೇಮರೆಡ್ಡಿ ಮಲ್ಲಮ್ಮ', 'ಧರ್ಮದೇವತೆ', 'ರಕ್ತರಾತ್ರಿ' ಮೊದಲಾದ ಹೊಸ ಅಲೆಯ ನಾಟಕಗಳಲ್ಲಿ ಸನ್ನಿವೇಶಗಳನ್ನು ಉತ್ತಮವಾಗಿ ಅಭಿನಯಿಸಿದ್ದಾರೆ.

ರತ್ನರವರು ಸುತ್ತಲಿನ ರಂಗಾಸಕ್ತರನ್ನೆಲ್ಲಾ ಕೂಡಿ ಹಾಕಿ 'ವೀರೇಶ್ವರ ಜಾನಪದ ದೊಡ್ಡಾಟ ಸಂಘ'ವನ್ನು ಕಟ್ಟಿ ನಾಟಕಗಳಲ್ಲಿ ಅಭಿನಯಿಸುತ್ತಲೇ "ಚನ್ನಪ್ಪ ಚನ್ನಗೌಡ" ದಂತಹ ನವೀನ ಮಾದರಿಯ ನಾಟಕದಲ್ಲೂ ಅಭಿನಯಿಸಿ ಸೈ ಎನಿಸಿಕೊಂಡವರು."[೨೨]

ಇವರ ಪ್ರಮುಖ ಪ್ರಶಸ್ತಿಗಳು, ಚಿಂತನ ಶ್ರೀ ಪ್ರಶಸ್ತಿ ದಸರಾದಲ್ಲಿತಂಡ ಪ್ರದರ್ಶನ ೯೯ ಮೈಸೂರು, ಹಲವಾರು ಸಂಘ ಸಂಸ್ಥೆಗಳಿಂದ ಪ್ರಶಸ್ತಿ ನೀಡಲಾಗಿದೆ.

೧೮. ಮ.ಬ.ಸೋಮಣ್ಣ

ಮಯಾಚಾರ್ ಬಡಿಗೇರ್ ಸೋಮಣ್ಣನವರು ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲೂಕು ಗರಗ ನಾಗಲಾಪುರದಲ್ಲಿ ೦೧.೦೭.೧೯೫೨ರಲ್ಲಿ ಸಣ್ಣ ತೋಟಪ್ಪಾಚಾರ್, ಸಿದ್ಧಮ್ಮ ಇವರ ಉದರದಲ್ಲಿ ಜನಿಸಿದರು. ಇವರು ಉತ್ತಮ ನಟರು, ತಬಲವಾದಕರು ನಾಟಕಕಾರು, ಕಥೆ, ಗೀತೆರಚನೆ, ಅಭಿನಯ, ನಿರ್ದೇಶನ, ಪ್ರವಚನ, ಆಕಾಶವಾಣಿ ಕಲಾವಿದರು, ದೂರದರ್ಶನ ಕಲಾವಿದರಾಗಿ, ಒಬ್ಬ ಶ್ರೇಷ್ಠ ಕಲಾವಿದರಲ್ಲಿ ಇವರೂ ಸಹ ಒಬ್ಬರಾಗಿದ್ದಾರೆ.

ಇವರ ಮನೆತನವೇ ಕಲೆಯ ಸಂಗಮವಾಗಿತ್ತು. ಇವರ ತಂದೆ ಸಣ್ಣತೋಟಪ್ಪಾಚಾರ್, ಚಿಕ್ಕಪ್ಪರಾದ ಷಣ್ಮುಖಾಚಾರ್ (ನಟರು, ಮೃದಂಗವಾದಕರು) ದೊಡ್ಡಪ್ಪರಾದ ಕೆಂಪು ತೋಟಪ್ಪಾಚಾರ್ (ನಟರು, ಕಾವ್ಯವಾಚನ, ಪ್ರವಚನ, ಗಾಯಕರು, ಗಮಕಿಗಳೂ ಆಗಿದ್ದರು) ಮಾವಂದಿರಾದ ಮೋರಿಗೇರಿ ಬ್ರಹ್ಮಾಚಾರ್ (ತಬಲವಾದಕರು) ಸೋಮಣ್ಣ ಪಕ್ಕೀರಪ್ಪ, ವೀರಭದ್ರಪ್ಪ (ನಟರು, ತಬಲ ವಾದಕರು) ಹೀಗಿರುವ ಪರಿಸರದಲ್ಲಿ ಬೆಳೆದ ಸೋಮಣ್ಣನವರು ಬಾಲ್ಯದಲ್ಲಿ 'ವಾನರ ಸೇನೆ'ಯಲ್ಲಿ ಒಂದು ಚಿಕ್ಕ ಪಾತ್ರ ಮಾಡಿದ ಇವರು ಗುರುಗಳಾದ ಗರಗ ನಾಗಲಾಪುರದ ಶರಣಯ್ಯ ಮಾಸ್ತರ್ ಕೃಷ್ಣಮೂರ್ತಿರಾವ್‌ರವರ ಪ್ರಚೋದನೆಯಿಂದ ಶ್ರೇಷ್ಠ ನಟರಾದರು.

ಇವರು ರಚಿಸಿದ ಪ್ರಮುಖ ನಾಟಕಗಳೆಂದರೆ 'ಸಮರ್ಪಣ', 'ಊರುಕೇರಿ', 'ಶಾಕುಂತಲ', 'ಧ್ರುವ ಸಂಗಮ', 'ಇಂಗುತಿಂದ ಮಂಗ', 'ಕೆಟ್ಟ ಮೇಲೆ ಬುದ್ಧಿಬಂತು' ಎಂಬ ನಾಟಕಗಳನ್ನು ಬರೆದಿದ್ದಾರೆ.

ಇವರು ನಾಲ್ಕು ನೂರಕ್ಕೂ ಹೆಚ್ಚು ರಂಗಗೀತೆಗಳನ್ನು ರಚಿಸಿದ್ದಾರೆ ಹೆಚ್ಚಾಗಿ ಸಾಮಾಜಿಕ ನಾಟಕದ ರಂಗಗೀತೆಗಳನ್ನು ರಚಿಸಿ, ಪೌರಾಣಿಕ, ಐತಿಹಾಸಿಕ ನಾಟಕಗಳಿಗೆ ಕಡಿಮೆ ರಂಗಗೀತೆಗಳನ್ನು ರಚಿಸಿದ್ದಾರೆ. ಅವರ ಅನೇಕ ಹಾಡುಗಳು ರೇಡಿಯೋದಲ್ಲಿ ಪ್ರಸಾರವಾಗಿವೆ. 'ಅಂತಶ್ಚುಕ್ಷು ತೆರೆಯಿತು' ನಾಟಕದ 'ಆತ್ಮಾರಾಮ', ಸಮರ್ಪಣ ನಾಟಕದ 'ಕತ್ತಲೆ ಬೆಳಕು' ನಾಟಕದ ಶ್ರೀಕಾಂತಪ್ಪ, ಸ್ತ್ರೀರತ್ನ ನಾಟಕದ ಕಥಾನಾಯಕ, ಸಮರ್ಪಣ, ನಾಟಕದ ವಸಂತ, ಹರಿದ್ರಾ ಕುಂಕುಮದ ರಾಮಾಯಣ, 'ಜ್ವಾಲಾ' ನಾಟಕದ ಯುವರಾಜ ವಿಚಿತ್ರ ವರದಾನದಲ್ಲಿ ಭಿಕ್ಷುಕ ಶಿವನೊಲುಮೆಯ ಶಿಶುನಾಟಕದ 'ಶಿವದೇವ' 'ಇಂಗತಿಂದ ಮಂಗ' ಮತ್ತು 'ಕೆಟ್ಟ ಮೇಲೆ ಬುದ್ಧಿ ಬಂತು' ನಾಟಕಗಳಲ್ಲಿ ಹಾಸ್ಯ ಪಾತ್ರಗಳು ಅತ್ಯಂತ ಜನ ಮೆಚ್ಚುಗೆಗಳಿಸಿದ ಪಾತ್ರಗಳಾಗಿವೆ.

ಇವರ ಬಹುಮುಖ್ಯ ಕಾರ್ಯವೆಂದರೆ ಲಲಿತಕಲಾ ರಂಗದ ಸ್ಥಾಪನೆ. ಇವರ ಕನಸಾದ ನಮ್ಮ ಊರಿನಲ್ಲಿ ಕಲಾವಿದ ಲೋಕದ ಜನರ ಕಲೆಯನ್ನು ಹಸಿವನ್ನು ತಣಿಸುವಾಗ ನಮ್ಮೂರಲ್ಲೇ ಅಂಥ ಹವ್ಯಾಸಿ ತಂಡ ಏಕೆ ಇರಬಾರದು ಎಂಬ ಪ್ರಶ್ನೆಗೆ ಪ್ರಸಿದ್ಧ ತಬಲವಾದಕರಾದ, ನಾಟಕಕಾರರು ಆದ ಸೋಮಣ್ಣರೊಂದಿಗೆ ಎಚ್.ರಸೂಲ್, ಚಿದಂಬರ ದೀಕ್ಷಿತ, ನೇಮಿರಾಜ, ಡಾ.ಅಂಬಣ್ಣ ಹಾಗೂ ವೃತ್ತಿ ಕಲಾವಿದೆಯರಾದ ಕೆ.ನಾಗರತ್ನಮ್ಮ, ಬಿ.ಶಾರದ, ಎಸ್, ರೇಣುಕಾ, ಡಿ.ಎಂ.ತೋಟಯ್ಯಸ್ವಾಮಿ ಮುಂತಾದವರ ಸಹಯೋಗದೊಂದಿಗೆ ಈ ಲಲಿತ ಕಲಾರಂಗವನ್ನು ೧೯೮೪ರಲ್ಲಿ ಸ್ಥಾಪನೆಗೆ ಕಾರಣವಾಗಿದೆ.

ಇವರು ಬರೆದ ನಾಟಕಗಳನ್ನು ಲಲಿತಕಲಾ ರಂಗದ ತಂಡದ ಮೂಲಕ ಪ್ರದರ್ಶನಕ್ಕೆ ಕೈಗೆತ್ತಿಕೊಂಡ ಸೋಮಣ್ಣನವರು ಸಮಕಾಲೀನ ಜಗತ್ತಿಗೆ ಸ್ಪಂದಿಸುವ ವೇದಿಕೆಯಾಗಿ ಲಲಿತ ಕಲಾರಂಗವನ್ನು ರೂಪಿಸಿದರು.

ಇವರು ರಚಿಸಿದ ನಾಟಕಗಳು ಹೊರರಾಜ್ಯದಲ್ಲಿ (ಕೊಚ್ಚಿ, ಕಾಸರಗೋಡು) ಮತ್ತು ರಾಜ್ಯದಲ್ಲಿ ಪ್ರದರ್ಶನಗೊಂಡವು. ನಮ್ಮ ರಾಜ್ಯದಲ್ಲಿ ಕನಿಷ್ಠ ಅಂದರೆ ಪ್ರತಿಜಿಲ್ಲೆಗೆ ನಾಲ್ಕು ಬಾರಿ ಪ್ರದರ್ಶನ ಮಾಡಿದ್ದಾರೆ."[೩೩]

ಹೀಗೆ ಬಳ್ಳಾರಿ ಜಿಲ್ಲೆಯ ಪೌರಾಣಿಕ ಹವ್ಯಾಸಿ ರಂಗಭೂಮಿಯ ನಟರು ತಮ್ಮದೇ ಆದ ಕೊಡುಗೆ ನೀಡಿ, ನಟನೆಯ ವಿವಿಧ ಕೌಶಲ್ಯಗಳನ್ನು ಅಳವಡಿಸಿಕೊಂಡು ಹಲವು ಪ್ರಶಸ್ತಿ ಪುರುಸ್ಕಾರಗಳನ್ನು ಪಡೆಯುವುದರಲ್ಲಿ ಯಶಸ್ವಿಯಾಗಿದ್ದಾರೆ ಎಂದು ಹೇಳಬಹುದು.

೨.೨ ನಾಟಕ ಮಂಡಳಿಗಳು

ಬಳ್ಳಾರಿ ಜಿಲ್ಲೆಯ ಕನ್ನಡ ರಂಗಭೂಮಿಗೆ ತನ್ನ ಪಾಲನ್ನು ಕೊಟ್ಟು. ತನ್ನತನವನ್ನು ಮೆರೆದಿದೆ. ಹಾಗೆಯೇ ನಾಟಕ ಕಲಾ ಪ್ರಕಾರವು ಉತ್ಕರ್ಷವಾಗಿ ಬೆಳೆಯುವಲ್ಲಿ, ನಾಟಕ-ಮಂಡಳಿಗಳ ಕೊಡುಗೆಯು ಅನನ್ಯವಾದುದು. ಹಬ್ಬ ಹರಿದಿನ, ಜಾತ್ರೆ, ಉತ್ಸವಗಳಲ್ಲಿ ಜನರನ್ನು ರಂಜಿಸಲು ಇಂತಹ ಸುಶಿಕ್ಷಿತ ಮಂಡಳಿಗಳು ಹುಟ್ಟಿ ರಂಗಭೂಮಿಯ ವೈಶಿಷ್ಟ್ಯವನ್ನು ಕಾಪಾಡಿಕೊಂಡು ಬಂದಿವೆ. ಅದರಲ್ಲಿ ಮುಖ್ಯವಾಗಿ

೧ "ಶ್ರೀ ಲಲಿತಕಲಾ ನಾಟ್ಯ ಮಂಡಳಿ," ಬಳ್ಳಾರಿ.

೨ "ಚಿಕ್ಕೇನಕೊಪ್ಪ ಶರಣರ ಬಳಗ," ಬಳ್ಳಾರಿ.

೩ "ಲಲಿತಕಲಾ ರಂಗ," ಮರಿಯಮ್ಮನಹಳ್ಳಿ.

೪ "ನಟರಾಜ ಕಲಾವಿಜಯ ಸಂಘ," ಕಂಪ್ಲಿ.

೫ "ಕನ್ನಡಕಲಾ ಸಂಘ," ಟಿ.ಬಿಡ್ಯಾಂ.

೬ "ಮಾಧ್ಯಮ ಕಲಾತಂಡ," ಹೊಸಪೇಟೆ.

೭. "ರಂಗಭಾರತಿ," ಹಡಗಲಿ.

ಹೀಗೆ ಹಲವು ನಾಟಕ ಮಂಡಳಿಗಳು ರಂಗಭೂಮಿಯನ್ನು ಪೋಷಿಸಿ ಬೆಳೆಸಿವೆ.

ಶ್ರೀ ಲಲಿತಕಲಾನಾಟ್ಯ ಮಂಡಳಿ, ಬಳ್ಳಾರಿ.

ರಾಘವಾಚಾರ್ಯರ "ಕಲಾಪೂರ್ಣ" ಕಲಾವೈಭವದಿಂದ ಮೆರೆದ ಬಳ್ಳಾರಿಯಲ್ಲಿ ನಂತರ ಕಲೆಗಾಗಿಯೇ ಮೀಸಲಾದ ಕಲಾ ಸಂಸ್ಥೆಯ ಅಗತ್ಯ ಬಹಳ ಇತ್ತು. ಸಣ್ಣ ಸಣ್ಣ ಮನೋರಂಜನೆಗಳನ್ನು ಮಾತ್ರ ನೀಡಿ ಸಂತೃಪ್ತಿ ಪಡುವ ಚಿಕ್ಕ ಸಂಸ್ಥೆಗಳು ಮೆರೆಯುತ್ತಿದ್ದುದೊಂದು ಕಾಲ ೧೯೫೮ರಲ್ಲಿ "ಶ್ರೀ ಲಲಿತಕಲಾ ನಾಟ್ಯ ಮಂಡಳಿ" ಉದಯವಾಗಿ ಬಳ್ಳಾರಿಯ ಸಾಂಸ್ಕೃತಿಕ ಇತಿಹಾಸದಲ್ಲಿ ಒಂದು ಮಹತ್ತರ ಘಟ್ಟವಾಗಿದೆ.

"ಆರಂಭದ ದಿನಗಳಲ್ಲಿ ಮಂಡಳಿಯು ಚಿಕ್ಕ ಪುಟ್ಟ ಮನೋರಂಜನೆಗಳನ್ನು ಮಾತ್ರ ನೀಡುತ್ತಿತ್ತು. ಬಳ್ಳಾರಿಯಲ್ಲಿ ಮುಖ್ಯವಾದ ಸ್ತ್ರೀ ಪಾತ್ರಗಳಿಗೆ ಕಲಾವಿದರು ಸಿಗದೇ ಇರುವ ಅಂದಿನ ಕಾಲಗಳಲ್ಲಿ ಮೊಟ್ಟ ಮೊದಲಿಗೆ 'ರಕ್ಷತಾ,' ಮತ್ತು 'ಗಂಡ್ಸಲ್ವೆ ಗಂಡ್ಸು,' ಎಂಬ ಏಕಾಂತ ನಾಟಕಗಳನ್ನು ಮಂಡಳಿ ಪ್ರದರ್ಶಿಸಿ ನಾಟಕಗಳ ಪರಂಪರೆಗೆ ಅಡಿಪಾಯವನ್ನು ಹಾಕಿತು. 'ಬಡತನದ ಭೂತ,' 'ಆದರ್ಶ ಪ್ರೇಮ,' 'ಅಣ್ಣ ತಮ್ಮ,' 'ರೂಪಾವತಿ ರಕ್ಷತಾ,' 'ಗಂಡ್ಸಲ್ವೆ ಗಂಡಸ್ಸು,' 'ನಿಜಗಲ್ಲು ಗಿರಿಜಮ್ಮ,' 'ಪಾಶುಪತಾಸ್ತ್ರ,' 'ಅಪರಾಧಿನಿ,' 'ಸತಿಪತಿ ಯಯಾತಿ,' 'ಇದೆಂಥಾ ಸರಕಾರ', 'ಉತ್ತರ ಭೂಪ' ಮುಂತಾದ ನಾಟಕಗಳು ಪ್ರದರ್ಶನ ನಡೆಸಿದ ಪ್ರಮುಖ ನಾಟಕಗಳಾಗಿವೆ.

ಕೆ.ಎಂ.ವಿರೂಪಾಕ್ಷಯ್ಯ, ಪಿ. ತಿಮ್ಮಾರೆಡ್ಡಿ, ಕೃಷ್ಣಮೂರ್ತಿ, ವಿ.ಕೆ. ಪಂಪಾಪತಿರಾವ್, ಬೆಳಗಲ್‌ವೀರಣ್ಣ, ಜಿ.ಡಿ. ಪೀರಣ್ಣ ಮತ್ತು ಸಂಗೀತ ಕ್ಷೇತ್ರದಲ್ಲಿ ಕೆ.ವಿ. ಚೆನ್ನಯ್ಯ ಮತ್ತು ಐ.ವಿ.ಸಿ.ದಿವಾಕರ, ಜಾಲಿಬ್ರದರ್ಸ್, ಕೆ.ವಿ. ಭೀಮಪ್ಪ ಮತ್ತು ಎನ್. ತಿಮ್ಮಪ್ಪ ಇವರೆಲ್ಲರೂ ಪ್ರಮುಖ ಕಲಾವಿದರು.

ಮೈಸೂರು ದಸರಾ ಸಮಿತಿಯ ಆಮಂತ್ರಣದ ಮೇರೆಗೆ ೧೯೬೮ರಲ್ಲಿ ರಘುಪತಿ ರಚಿತ "ಶಾಸ್ತ್ರ ಸುಳ್ಳೇ?" ಎಂಬ ನಾಟಕವನ್ನು ಲಲಿತ ಕಲಾರಂಗವು ಮೈಸೂರಿನಲ್ಲಿ ಯಶಸ್ವಿಯಾಗಿ ಅಭಿನಯಿಸಿತು. ಅಲ್ಲದೇ ಆದರ್ಶ ಪ್ರೇಮ, ಅಣ್ಣ ತಮ್ಮ ನಾಟಕಗಳನ್ನು ಕುರುಗೋಡು, ಸಿರುಗುಪ್ಪ, ವಡ್ಡುಗಳಲ್ಲಿ ಯಶಸ್ವಿಯಾಗಿ ಅಭಿನಯಿಸಿ ಜನಾದರಣೆಯನ್ನು ಪಡೆಯಿತು. ೧೯೭೨ ರಲ್ಲಿ ರಾಜ್ಯ ಸಂಗೀತ ನಾಟಕ ಅಕಾಡೆಮಿಯು ಏರ್ಪಡಿಸಿದ ಕಲಾವಿಲಾಸ ಸಂಘಗಳ ನಾಟಕ ಸ್ಪರ್ಧೆಯಲ್ಲಿ ಲಲಿತಕಲಾ ರಂಗದ ಯಯಾತಿ ನಾಟಕವು ಪ್ರಥಮ ಬಹುಮಾನ ಪಡೆದು ಪ್ರೇಕ್ಷಕರ ಆಕರ್ಷಣೆಗೆ ಒಳಗಾಗಿ ಅಪಾರ ಮೆಚ್ಚುಗೆ ಪಡೆಯಿತು."[೨೪]

೧೯೫೫ರಲ್ಲಿ ಕನ್ನಡ ಚಲನಚಿತ್ರ ರಂಗದ ಖ್ಯಾತ ಕಲಾವಿದರಾದ ಡಾ.ರಾಜಕುಮಾರ, ಜಿ.ವಿ.ಅಯ್ಯರ್, ಕೆ.ಎಸ್.ಅಶ್ವಥ್, ನರಸಿಂಹರಾಜ, ಆದವಾನಿ ಲಕ್ಷ್ಮೀದೇವಿ ಮುಂತಾದವರು ಹಲವು ನಾಟಕಗಳನ್ನು ನೋಡಿ ಮೆಚ್ಚಿಗೆ ವ್ಯಕ್ತಪಡಿಸಿದ್ದರು. ಈ ಹಿನ್ನೆಲೆಯಲ್ಲಿ ಸುಭದ್ರಮ್ಮ ಮನ್ಸೂರು, ದಾವಣಗೆರೆ ವನಮಾಲ ಮತ್ತು ಬೆಂಗಳೂರು ಭವಾನಿಯಂತಹ ವೃತ್ತಿ ಕಲಾವಿದೆಯರು ಗುಣಾತ್ಮಕ ಕಲೆ ಮೈಗೂಡಿಸಿಕೊಂಡಿದ್ದರಿಂದ ಉತ್ತಮ ಕಲಾವಿದೆಯರು ಎಂದು ಹೆಸರಾಗಿದ್ದಾರೆ.

ಹೀಗಾಗಿ ಇಂತಹ ಉತ್ತಮ ಕಲಾವಿದೆಯರ ನಟನೆ, ಇವರಾಡಿದ ಅನೇಕ ರಂಗಗೀತೆಗಳು ಇಂತಹ ನಾಟಕ ಮಂಡಳಿಗಳು ವೇದಿಕೆಯಾಗಿ ಹೊರಹೊಮ್ಮುವುದಕ್ಕೆ ಅವಕಾಶ ನೀಡಿವೆ. ಈ ಮಂಡಳಿಯು ಏಕಾಂಕ, ಐತಿಹಾಸಿಕ, ಪೌರಾಣಿಕ, ಸಾಮಾಜಿಕ ನಾಟಕಗಳನ್ನು ಆಡಿ ಜಿಲ್ಲೆಯ ಕಲಾ ಪ್ರೇಮಿಗಳಿಗೆ ರಸದೌತಣವನ್ನು ಉಣಬಡಿಸಿದ್ದಾರೆ.

೨ ಚಿಕ್ಕೇನಕೊಪ್ಪ ಶರಣರ ಬಳಗ, ಬಳ್ಳಾರಿ.

"ವೃತ್ತಿ ಕಲಾವಿದರಿಂದಲೇ ಕೂಡಿದ ಈ ಶರಣರ ಬಳಗದ ಹಿಂದಿದ್ದ ಚೇತನ ಶೀಲ ವ್ಯಕ್ತಿ ದಿವಂಗತ ಸಿರಿಗೇರಿ ನಾಗನಗೌಡ್ರು. ಪೂರ್ಣಾಭಿನಯದಿಂದ ಕೂಡಿದ ಇವರ ಎರಡು ನಾಟಕಗಳೆಂದರೆ "ಅಕ್ಕಮಹಾದೇವಿ" ಮತ್ತು "ಹೇಮರೆಡ್ಡಿ ಮಲ್ಲಮ್ಮ" ಇಂದಿಗೂ ಜನರ ಮನದಲ್ಲಿ ನೆಲೆಸಿರುವ "ಹೇಮರೆಡ್ಡಿ ಮಲ್ಲಮ್ಮ" ಹಲವಾರು ವಿಶಿಷ್ಟತೆಗಳಿಂದ ಕೂಡಿದ ನಾಟಕವಾಗಿದ್ದು, 'ಮಲ್ಲಮ್ಮನ' ಪಾತ್ರದಲ್ಲಿ ಅಭಿನಯಿಸುವ ಸುಭದ್ರಮ್ಮ ಮನ್ಸೂರು, ತಮ್ಮ ಹಾಡುಗಳಿಂದ ಕ್ರಿಯೆಗೆ ಒಂದು ನಿತ್ಯಜೀವನಗಳ ಸಾಮಾನ್ಯ ಜಗತ್ತಿನಿಂದ ಆಚೆ ಕರೆದೊಯ್ಯುತ್ತಿದ್ದರು. ಎರಂಗಳಿ ಶಿವಣ್ಣನವರು ಅತ್ತೆಯ ಪಾತ್ರದಲ್ಲಿ ಅದ್ಭುತ ಅಭಿನಯ ನೀಡಿದರೆ ಮಂಜುನಾಥ ಗೌಡ, ನಾಗನಗೌಡರ, ವೇಮನ ಮತ್ತು ಹೇಮರೆಡ್ಡಿ, ಭರಮರೆಡ್ಡಿಯವರ ಪಾತ್ರಗಳೂ ಜೀವಪೂರ್ಣವಾಗಿರುತ್ತಿದ್ದವು.

ಬಹುತೇಕ ಇದೇ ಕಲಾವಿದರಿಂದ ಪ್ರಯೋಗಗೊಂಡ ಪೌರಾಣಿಕ ನಾಟಕಗಳೆಂದರೆ ಕಂದಗಲ್ಲ ಹನುಮಂತರಾಯರ “ರಕ್ತರಾತ್ರಿ” ಮತ್ತು “ಕುರುಕ್ಷೇತ್ರ”ಗಳು. ವೀರ ರಸದಿಂದ ತುಂಬಿದ್ದು, ನಟರ ಸಂಭಾಷಣೆಯ ಶೈಲಿಯಿಂದಲೇ ಪ್ರೇಕ್ಷಕರ ಚಪ್ಪಾಳೆಯನ್ನು ಗಿಟ್ಟಿಸುತ್ತಿದ್ದರೆ, ಬಳ್ಳಾರಿಯ ಚೆನ್ನಬಸಪ್ಪ, ಸಿರುಗುಪ್ಪಾದ ವೆಂಕಟಕೃಷ್ಣರೆಡ್ಡಿ ‘ಕೃಷ್ಣನ’ ಪಾತ್ರಾಭಿನಯದಲ್ಲಿ, ಗಮನ ಮತ್ತು ಹಾಡುಗಳಿಂದ ಶಹಬ್ಬಾಸ್‌ಗಿರಿ ಪಡೆಯುತ್ತಿದ್ದರು. ಶಕುನಿ ಪಾತ್ರದ ಬೆಳಗಲ್ ವೀರಣ್ಣನವರು ರಾಜ್ಯ ಮಟ್ಟದಲ್ಲಿ ಹೆಸರು ಮಾಡಿದಂತಹ ದೈತ್ಯ ಪ್ರತಿಭೆ. ಜಿಲ್ಲೆಯ ಏಕೈಕ ವೃತ್ತಿ ಕಲಾವಿದರಿಂದ ಕೂಡಿದ ಈ ತಂಡಕ್ಕೆ ಹೊಸನೀರು ಸೇರಿಕೊಂಡು ಹರಿಯಬೇಕಾಗಿದೆ.”[೩೫]

೩. ‘ಲಲಿತಕಲಾ ರಂಗ,’ ಮರಿಯಮ್ಮನ ಹಳ್ಳಿ.

“ಲಲಿತಕಲಾ ರಂಗ ಮರಿಯಮ್ಮನಹಳ್ಳಿ ಗ್ರಾಮೀಣ ಭಾಗದ ಕೆಲವೇ ಪ್ರಯೋಗಾತ್ಮಕ ನಾಟಕ ತಂಡಗಳಲ್ಲಿ ಒಂದಾಗಿದೆ. ವೃತ್ತಿನಾಟಕದ ರಂಗ ಬದ್ಧತೆ ಹಾಗೂ ಹವ್ಯಾಸಿ ನಾಟಕದ ಪ್ರಯೋಗ ಶೀಲತೆ ಎರಡನ್ನೂ ಮೈಗೂಡಿಸಿಕೊಂಡ ಅಪರೂಪದ ತಂಡ. ಈ ಊರಿನಲ್ಲಿಯೇ ಪ್ರಸಿದ್ಧ ಬಯಲಾಟದ ಮೇಸ್ಟ್ರುಗಳಿದ್ದಾರೆ. ಸಂಗೀತಗಾರರಿದ್ದಾರೆ. ಶಿಲ್ಪಿಗಳು, ಜಾನಪದ ವಾದ್ಯಗಳಲ್ಲಿ ಪರಿಣಿತಿ ಹೊಂದಿದವರೂ ಇದ್ದಾರೆ. ಇದು ಎಲ್ಲ ಕಲೆಗಳ ಸಂಗಮವೇ ಈ ಲಲಿತಕಲಾ ರಂಗದ ಊರು ಮರಿಯಮ್ಮನಹಳ್ಳಿ. ಎಲ್ಲಾ ಕಲೆಗಳಿಗೆ (ಲಲಿತಕಲೆ) ಪ್ರೋತ್ಸಾಹ ಕೊಡುವ ದೃಷ್ಟಿಯಿಂದಲೇ ಲಲಿತಕಲಾ ರಂಗ ಸ್ಥಾಪನೆಯಾಯಿತು. ಇದರ ಪ್ರಮುಖ ಗುರಿ ನಾಟಕವೇ ಆಗಿತ್ತು. ಇದರ ಮಹತ್ವವನ್ನರಿತೇ ಈ ಊರಿನ ಯುವಕರು ಕಳೆದ ಹತ್ತು ವರ್ಷಗಳ ಹಿಂದೆ ಕಟ್ಟಿರುವ ಲಲಿತಕಲಾ ರಂಗ ರಾಜ್ಯದ ರಂಗಭೂಮಿ ಆಸಕ್ತರಿಗೆಲ್ಲಾ ಈ ಸಂಸ್ಥೆ ಚಿರಪರಿಚಿತವಾದ ಹೆಸರಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ೧೯೮೮ರಲ್ಲಿ ಆರಂಭವಾದ ಈ ತಂಡ ಈಗಾಗಲೇ ಹತ್ತಾರು ವೈವಿಧ್ಯಮಯ ನಾಟಕಗಳ ಪ್ರದರ್ಶನ ನೀಡಿದೆ. ರಾಜ್ಯ ರಾಷ್ಟ್ರಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ ಅನೇಕ ಪ್ರಶಸ್ತಿಗಳನ್ನು ಗಿಟ್ಟಿಸಿದೆ. ಹಲವಾರು ನಾಟಕೋತ್ಸವಗಳನ್ನು ಸಂಘಟಿಸಿ ಕಳೆದ ಕೆಲವು ವರ್ಷಗಳಿಂದ ಕಲಬುರ್ಗಿ ವಿಭಾಗ ಮಟ್ಟದ ನಾಟಕ ಸ್ಪರ್ಧೆಗಳನ್ನು ಏರ್ಪಡಿಸಿ ಇತರ ತಂಡಗಳಿಗೆ ಪ್ರೋತ್ಸಾಹ ನೀಡುವ ಕೆಲಸ ಮಾಡುತ್ತಲೇ ಬಂದಿದೆ.

ಲಲಿತಕಲಾ ರಂಗದಲ್ಲಿರುವ ಕಲಾವಿದರೆಲ್ಲಾ ಸುತ್ತ-ಮುತ್ತ ಪ್ರದೇಶಗಳಲ್ಲಿ ನಟಿಸುವ ವೃತ್ತಿ ಕಲಾವಿದರಾದರು. ಮ.ಬ.ಸೋಮಣ್ಣನವರ ಕನಸಾದ ನಮ್ಮ ಊರಿನ ಕಲಾವಿದ ಲೋಕದ ಜನರ ಕಲೆಗೆ ಹಸಿವನ್ನು ತಣಿಸುವಾಗ ನಮ್ಮೂರಿನಲ್ಲಿಯೆ ಅಂಥಾ ಹವ್ಯಾಸಿ ತಂಡ ಏಕೆ ಇರಬಾರದು ಎಂದು ಪ್ರಸಿದ್ಧ ತಬಲವಾದಕರಾದ ನಾಟಕಕಾರರು ಆದ ಮ.ಬ. ಸೋಮಣ್ಣ ನವರಿಗೆ ಛಲಹುಟ್ಟಿತು. ಆಗ ಕೈ ಜೋಡಿಸಿದಂತಹ ಕಲಾವಿದರಾದ ಹೆಚ್ ರಸೂಲ್, ಚಿದಂಬರ ದೀಕ್ಷಿತ, ನೇಮಿರಾಜ ನಾರಾಯಣಮೂರ್ತಿ, ಪತ್ರಿಬಸಪ್ಪ, ಡಾ.ಅಂಬಣ್ಣ, ವಿರುಪಾಕ್ಷಪ್ಪ ಹಾಗೂ ವೃತ್ತಿ ಕಲಾವಿದೆಯರಾದ ಶಾರದ, ಯಶೋಧ,

ಎನ್.ರೇಣುಕಾ, ಡಿ.ಎಂ ತೋಟಯ್ಯ ಸ್ವಾಮಿ, ಕಾಸಿಂಸಾಬ್ ಮುಂತಾದವರ ಸಹಯೋಗದೊಂದಿಗೆ ಈ ಲಲಿತಕಲಾ ರಂಗದ ಸ್ಥಾಪನೆಗೆ ಕಾರಣವಾಗಿದೆ. ಈ ತಂಡದ ಆರಂಭದ ದಿನಗಳಲ್ಲಿ ಸುಪ್ರಸಿದ್ಧ ನಾಟಕಕಾರರಾದ ಎನ್.ಎಸ್.ರಾವ್, ನವರತ್ನರಾಂ, ಚಂದ್ರಶೇಖರ ಕಂಬಾರ, ಎಂ.ಕೆ.ಕೀರಣಗಿ, ಎಂ.ಎಸ್ ಲಿಂಗರಾಜ್ ಅಂತವರ ನಾಟಕಗಳನ್ನು ಪ್ರಯೋಗಕ್ಕೆ ತೆಗೆದುಕೊಂಡಿತು.

ವಾರ್ತಾ ಇಲಾಖೆ ಕಲಾವಿದ ಕೆ. ಶಿವರುದ್ರಯ್ಯ ಈ ಸಂಘದ ಖ್ಯಾತಿಯನ್ನು ಬೆಂಗಳೂರಿನಲ್ಲಿ ಕೇಳಿ ತಮ್ಮ ಇಲಾಖೆಯ ಕಾರ್ಯಕ್ರಮ ಅಂಗವಾಗಿ ಮರಿಯಮ್ಮನ ಹಳ್ಳಿ ಲಲಿತಕಲಾ ರಂಗಕ್ಕೆ ಗೊ.ರು. ಚೆನ್ನಬಸಪ್ಪ ನವರ 'ಬೆಳ್ಳಕ್ಕಿ ಹಿಂಡು ಬೆದರ್ಯಾವೋ' ನಾಟಕ ನಿರ್ದೇಶಿಸಿದರು. ಕಲಾರಂಗಕ್ಕೆ ಬಂದ ಹೊಸ ಕಲಾವಿದರಾದ ರಾಮಾಂಜಿನೇಯ, ಅಶೋಕ ಬೆಳ್ಳಿನವರು ಚೆನ್ನಾಗಿಯೇ ನಟಿಸಿದರು.

ಲಲಿತಕಲಾ ರಂಗದ ಪ್ರಮುಖ ಪ್ರಯೋಗಗಳೆಂದರೆ 'ಆದರ್ಶ ಪ್ರೇಮ' 'ಗಂಡನ ಆಜ್ಞೆ' 'ರೊಟ್ಟಿಋಣ', 'ಕಾಡುಕುದುರೆ', 'ಊರುಕೇರಿ' ಮತ್ತು 'ಬೆಳ್ಳಕ್ಕಿಹಿಂಡು ಬೆದರ್ಯಾವೋ' ಮುಂತಾದವು. ಜೋಗ್, ದೋಣಿಮಲೈ ಉಡುಪಿಗಳಲ್ಲಿ ನಡೆದ ರಾಜ್ಯ ಮಟ್ಟದ ನಾಟಕ ಸ್ಪರ್ಧೆಗಳಲ್ಲಿ ಈ ತಂಡದ ಅನೇಕ ಸದಸ್ಯರು ನಟನೆ, ನಿರ್ದೇಶನಗಳಿಗಾಗಿ ಹಲವು ಬಾರಿ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಇತ್ತೀಚಿನ ಬೆಳವಣಿಗೆಯ ದಿನಗಳಲ್ಲಿ ಈ ತಂಡ ನಾಟಕ ಪ್ರದರ್ಶನಗಳ ಜೊತೆಗೆ, ತರಬೇತಿ ಶಿಬಿರ, ವಿಚಾರ ಸಂಕಿರಣ, ಸಂಗೀತ, ನಾಟ್ಯ ಶಾಲೆ ಆರಂಭ, ಚಿತ್ರ ಪ್ರದರ್ಶನ, ಪುಸ್ತಕ ಪ್ರಕಟಣೆಯಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಗಮಕಸಂಜೆ, ಯಕ್ಷಗಾನ ಕಲಾವಿದರ ಸಮಾವೇಶ, ಸುಗಮ ಸಂಗೀತ, ದಾಸರ ಸಂಗೀತ, ರಂಗತರಬೇತಿಶಿಬಿರ ಇವೇ ಮೊದಲಾದವು ಲಲಿತಕಲಾ ರಂಗದ ವ್ಯಾಪ್ತಿಯನ್ನು ಹೆಚ್ಚಿಸುತ್ತಿವೆ."[೩೬]

ಹೀಗೆ ಲಲಿತಕಲಾ ರಂಗ ನಾಟಕವೆ ಪ್ರಮುಖ ಗುರಿ ಹೊಂದಿ ಮುಂದೆ ಅನೇಕ ಕಲಾವಿದರನ್ನು ಬೆಳೆಸುವಲ್ಲಿ ಯಶಸ್ವಿಯಾಗುವುದಾಗಿದೆ. ತೋಟಯ್ಯ ಸ್ವಾಮಿ, ಮ.ಬ. ಸೋಮಣ್ಣ ರಂತಹ ಕಲಾವಿದರು ರಂಗಗೀತೆಗಳನ್ನು ರಚನೆ ಮಾಡಿ, ನಾಟಕಗಳನ್ನು ಸ್ವತಃ ಬರೆದು ಈ ರಂಗವೇದಿಕೆಯಲ್ಲಿ ಯಶಸ್ವಿ ನಾಟಕಗಳನ್ನು ಪ್ರದರ್ಶಿಸಿರುವುದನ್ನು ಕಾಣಬಹುದು. ರಂಗಗೀತೆಗಳನ್ನು ಹಾಡುವ ಕೆ. ನಾಗರತ್ನಮ್ಮ, ಶಾರದ ಮುಂತಾದ ಕಲಾವಿದರು ಹಾಡಿ ಪ್ರೇಕ್ಷಕರ ಮನಸೊರೆಗೊಂಡಿದ್ದಾರೆ.

೪. ನಟರಾಜ ಕಲಾವಿಜಯ ಸಂಘ, ಕಂಪ್ಲಿ.

ಕಂಪ್ಲಿಯಲ್ಲಿ ೧೯೫೪ರಲ್ಲಿ ಸ್ಥಾಪಿತವಾದ ನಟರಾಜ ಕಲಾವಿಜಯ ಸಂಘವು ನಾಟಕ, ಗಾಯನ, ಸಂಗೀತ, ಸಂಸ್ಕೃತಿ, ಸಾಹಿತ್ಯ ಹಾಗೂ ಕ್ರೀಡೆ ಇತ್ಯಾದಿ ಕಲೆಗಳನ್ನು ಅಭಿವೃದ್ಧಿಗೊಳಿಸುವ ಧ್ಯೇಯೋದ್ದೇಶಗಳನ್ನಿಟ್ಟುಕೊಂಡು ತನ್ನ ಕಾರ್ಯಕಲಾಪಗಳನ್ನು ವಿಸ್ತರಿಸಿಕೊಂಡಿತು.

೧೯೫೪-೫೬ ರ ಅವಧಿಯಲ್ಲಿ ಈ ಸಂಘದ ಕಲಾವಿದರಾದ ರಾಂಜಿ ಸೋಮನಾಥ, ಪಿಯ್ನಿ ಪಂಪಣ್ಣ ಅವರ ನಿರ್ದೇಶನದಿಂದ 'ವಧು ವರ' 'ಪ್ರಪಂಚ ಪರೀಕ್ಷೆ' 'ರೂಪಾಯಿ ಬಾಲಚಂದ್ರ' 'ಮುದ್ದಿ

ಹುಚ್ಚು' ಎಂಬ ಸಾಮಾಜಿಕ ನಾಟಕಗಳನ್ನು ಅದ್ದೂರಿಯಿಂದ ಸಂಘವು ಪ್ರದರ್ಶಿಸಿ ಅಪಾರ ಜನ ಮೆಚ್ಚುಗೆ ಪಡೆಯಿತು. ೧೯೫೪-೫೫ ರಲ್ಲಿ ವೆಂಕೋಬಸಾಳೆಯವರು ಬರೆದು ನಿರ್ದೇಶಿಸಿದ 'ಜರಿಪೇಟ' 'ಜೀವನಯಾತ್ರೆ', 'ಶೋಕಚಕ್ರ' 'ವಿಜಯನಗರದ ಮಣಿ ಮುಕುಟ' ಹಾಗೂ 'ಪಡೆದ ತತ್ತು' ನಾಟಕಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿ ಜನಮನವನ್ನು ಚೇತನಗೊಳಿಸಿತು.

೧೯೬೯ರ ಸುಮಾರು ಕನಕಗಿರಿ ವಾಡಿರಾಜನ 'ಗಂಡುಗಲಿ ಕುಮಾರರಾಮ' ಎಂಬ ಐತಿಹಾಸಿಕ ನಾಟಕಗಳನ್ನು ಹಾಗೂ 'ಕಣ್ಣಿದ್ದು ಕುರುಡು' ಎಂಬ ಸಾಮಾಜಿಕ ನಾಟಕಗಳನ್ನು ಅದ್ದೂರಿಯಿಂದ ಪ್ರದರ್ಶಿಸಿದರೆ, ೧೯೭೦ರಲ್ಲಿ 'ಅತ್ಯಾಚಾರ' ಎಂಬ ನಾಟಕವನ್ನು, ೧೯೭೨ ರಲ್ಲಿ ಸತ್ಯಮೇವ ಜಯತೆ ಎಂಬ ನಾಟಕವನ್ನು, ೧೯೭೪ರಲ್ಲಿ 'ರತ್ನ ಸಿಂಹಾಸನ' ಎಂಬ ನಾಟಕವನ್ನು ಮತ್ತು ೧೯೭೫ರಲ್ಲಿ 'ಸಮಾಜಕ್ಕೆ ಕಣ್ಣಿದೆಯೇ' ಎಂಬ ನಾಟಕಗಳನ್ನು ಪ್ರದರ್ಶಿಸಲಾಯಿತು.

ಗುಬ್ಬಿ ಚೆನ್ನಬಸವೇಶ್ವರ ನಾಟಕ ಸಂಘದವರು ೧೯೮೦ರಲ್ಲಿ ಅಕ್ಟೋಬರ್ ತಿಂಗಳಲ್ಲಿ ಪ್ರದರ್ಶಿಸುವ 'ಎಡೆಯೂರು ಸಿದ್ಧಲಿಂಗೇಶ್ವರ ಮಹಾತ್ಮೆ' ಹಾಗೂ 'ಎಮ್ಮಿಗ ನೂರು ಜಡೇಸಿದ್ಧೇಶ್ವರ ಮಹಾತ್ಮೆ' ಎಂಬ ಪೌರಾಣಿಕ ನಾಟಕಗಳೊಂದಿಗೆ ಇತರ ನಾಟಕಗಳನ್ನೊಳಗೊಂಡ ಸತತವಾಗಿ ೭೫ ದಿನಗಳ ಕಾಲ ಪ್ರದರ್ಶನ ನಡೆಯಿತು. ಜಿಲ್ಲೆಯ ತುಂಬ ಪ್ರದರ್ಶನ ನೀಡಿದ ಸಂಘವು ಇಂದಿಗೂ ವರ್ಷಕ್ಕೊಂದರಂತೆಯಾದರೂ ನಾಟಕಗಳನ್ನು ಪ್ರದರ್ಶಿಸುತ್ತಾ ಜೀವಂತವಾಗಿದೆ ಎಂಬುದು ಸಂತಸದ ಸಂಗತಿಯಾಗಿದೆ."[೩೭]

ಹೀಗೆ 'ನಟರಾಜ ಕಲಾವಿದ ಸಂಘವು' ಅನೇಕ ನಾಟಕಗಳನ್ನು ಪ್ರದರ್ಶಿಸುತ್ತಾ ಪ್ರತಿಭಾನ್ವಿತ ಕಲಾವಿದರನ್ನು ಒಳಗೊಂಡಿದೆ. ಹಾಗೆಯೇ ವಾದಿರಾಜರು ನಾಟಕಕಾರರಾಗಿ, ನಟರಾಗಿ, ಸಂಗೀತ ಸಂಯೋಜಕರಾಗಿ, ರಂಗಗೀತೆಗಳ ರಚನಾಕಾರರಾಗಿ ಈ ಸಂಘದಲ್ಲಿ ಕಾರ್ಯ ನಿರ್ವಹಿಸುವುದು ಮನಗಾಣಬಹುದಾಗಿದೆ. ಕಂಪ್ಲಿ ವಾದಿರಾಜರು ಬರೆದಿರುವಂತಹ ೫೦೦ರಕ್ಕೂ ರಂಗಗೀತೆಗಳು ಇಲ್ಲಿ ನಾಟಕಗಳಲ್ಲಿ ಅಳವಡಿಸಿ ಕಲಾ ಪ್ರೇಮಿಗಳಿಗೆ ಸರದೌತಣ ನೀಡಿರುವುದು ನಿರ್ವಿವಾದ ಸಂಗತಿಯಾಗಿದೆ.

೫ ಕನ್ನಡ ಕಲಾಸಂಘ, ಟಿ.ಬಿ.ಡ್ಯಾಂ.

"೧೯೫೫-೧೯೫೪ ತುಂಗಾಭದ್ರಾ ಅಣೆಕಟ್ಟಿನ ನಿರ್ಮಾಣದ ನಿಮಿತ್ತಾ ಆಂಧ್ರ, ತಮಿಳುನಾಡು ಹಾಗೂ ಕೇರಳ ರಾಜ್ಯಗಳಿಂದ ವಲಸೆ ಬಂದಿರುವ ಸಾವಿರಾರು ಕುಟುಂಬಗಳು ತುಂಗಭದ್ರಾ ಡ್ಯಾಂನಲ್ಲಿ ತಳವೂರಿದರು. ಅಂದಿನಿಂದ ೧೯೬೦ರ ವರೆಗೆ ಕನ್ನಡೇತರ ಸಾಂಸ್ಕೃತಿಕ ರಂಗದಲ್ಲಿ ಮೇಲುಗೈ ಸಾಧಿಸಿತು.

೧೯೬೦ ರಲ್ಲಿಯ ಒಂದು ಮಹತ್ತರ ಬದಲಾವಣೆಯಿಂದಾಗಿ ಅಂದಿನ ಮೈಸೂರು ರಾಜ್ಯ ಮತ್ತು ಆಂಧ್ರ ರಾಜ್ಯಗಳ ಬಡತನದಿಂದ "ತುಂಗಭದ್ರಾ ಸ್ಟೀಲ್ ಪ್ರಾಡಕ್ಟ್" ಎಂಬ ಸರ್ಕಾರಿ ಸ್ವಾಮ್ಯದ ಉದ್ದಿಮೆ ಉದಯವಾಯಿತು. ಈ ಉದ್ದಿಮೆಯಲ್ಲಿ ಕೆಲಸ ಮಾಡುವ ಕನ್ನಡಿಗರಾದ ಕನ್ನಡದ ಅಪ್ಪಟ ಅಭಿಮಾನಿಗಳಾದ ಎಂ. ಕಾಳಪ್ಪ, ದೇವದಾಸ್, ರಾಮಯ್ಯ, ಎಸ್.ಕೆ. ಅರಸ್, ಎಮ್.ಎಲ್.ರಾಮಚಂದ್ರ, ಲಕ್ಷ್ಮೀಪತಿ,

ರುದ್ರಪ್ಪ, ಕೆ.ಆರ್.ಭಟ್, ಡಬ್ಲ್ಯೂ.ಹೆಚ್.ನಾಗರಾಜ, ಎಂ. ಶಂಕರಗೌಡ, ವೈ.ಡಿ. ಪ್ರಹ್ಲಾದ, ಸಾಲ್ಮನಿ ಸೋಮಪ್ಪ ಮುಂತಾದವರು ಒಂದುಗೂಡಿ "ಕನ್ನಡ ಕಲಾಸಂಘವನ್ನು" ೧೯೬೪ರಲ್ಲಿ ಟಿ.ಬಿ ಡ್ಯಾಂನಲ್ಲಿ ಸ್ಥಾಪಿಸಿದರು. ಈ ಸಂಘವು ಕನ್ನಡ ಸಾಂಸ್ಕೃತಿಗೆ ರಂಗದಲ್ಲಿ ತನ್ನ ಪುಟವನ್ನು ತೆಗೆದುಕೊಂಡಿತು. ಅಂದಿನಿಂದ ಇದು ಕನ್ನಡ ಧ್ವಜ ಹಾಗೂ ಕನ್ನಡದ ಕಂಪನ್ನು ಇಂದಿಗೂ ನಿರಂತರವಾಗಿ ಮೆರೆಯುತ್ತಲೇ ಬಂದಿದೆ. ದುಡಿಯುವ ವರ್ಗಕ್ಕೆ ಆಡಳಿತ ವರ್ಗದ ಪ್ರೋತ್ಸಾಹದಿಂದ ಅಸ್ತಿತ್ವಕ್ಕೆ ಬರುವ ಸಂಘಗಳ ಪೈಕಿ ಸದಾ ಕ್ರಿಯಾಶೀಲವಾಗಿರುವ ವಿರಳ ಸಂಘಗಳಲ್ಲಿ ಇದು ಒಂದಾಗಿದೆ. ಅಂದು ಕೇವಲ ೨೫ ಜನ ಸದಸ್ಯರನ್ನು ಹೊಂದಿ ೧೯೮೦ರಲ್ಲಿ ಕರ್ನಾಟಕ ನಾಟಕ ಅಕಾಡೆಮಿಯಲ್ಲಿ ನೋಂದಾಯಿಸಲ್ಪಟ್ಟ ಬಳ್ಳಾರಿ ಜಿಲ್ಲೆಯಲ್ಲಿಯೇ ವ್ಯವಸ್ಥಿತವಾಗಿ ಬೆಳೆದು ನಿಂತ ಏಕೈಕ ಕಲಾ ಸಂಘ ಇದಾಗಿದೆ.

ಕನ್ನಡ ಕಲಾಸಂಘವು ನಿರಂತರವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ಸಾಹಿತ್ಯ, ಸಂಗೀತ, ಕಲೆ, ರಂಗಭೂಮಿ ಮುಂತಾದ ಪ್ರಕಾರಗಳಲ್ಲಿ ಹಲವಾರು ಯಶಸ್ವಿ ಕಾರ್ಯಕ್ರಮಗಳನ್ನು ನೀಡುತ್ತಾ ಬಂದಿದೆ. ಕೇವಲ ಟಿ.ಬಿ.ಡ್ಯಾಂನ ಪ್ರೇಕ್ಷಕರಿಗೆ ಮಾತ್ರ ಸೀಮಿತವಾಗಿರದೇ, ಸುತ್ತಮುತ್ತಲಿನ ಪ್ರದೇಶಗಳಾದ ಹುಲಿಗಿ, ಮುನಿರಾಬಾದ್, ಹೊಸಪೇಟೆ, ಮರಿಯಮ್ಮನಹಳ್ಳಿಗಳಿಂದಲೂ ಪ್ರೇಕ್ಷಕರು ಬಂದು ಕಾರ್ಯಕ್ರಮಗಳನ್ನು ವೀಕ್ಷಿಸುತ್ತಾರೆ. ನಿರಂತರವಾಗಿ ಕ್ರಿಯಾಶೀಲತೆಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡುತ್ತಾ ಸಾಂಸ್ಕೃತಿಕ ರಂಗದಲ್ಲಿಯೇ ತನ್ನ ಅನನ್ಯತೆಯನ್ನು ನಿರ್ಮಿಸಿದೆ. ಸಂಘದ ಕಲಾವಿದರು ಸ್ಥಳೀಯ "ಆಕಾಶವಾಣಿ" ಕೇಂದ್ರದಲ್ಲೂ ವೈವಿಧ್ಯಮಯ ಕಾರ್ಯಕ್ರಮಗಳನ್ನು ನೀಡಿ "ಆಕಾಶವಾಣಿ" ಶೋತೃಗಳ ಮೆಚ್ಚುಗೆ ಪಡೆದಿದ್ದಾರೆ.

ಪ್ರತಿಭಾ ಸ್ಪರ್ಧೆ, ಪುರಂದರದಾಸರ ಸಂಗೀತೋತ್ಸವ ಟಿ.ಪಿ ಕೈಲಾಸಂ ದಿನಾಚರಣೆ, ಕರ್ನಾಟಕ ರಾಜೋತ್ಸವ, ಹಾಗೂ ಮಕ್ಕಳ ದಿನಾಚರಣೆಗಳನ್ನು ಕನ್ನಡದ ಕಲಾಸಂಘವು ಪ್ರತಿ ವರ್ಷವೂ ಐದು ನಿಗದಿತ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡುತ್ತಿದೆ. ಹಾಗೆಯೇ ತನ್ನದೇ ಚಿಕ್ಕ ಪುಸ್ತಕ ಭಂಡಾರವನ್ನು ತೆರೆದಿದೆ. ಇದರಲ್ಲಿ ಸುಮಾರು ೫೦೦೦ ಕಥೆ, ಕವನ, ನಾಟಕ, ಕಾದಂಬರಿ, ಪುಸ್ತಕಗಳಿವೆ. ಕಲೆ, ಸಾಹಿತ್ಯ, ಸಂಗೀತ, ನಾಟಕಗಳಲ್ಲಿ ಸಂಘವು ಸಕ್ರಿಯವಾಗಿ ಪಾತ್ರ ನಿರ್ವಹಿಸುತ್ತಾ ಸಾಮಾಜಿಕ ಪೌರಾಣಿಕ, ಐತಿಹಾಸಿಕ , ಜಾನಪದ, ಅಸಂಗತ ನಾಟಕಗಳನ್ನು ಹಲವಾರು ಬಾರಿ ಹಲವಾರು ಕಡೆ ಪ್ರದರ್ಶಿಸಿ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದು ಬಳ್ಳಾರಿ ಜಿಲ್ಲೆಯಲ್ಲೇ ಹೆಸರುವಾಸಿಯಾದ ಸಾಂಸ್ಕೃತಿಕ ಸಂಘವಾಗಿದೆ.

ಕನ್ನಡ ಕಲಾಸಂಘದ ಕಲಾವಿದರು ಅನೇಕ ಜಿಲ್ಲಾಮಟ್ಟದ, ರಾಜ್ಯಮಟ್ಟದ ಹಾಗೂ ಅಖಿಲ ಭಾರತ ಮಟ್ಟದ ನಾಟಕ ಸ್ಪರ್ಧೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಂಡು ಹಲವಾರು ಪ್ರಶಸ್ತಿ, ಪಾರಿತೋಷಕಗಳನ್ನು ಪಡೆದು ಕರ್ನಾಟಕ ರಂಗಭೂಮಿಯಲ್ಲಿ ತಮ್ಮದೇ ಆದ ಸ್ಥಾನವನ್ನು ಪಡೆದಿದ್ದಾರೆ. ಹೆಸರಾಂತ ನಾಟಕಕಾರರ ನೂರಾರು ನಾಟಕಗಳನ್ನು ಕನ್ನಡಕ್ಕೆ ರೂಪಾಂತರಿಸಿ ಸತತವಾಗಿ ಪ್ರದರ್ಶಿಸಿ ಜನಮನಕ್ಕೆ ಸಂತಸವನ್ನು ಹಂಚಿದ್ದಾರೆ. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಈ ಸಂಘ ರಂಗ ಚಟುವಟಿಕೆಗಳಲ್ಲಿ

ಉತ್ತಮ ಸಾಧನೆ ಮಾಡಿದೆ. ಹಾಗೆಯೇ ಕರ್ನಾಟಕ ಹಾಗೂ ನೆರೆ ರಾಜ್ಯಗಳಲ್ಲಿಯೂ ಗುರುತಿಸಿಕೊಂಡಿದೆ. ರಾಜ್ಯದಾದ್ಯಂತ ರಂಗಾಸಕ್ತರ ಗಮನ ಸೆಳೆದು ಬಂದಿರುವ ಈ ಸಂಘ ಇನ್ನೂ ಹೆಚ್ಚಿನ ರೀತಿಯಲ್ಲಿ ಪ್ರೇಕ್ಷಕರನ್ನು ಪಡೆದು ಈ ಭಾಗದಲ್ಲೆಲ್ಲಾ ನಿರಂತರವಾಗಿ ರಂಗಚಟುವಟಿಕೆಗಳು ಬೆಳೆಯಲು ಶ್ರಮಿಸುತ್ತದೆ, ಶ್ರಮಿಸುತ್ತಲಿದೆ.

ಕನ್ನಡ ಕಲಾಸಂಘವು ಪ್ರದರ್ಶಿಸಿದ ಕೆಲವು ಪ್ರಮುಖ ನಾಟಕಗಳೆಂದರೆ 'ಸಂಗೊಳ್ಳಿ ರಾಯಣ್ಣ', 'ಅಂಗುಲಿಮಾಲ', 'ಇಂಟರ್ ಈಡಿಯಟ್', 'ಪತ್ನಿ ಸೇವಕರು', 'ರಣದುಂದುಬಿ', 'ಹುತ್ತ', 'ಸುಳಿಯಲ್ಲಿ ಸಿಕ್ಕವರು', 'ದಿವ್ಯ ದರ್ಶನ', 'ಆರ್. ಅಂತ್ಯವಲ್ಲ', 'ಇದು -ಆರಂಭ', 'ಮಹಾನಟಿ ಕಾಲಧರ್ಮ', 'ಜೈ ಮೈಲಾರಲಿಂಗ', 'ಹೆಂಡತಿಯೇ ನಿನಗೆ ನಮೋ ನಮೋ', 'ದಫನ್', 'ರಾವಿ ನದಿಯ ದಂಡೆಯ ಮೇಲೆ', ಇವು ಈ ಸಂಘವು ಪ್ರದರ್ಶಿಸಿದ ಕೆಲವು ಪ್ರಮುಖ ನಾಟಕಗಳಾಗಿವೆ."[೬೮] ಹಾಗೆಯೇ ಈ ನಾಟಕಗಳ ಸನ್ನಿವೇಶಕ್ಕೆ ತಕ್ಕಂತ ರಂಗಗೀತೆಗಳನ್ನು ಗಾಯಕರು ಹಾಡುತ್ತಾ ಬಂದಿರುವುದು ಮನಗಾಣಬಹುದು.

೬. ಮಾಧ್ಯಮ ಕಲಾತಂಡ, ಹೊಸಪೇಟೆ.

"೧೯೭೫ ರಿಂದ ಒಂದು ದಶಕಗಳಿಗೂ ಹೆಚ್ಚು ಕಾಲ ಕ್ರಿಯಾಶೀಲವಾಗಿದ್ದ ಡಾ.ಬಸವರಾಜ ಮಲಶೆಟ್ಟಿಯವರ "ಮಾಧ್ಯಮ ತಂಡ"ವು ಚಂಪಾರವರ 'ಗೋಕರ್ಣದ ಗೌಡಶ್ಯಾನಿ', ಲಂಕೇಶರ 'ನನ್ನ ತಂಗಿಗೊಂದು ಗಂಡು ಕೊಡಿ' ಮತ್ತು ಹಿಂದಿಯಿಂದ ಅನುವಾದಗೊಂಡ 'ಚೋರ ಚರಣ ದಾಸ' ನಾಟಕಗಳನ್ನು ಪ್ರಯೋಗಿಸಿತು.

ಕಲಿತವರ ಕಡೆಗಣ್ಣಿನಿಂದ ನೋಡಲ್ಪಟ್ಟು ಬೆಳೆಯದೇ ಉಳಿದ ಯಕ್ಷಗಾನಕ್ಕೆ ಸಂವಾದಿಯಾಗಿ ಬೆಳೆದು ಬಂದ ಜಾನಪದ ರಂಗ ಪ್ರಕಾರ ಬಯಲಾಟ "ಗಿರಿಜಾ ಕಲ್ಯಾಣ". ಈ ತಂಡದ ಒಂದು ವಿನೂತನ ಪ್ರಯೋಗ, ಹಲವು ದೃಷ್ಟಿಗಳಿಂದ ಅದಕ್ಕೆ ಮಹತ್ವವಿದೆ. ಮಟ್ಟುಗಳಲ್ಲಿ ಹೆಜ್ಜೆಗಳಲ್ಲಿ, ಸಂಭಾಷಣಾ ಶೈಲಿಯಲ್ಲಿ, ತಂತ್ರದಲ್ಲಿ, ವೇಷಭೂಷಣಗಳಲ್ಲಿ ಮತ್ತು ಕಿರೀಟ ಭುಜ ಕೀರ್ತಿಗಳಲ್ಲಿ ಸುಧಾರಣೆ ಈ ಪ್ರಯೋಗದ ಮಹತ್ವ ಅಂಶ ಜಾನಪದ ಕ್ಷೇತ್ರದಲ್ಲಿ ರಂಗವಲಯದಲ್ಲಿ ಪರಿಚಿತರಾದ ಮಲಶೆಟ್ಟಿಯವರು ಇದರ ನಿರ್ದೇಶಕರು.

ಹತ್ತು ತಾಸುಗಳವರೆಗೆ ಬೆಳೆದು ಬೆಳತನಕ ಆಡಲ್ಪಡುವ ದೊಡ್ಡಾಟವನ್ನು ಅದರ ಎಲ್ಲಾ ಸೊಗಡನ್ನು ಉಳಿಸಿಕೊಂಡು ಎರಡು ಗಂಟೆಗೆ ಇಳಿಸಿಕೊಂಡು ಮಲಶೆಟ್ಟಿಯವರು ಭಾಷೆಯನ್ನು ತಿಳಿಗೊಳಿಸಿ ಭಾವ ಪ್ರಧಾನ ಅಂಶಗಳನ್ನು ಒತ್ತಿ ಹೇಳಿ ಹೇಳಬೇಕಾದದ್ದನ್ನು ನೇರವಾಗಿ ಹೇಳುವತ್ತ ಸಂಯೋಜಿಸಿದ್ದಾರೆ. ಹರಿಹರ ಕವಿಯ ಗಿರಿಜಾ ಕಲ್ಯಾಣದ, 'ರತಿವಿಲಾಸ' ಹಾಗೂ ಶಿವನು ಪಾರ್ವತಿಯನ್ನು ಮೆಚ್ಚಿಕೊಳ್ಳುವ ಸನ್ನಿವೇಶಗಳೇ ಈ ಬಯಲಾಟದ ಮೂಲ ಕಥಾ ವಸ್ತು. ಹಲವಾರು ಪದ್ಯಗಳನ್ನು ಮೂಲದಿಂದ ಆಯ್ದುಕೊಂಡು ಮೂಲಧಾಟಿಗಳನ್ನು ಸ್ವಲ್ಪ ಮಾರ್ಪಾಡು ಮಾಡಿಕೊಂಡು ಅಗತ್ಯವೆನಿಸಿದ ಕಡೆ ಹೊಸ ಪದ್ಯಗಳನ್ನು ಬರೆದರು.

ತಾವೇ ಸೂತ್ರಧಾರರಾಗಿ ಆಟವನ್ನು ನಡೆಸಿಕೊಡುವ ಬಸವರಾಜ ಮಲಶೆಟ್ಟಿಯವರ ಈ ಪ್ರಯತ್ನ ರಂಗಭೂಮಿಯ ಒಂದು ಹೊಸ ಪ್ರಯೋಗವಾಗಿದೆ."[೩೯]

ಹೀಗೆ ಈ ಕಲಾ ತಂಡದಲ್ಲಿ ಪೌರಾಣಿಕ ವಸ್ತು ಒಳಗೊಂಡಿರುವ ನಾಟಕಗಳನ್ನು ಆಯ್ಕೆ ಮಾಡಿಕೊಂಡಿರುವ ಬಸವರಾಜ ಮಲಶೆಟ್ಟಿಯವರು ರಂಗಭೂಮಿಯ ಕಲಾ ಪ್ರೌಢಿಮೆಗೆ ಹೆಸರಾಗಿ, ಸನ್ನಿವೇಶಕ್ಕೆ ತಕ್ಕಂತಹ ರಂಗಗೀತೆಗಳನ್ನು ಪದ್ಯಗಳ ಮೂಲಕ ಮಾರ್ಪಡಿಸಿರುವುದು ಕಾಣುತ್ತೇವೆ. ಒಟ್ಟಾರೆಯಾಗಿ ಈ ಕಲಾ ತಂಡ ನಾಟಕಗಳಲ್ಲಿಯೂ ಕೂಡ ರಂಗಗೀತೆಗಳನ್ನು ನಿರೂಪಿಸುವಲ್ಲಿ ಯಶಸ್ವಿಯಾಗಿದೆ.

೭. "ರಂಗಭಾರತಿ" ಹೂವಿನಹಡಗಲಿ

ಸಾಂಸ್ಕೃತಿಕ ಕಾಳಜಿಯ ವ್ಯಕ್ತಿ ಹಾಗೂ ಕ್ರಿಯಾಶೀಲರಾದ ಎಂ.ಪಿ.ಪ್ರಕಾಶರ ನೇತೃತ್ವದಲ್ಲಿ ೧೯೬೪ರಲ್ಲಿ "ರಂಗಭಾರತಿ" ಎಂಬ ನಾಟಕ ಮಂಡಳಿಯು ಹಡಗಲಿಯಲ್ಲಿ ಜನ್ಮ ತಾಳಿತು. ರಂಗಭಾರತಿಯು ಸುಮಾರು ೪೪-೪೫ ವರ್ಷಗಳ ಇತಿಹಾಸವನ್ನು ಹೊಂದಿದ್ದು, ರಂಗಾಭಿನಯ ಆಧುನಿಕ ಬೆಳವಣಿಗೆಯ ಬಗೆಗೆ ಸಾಕಷ್ಟು ತಿಳುವಳಿಕೆ ಹಾಗೂ ಸಮಾಜವಾದದ ಪ್ರಖರವಾದ ವೈಚಾರಿಕತೆಗಳನ್ನು ಮೂಡಿಸುತ್ತಾ ಬಂದ ಹವ್ಯಾಸ ನಾಟಕ ಮಿತ್ರರ ಸಮೂಹ ವೇದಿಕೆ. ಕೇವಲ ಕಂಪನಿ ಸ್ವರೂಪದ ಹವ್ಯಾಸಿ ನಾಟಕಗಳು ಎಂ.ಪಿ. ಪ್ರಕಾಶರ ನಿರ್ದೇಶನದೊಂದಿಗೆ ವೈಚಾರಿಕ ಸ್ಪಷ್ಟನೆಯನ್ನು ಹಾಗೂ ಕಲಾತ್ಮಕ ಅಭಿವ್ಯಕ್ತಿಯನ್ನು ಪಡೆದವು. ಕೆಲವೇ ದಶಕಗಳ ಹಿಂದೆ ಕೇವಲ ಹಡಗಲಿ ಮತ್ತು ಹತ್ತಿರ ಜಿಲ್ಲೆಯ ಒಳಗಿನ ತಾಲ್ಲೂಕುಗಳಿಗಷ್ಟೇ ಸೀಮಿತವಾಗಿದ್ದು ಹೂವಿನ ಹಡಗಲಿಯ ನಾಟಕಗಳು ರಾಜ್ಯ ಮಟ್ಟದಲ್ಲಿಯೇ ಮನ್ನಣೆಯನ್ನು ಗಳಿಸಿದ್ದು ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಹೆಸರಾಗಿವೆ. ರಂಗಭೂಮಿಯ ಬಹುಮುಖಿ ಬೆಳವಣಿಗೆಯಲ್ಲಿ ಕಾಳಜಿಯನ್ನು ಹೊಂದಿದ್ದ ರಂಗಭೂಮಿ ಕೇವಲ ತಮ್ಮ ತಂಡದ ಮೂಲಕ ನಾಟಕಗಳನ್ನು ಪ್ರದರ್ಶಿಸುವುದಷ್ಟೇ ಅಲ್ಲದೇ ನಾಯಕ ಸ್ಪರ್ಧೆಯನ್ನು ನಡೆಸುವ ಮೂಲಕ ಒಂದೇ ವೇದಿಕೆಯಲ್ಲಿ ಹಲವು ನಾಟಕಗಳನ್ನು ಪ್ರದರ್ಶಿಸಲಾಗಿದೆ.

"ಬಳ್ಳಾರಿ ಜಿಲ್ಲೆಯ ರಂಗಭೂಮಿಯ ಇತಿಹಾಸದಲ್ಲಿ ಹಡಗಲಿಯ ಯೋಗ್ಯ ನಾಟಕವೆಂದರೆ "ಬಾಳೊಂದು ನಂದನ" ನಂತರದ ದಿನಗಳಲ್ಲಿ "ರಂಗಭಾರತಿ" ಹಂಸ ರೂಪವನ್ನು ಪಡೆಯಿತು. ಎಂ.ಪಿ.ಪ್ರಕಾಶರ ನಿರ್ದೇಶನದ "ಸಂಗ್ಯಾಬಾಳ್ಯಾ" ರಂಗಭೂಮಿಯ ನಾಟಕಗಳ ಪೈಕಿ ಉತ್ತಮವಾಗಿದ್ದು ೧೯೮೧ರಿಂದ ೧೯೯೯ರ ವರೆಗೆ ಸು. ೧೯ ವರ್ಷಗಳ ಕಾಲದಿಂದ ಈ ನಾಟಕವನ್ನು ರಂಗಭಾರತಿ ತಂಡ ಪ್ರದರ್ಶಿಸುತ್ತಲೇ ಬಂದಿದೆ. ರಾಷ್ಟ್ರೀಯ ಮಟ್ಟದ ಖ್ಯಾತಿಯನ್ನು ಪಡೆದ 'ಶೀಲಾವತಿ' ಮತ್ತು ಬಂಗಾಳಿ ಭಾಷೆಯಿಂದ ಅನುವಾದಗೊಂಡು ಬಂದ "ಸೂರ್ಯ ಶಿಕಾರಿ" ಎಂಬ ನಾಟಕವು ಅದ್ಭುತವಾದ ಪ್ರದರ್ಶನವನ್ನೇ ಕಂಡಿತು. ಆ ನಾಟಕವು ರಂಗಪ್ರಯೋಗದಲ್ಲಿ ಪ್ರಭಾವಕಾರಿಯಾಗಿದ್ದು, ರಂಗ

[illegible]

ಸಜ್ಜಿಕೆಯು ಪುರಾಣ ಕಾಲವನ್ನು ನೆನೆಪಿಸಿದರೆ ಧ್ವನಿ ಬೆಳಕು, ನಿರ್ದೇಶನ ಅತ್ಯಂತ ಪರಿಣಾಮಕಾರಿಯಾಗಿ ಮೂಡಿ ಬಂದು ನಮ್ಮನ್ನು ಗತಕಾಲಕ್ಕೆ ಕೊಂಡೊಯ್ಯುವಲ್ಲಿ ಯಶಸ್ವಿಯಾಗುತ್ತದೆ.

೧೯೯೩ರಲ್ಲಿ 'ಅಗ್ನಿ ಮತ್ತು ಮಳೆ' ನಾಟಕದ ಯಶಸ್ಸಿನ ನಂತರದಲ್ಲಿ ಈ ತಂಡ ಗಿರೀಶ್ ಕಾರ್ನಾಡ್‌ರ 'ನಾಗಮಂಡಲ' ಎಂಬ ನಾಟಕವನ್ನು ಹೊಸ ಸವಾಲಿನಂತೆ ಸ್ವೀಕರಿಸಿತು. ಮೊಟ್ಟಮೊದಲ ಬಾರಿಗೆ ಈ ನಾಟಕವು ಬೆಂಗಳೂರು ದೂರದರ್ಶನ ಕೇಂದ್ರವು ಈ ನಾಟಕವನ್ನು ಇಡಿಯಾಗಿ ಚಿತ್ರೀಕರಿಸಿಕೊಂಡು ಎರಡು ಕಂತುಗಳಲ್ಲಿ ಎರಡೆರಡು ಬಾರಿ ಪ್ರಸಾರಗೊಳಿಸಿತು. ಈ ಮೂಲಕ ರಂಗಭೂಮಿಯ ಮೇಲಷ್ಟೇ ಉಳಿದಿದ್ದ ರಂಗಭಾರತಿ ತನ್ನನ್ನು ಕಿರುತೆರೆಯ ಮೇಲೆಯೂ ಅನನ್ಯತೆಯನ್ನು ಪಡೆದುಕೊಂಡಿತು.

ವೃತ್ತಿ ರಂಗಭೂಮಿ ನಾಟಕಗಳ ಮೂಲಕ ಕೇವಲ ಸಾಂಪ್ರದಾಯಿಕ ಬದುಕಿನ ಸ್ಥಿತಿಯಲ್ಲಿದ್ದ ಜನತೆಗೆ ಹೊಸ ಕಾಲದ ಸಾಮಾಜಿಕ ಸಮಸ್ಯೆಗಳ ಸೃಜನಾತ್ಮಕ ಸಂವೇದನೆಗಳು, ಆತ್ಮಾವಲೋಕನ ಮಾಡಿಕೊಳ್ಳುವ ಕಥಾವಸ್ತು ವಿಷಯದ ನಾಟಕಗಳ ಪ್ರದರ್ಶನದ ಹೊಸ ಪರಂಪರೆಯನ್ನು ಹೂವಿನ ಹಡಗಲಿಯ ರಂಗಭಾರತಿ ಹುಟ್ಟು ಹಾಕಿತು. ಈ ಹಿನ್ನಲೆಯಿಂದಲೇ ಸಂಪ್ರದಾಯಸ್ಥ ಮನಸ್ಸುಗಳು ಕುತೂಹಲಭರಿತವಾದವು. ನಾಟಕ ನೋಡುವಲ್ಲಿ ಅದನ್ನು ಅರ್ಥೈಸಿಕೊಳ್ಳುವಲ್ಲಿ ಹೊಸ ದೃಷ್ಟಿಕೋನ ಬೆಳೆಯಿತು. ಇದೊಂದು ಈ ಭಾಗದಲ್ಲಿ ನಡೆದ ಸಂಕ್ರಮಣದ ಸ್ಥಿತಿ ಎಂದು ಪರಿಗಣಿಸಬೇಕು.

"ಆಷಾಡದ ಒಂದು ದಿನ,' 'ಯಯಾತಿ,' 'ಹಕ್ಕಿ ಹಾರುತಿದೆ ನೋಡಿದಿರಾ', 'ಬಾಕಿ ಇತಿಹಾಸ' 'ದೊಡ್ಡಪ್ಪ,' 'ಅಂಧಯುಗ,' 'ಜೋಕುಮಾರಸ್ವಾಮಿ,' 'ಲಕ್ಷಾಪತಿರಾಜಕತೆ,' 'ಸಂಗ್ಯಾಬಾಳ್ಯಾ' ಮೊದಲಾದ ನಾಟಕಗಳನ್ನು ರಂಗಭಾರತಿ ಪ್ರೇಕ್ಷಕರಿಗೆ ನೀಡಿದೆ. ಹೊಸ ರೀತಿಯ ಜನಮೆಚ್ಚಿಗೆ ಪಡೆಯುತ್ತ ಹೊಸನಟರನ್ನು ರಂಗಭೂಮಿಗೆ ಪರಿಚಯಿಸುತ್ತಿರುವುದು ಈ ತಂಡದ ಅಮೋಘವಾದ ಕೊಡುಗೆಯಾಗಿದೆ."[೧೦] 'ರಂಗಭಾರತಿ'ಯು ಉತ್ತಂಗಿ ಹಾಗೂ ಹಡಗಲಿಯ ಸುತ್ತ-ಮುತ್ತಲಿರುವ ಗ್ರಾಮೀಣ ಪ್ರದೇಶಗಳಲ್ಲಿ ಪೌರಾಣಿಕ ನಾಟಕಗಳನ್ನು ಹಾಡುತ್ತಿದ್ದರೂ ಪೌರಾಣಿಕ ನಾಟಕಗಳ ಕಥಾವಸ್ತುಗಳನ್ನೊಳಗೊಂಡ ಕಥೆಗಳಿದ್ದರೂ ಈ ವೇದಿಕೆಯು ಅಂತಹ ನಾಟಕಗಳನ್ನು ಆಡದೇ ಇರುವುದು ವಿಪರ್ಯಾಸದ ಸಂಗತಿಯಾಗಿದೆ.

ಒಟ್ಟಿನಲ್ಲಿ ಬಳ್ಳಾರಿ ಜಿಲ್ಲೆಯ ರಂಗಭೂಮಿ ನಿರಂತರ ಚಲನಶೀಲತೆಯಿಂದ ಕೂಡಿದ್ದು, ಇಲ್ಲಿ ಕಲಾ ಪ್ರತಿಭೆಗಳು ನೈಜವಾಗಿದ್ದು, ಅರಳಲು ಉತ್ತಮ ಪರಿಸರದ ಅವಶ್ಯಕತೆ ಹಿಂದಿಗಿಂತ ಇಂದು ಹೆಚ್ಚಾಗಿದೆ. ಇದಕ್ಕಿಂತಲೂ ಹೆಚ್ಚಾಗಿ ಜಿಲ್ಲೆಯಾದ್ಯಂತ ಅಶಿಕ್ಷಿತ ಜನರು ಕಲಾಭಿರುಚಿ ಉಳ್ಳವರಾಗಿದ್ದು ಹಬ್ಬಹರಿದಿನಗಳಲ್ಲಿ ಹವ್ಯಾಸಿ ನಟರಾಗಿ, ನಿರ್ದೇಶಕರಾಗಿ, ಸಂಗೀತಗಾರರಾಗಿ ನಾಟಕ ಸಾಹಿತ್ಯ ಹಾಗೂ ರಂಗಭೂಮಿ ಬೆಳವಣಿಗೆಗೆ ಕಾರಣರಾಗಿದ್ದಾರೆ. ಅವರೆಲ್ಲರ ವ್ಯಕ್ತಿಗತ ಅಧ್ಯಯನ ಮತ್ತು ಅವರಿಗೆ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ರಂಗಾಸಕ್ತರು, ಸರಕಾರ ಸೂಕ್ತ ಯೋಜನೆಗಳನ್ನು ರೂಪಿಸಿ ಪ್ರೋತ್ಸಾಹಿಸಬೇಕಾಗಿದೆ.

೨.೩ ಪ್ರಮುಖ ರಂಗಕವಿಗಳು

ರಂಗಗೀತೆಗಳು ಕವಿಯ ಸ್ವತಂತ್ರ ಭಾವನೆಗಳನ್ನು ವ್ಯಕ್ತ ಮಾಡಲು ಹುಟ್ಟುವುದಿಲ್ಲ ಊದಲಿಗೆ ನಾಟಕದ ಕಥೆಯ ಆಯಾ ಸನ್ನಿವೇಶಕ್ಕೆ ತಕ್ಕ ಹಾಗೆ ಪ್ರಾಸಂಗಿಕವಾಗಿ ಹುಟ್ಟುತ್ತವೆ. ಪೌರಾಣಿಕ ಹವ್ಯಾಸಿ ರಂಗಭೂಮಿಯಲ್ಲಿ ಹಾಡುಗಳು ಪ್ರಮುಖವಾಗಿ ರಚಿಸಿದವರು ಯಾರು ಎನ್ನುವುದು ಅಪ್ರಮುಖ. ಹೀಗಾಗಿ ರಂಗಕವಿಗಳು ಎಷ್ಟೋ ಹಾಡುಗಳು ಇನ್ನಾರೋ ತಾವು ರಚಿಸಿದ ಹಾಡುಗಳು ಎಂದು ತಿಳಿದದ್ದೂ ಉಂಟು. ಅಂತಹ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲೆಯ ಅನೇಕ ನಟರು, ಗಾಯಕರು ಮಾಸ್ತಾರರ ಸಹಾಯದಿಂದ ಪೌರಾಣಿಕ ಹವ್ಯಾಸಿ ರಂಗಭೂಮಿಯ ನಾಟಕಗಳ ರಂಗಗೀತೆಗಳನ್ನು ತಿಳಿಯಲು ಸಹಾಯಕವಾಗಿವೆ.

ಹಾಗೆಯೇ ವೈಶಿಷ್ಟ್ಯದ ದೃಷ್ಟಿಯಿಂದ ಹಾಗೂ ಲಭ್ಯವಾದ ಮಾಹಿತಿಗನ್ವಯ ಪ್ರಮುಖ ರಂಗಕವಿಗಳ ಬಗ್ಗೆ ವಿಶ್ಲೇಷಿಸಲಾಗಿದೆ. ಕೆಲ ಹಿರಿಯ ತಲೆಮಾರಿನ ಕವಿಗಳ ಜೊತೆಗೆ ಕಿರಿಯ ರಂಗಕವಿಗಳು ಸೇರಿ ಈ ಜಿಲ್ಲೆಯ ಪೌರಾಣಿಕ ಹವ್ಯಾಸಿ ರಂಗಭೂಮಿಯ ನಾಟಕಗಳ ರಂಗಗೀತೆಗಳನ್ನು ಸಮೃದ್ಧಗೊಳಿಸಿದ್ದಾರೆ. ಸ್ವಂತಿಕೆ, ಸತ್ವ, ಭಾಷೆಯ ವಿಭಿನ್ನತೆಯಲ್ಲಿ ಕೆಲವರು ವಿಶೇಷವಾಗಿ ಕಂಡರೆ ಇನ್ನು ಕೆಲವರು ಪ್ರೌಢ ಆಲೋಚನೆಗಳ ಮೂಲಕ ಭರವಸೆಯನ್ನು ಮೂಡಿಸುತ್ತಾರೆ. ಅಂತಹ ಪ್ರಮುಖ ರಂಗ ಕವಿಗಳನ್ನು ಪರಿಚಯಿಸುವುದು ಮತ್ತು ವಿಶ್ಲೇಷಿಸುವುದು ಮಹತ್ವದ ಕಾರ್ಯವಾಗಿದೆ. ಹಾಗಾಗಿ ಅಧ್ಯಯನದ ದೃಷ್ಟಿಯಿಂದ ಕೆಳಕಂಡ ಮೂರು ಜನ ರಂಗಕವಿಗಳನ್ನು ಅನುಲಕ್ಷಿಸಿ ಇಲ್ಲಿ ವಿಶ್ಲೇಷಿಸಲಾಗಿದೆ.

೧. ದಿವಂಗತ ಆರ್. ಭರಮಲಿಂಗಪ್ಪ ಮಾಸ್ತರರು

೨. ಮ.ಬ.ಸೋಮಣ್ಣ

೩. ಡಿ.ಎಂ. ತೋಟಯ್ಯಸ್ವಾಮಿ.

೧. ದಿ. ಆರ್. ಭರಮಲಿಂಗಪ್ಪ ಮಾಸ್ತರರು

ಪೀಠಿಕೆ

ಬಳ್ಳಾರಿ ಬಯಲಾಟಗಳಿಗೆ ತುಂಬಾ ಪ್ರಸಿದ್ಧವಾದ ಜಿಲ್ಲೆ. ಹಾಗೇ ರಂಗಭೂಮಿಗೂ ಬಳ್ಳಾರಿ ಜಿಲ್ಲೆಯ ಕೊಡುಗೆ ಅಪಾರ. ರಾಘುವರಂತಹ ಹೆಸರಾಂತ ನಟರನ್ನೂ, ನಾಟಕಕಾರರನ್ನೂ ಈ ಜಿಲ್ಲೆಬೆಳೆಸಿ ಪೋಷಿಸಿದೆ. ಹಾಗೆಯೇ ಇದೇ ಜಿಲ್ಲೆಯಲ್ಲಿ ಬೆಳೆದ ಭರಮಲಿಂಗಪ್ಪ ಮಾಸ್ತರರು, ಗಿಡ್ಡಪ್ಪ ಹಾಗೂ ಕಾಳಮ್ಮ ನವರ ಮಗನಾಗಿ ೧೯೩೫ರಲ್ಲಿ ರಾಮಸಾಗರದಲ್ಲಿ ಹುಟ್ಟಿ ಬೆಳೆದರು. ಇವರು ವೃತ್ತಿಯಿಂದ ಶಿಕ್ಷಕರಾಗಿದ್ದರು; ಪ್ರವೃತ್ತಿಯಿಂದ ನಾಟಕಕಾರರಾದರು. ಇವರಿಗೆ ತಿಳಿಯದಂತೆಯೇ ರಂಗಭೂಮಿಯ ಪ್ರಭಾವ ಇವರನ್ನು ಆವರಿಸಿತು. ಬಹುಶಃ ಇದಕ್ಕೆ ಮುಖ್ಯ ಕಾರಣ ಇವರು ಬೆಳೆದ ಪರಿಸರ. ಬಳ್ಳಾರಿ ಜಿಲ್ಲೆಯ ರಾಮಸಾಗರ ಎಂದರೆ ಬಯಲಾಟಗಳ ಕಣಜವೆಂದೇ ಹೇಳಬಹುದು. ಇಲ್ಲಿಯ ಪ್ರತಿಯೊಂದು ಮಗುವೂ ವೇಷಕಟ್ಟಿ ಕುಣಿಯುವುದುನ್ನು ಇಂದಿಗೂ ಕಾಣಬಹುದು.

ಭರಮಲಿಂಗಪ್ಪ ಮಾಸ್ತರರು ಕೇವಲ ನಾಟಕಕಾರರಾಗಿರಲಿಲ್ಲ ನಟರು, ರಂಗನಿರ್ದೇಶಕರು, ರಂಗಗೀತಾ ರಚನಾಕಾರರೂ ಆಗಿದ್ದರು. ಬಳ್ಳಾರಿ ಜಿಲ್ಲೆಯ ಪ್ರಮುಖ ರಂಗಕವಿಗಳಲ್ಲಿ ಶ್ರೇಷ್ಠ ರಂಗಗೀತೆಗಳ ರಚನಾಕಾರರಲ್ಲಿ ಒಬ್ಬರಾಗಿದ್ದಾರೆ.

"ಮೊದಲಿಗೆ ನಾಟಕ ಬರೆಯಲು ಪ್ರಾರಂಭಿಸಿದ ಮಾಸ್ತರರು ೧೯೫೫ರ ಸುಮಾರಿಗೆ ನಾಡಪ್ರೇಮ ವ್ಯಕ್ತಪಡಿಸುವ ಗೀತೆಯೊಂದನ್ನು ರಚಿಸಿದುದಾಗಿ ತಿಳಿದುಬರುತ್ತದೆ. ಇದು ಪತ್ರಿಕೆಯೊಂದರಲ್ಲಿ ಪ್ರಕಟಗೊಂಡು ಪ್ರಸಿದ್ಧಗೊಂಡ ತರುವಾಯ, ಸ್ನೇಹಿತರು ತಾವು ಪ್ರಯೋಗಿಸುವ ಇವರ ನಾಟಕಗಳಿಗೆ ಮಾಸ್ತರರೇ ರಂಗಗೀತೆಗಳನ್ನು ಬರೆಯಬೇಕೆಂದು ದುಂಬಾಲು ಬಿದ್ದರು. ಸ್ನೇಹಿತರ ಒತ್ತಾಸೆ ಮೇರೆಗೆ ಮಾಸ್ತರರು ರಂಗಗೀತೆಗಳನ್ನು ಬರೆಯಲು ಪ್ರಾರಂಭಿಸಿದರು. ತರುವಾಯ ಇವರ ರಂಗಗೀತೆಗಳು ಹೆಚ್ಚು ಪ್ರಚಾರ ಪಡೆಯಹತ್ತಿದವು. ಇದರಿಂದಾಗಿ ಉತ್ತರ ಕರ್ನಾಟಕದ ಬಹುತೇಕ ನಾಟಕ ಕಂಪನಿಗಳು ಹಾಗೂ ರಂಗನಿರ್ದೇಶಕರು ಇವರಿಂದ ರಂಗಗೀತೆಗಳನ್ನು ಬರೆಸಿಕೊಂಡು ಬಳಕೆ ಮಾಡತೊಡಗಿದರು. ಅದರಲ್ಲೂ ಗ್ರಾಮೀಣ ರಂಗಭೂಮಿ ನಿರ್ದೇಶಕರಾಗಿ ಕಾರ್ಯನಿರ್ವಹಿಸುವ ಹಾರ್ಮೋನಿಯಂ ಮಾಸ್ತರುಗಳು ಭರಮಲಿಂಗಪ್ಪ ಮಾಸ್ತರರಿಂದ ಹೆಚ್ಚು ರಂಗಗೀತೆಗಳನ್ನು ಬರೆಸಿಕೊಂಡದ್ದು ತಿಳಿದುಬರುತ್ತದೆ. ಇವರಲ್ಲಿ ಮುಖ್ಯವಾಗಿ ಇವರ ಊರಿನ ಪಕ್ಕದ ಗ್ರಾಮದವರಾದ ಜಿ.ಶಿವಲಿಂಗಪ್ಪ, ಕೆ. ವಾದಿರಾಜರು, ಅರಳಿಗನೂರು ವೀರಭದ್ರಯ್ಯ ಮುಂತಾದವರು ಇವರಿಂದ ರಂಗಗೀತೆಗಳನ್ನು ಬರೆಸಿಕೊಂಡಿದ್ದು ತಿಳಿದುಬರುತ್ತದೆ. ಅದರಲ್ಲೂ ಶಿವಲಿಂಗಪ್ಪ ಮಾಸ್ತಾರರು ಮತ್ತು ವಾದಿರಾಜರು ಭರಮಲಿಂಗಪ್ಪ ಮಾಸ್ತರರ ರಂಗಗೀತೆಗಳಿಗೆ ಉತ್ತಮ ರೀತಿಯಲ್ಲಿ ರಾಗ ಸಂಯೋಜನೆ ಮಾಡಿ ರಂಗಗೀತೆಗಳ ಕೋಮಲತೆ ಹೆಚ್ಚಿಸಿದರು."[೪೧]

ಭರಮಲಿಂಗಪ್ಪ ಮಾಸ್ತರರು ರಚಿಸಿದ ಪ್ರಮುಖವಾಗಿ ರಂಗಭೂಮಿಯಲ್ಲಿ ಸನ್ನಿವೇಶಕ್ಕೆ ತಕ್ಕಂತೆ ಎಷ್ಟೋರಂಗಗೀತೆಗಳನ್ನು ರಚಿಸಿದ್ದಾರೆ. ಹಾಗಾಗಿ ಅಧ್ಯಯನದ ದೃಷ್ಟಿಯಿಂದ ಈ ಕೆಳಗಿನಂತೆ ಪ್ರಮುಖವಾಗಿ ಪೌರಾಣಿಕ ನಾಟಕಗಳ ರಂಗಗೀತೆಗಳನ್ನು ನಿರೂಪಿಸಲಾಗಿದೆ.

ನಾಂದಿ ಗೀತೆ

ರಾಗ: ಯಮನ ಕಲ್ಯಾಣ   ತಾಳ: ದಾದರ

"ಓಂ ನಮೋ ಕಲ್ಲುಕಾಧೀಶಾ
ಓಂ ನಮೋ ಮಲ್ಲಿನಾಥೇಶಾ ||ಪ||

ಗಿರಿಜೆಯರಸ ಸುರನಿಕರ ಸರಸ
ಶಿವ ಶಂಕರಾ ಶಿವ ಶಂಕರಾ
ಪರಮಪುರುಷ ವಾ ಭಯಂಕರ
ಅಭಯಂಕರಾ ಅಭಯಂಕರಾ
ಲಲಿತನಾಟ್ಯಗುರು ಶ್ರೀ ಕರಾ
ನಟನ ಲೋಲ ನಟ ಶೇಖರಾ
ಕರುಣೆ ಕಾಯೋ ಶಿವ ಶುಭಕರಾ ||೧||

ಪಂಪ ರನ್ನ ಕವಿ ಚನ್ನ ಜನ್ನ
ಲಕ್ಷ್ಮೀಶ್ವರಾ ಲಕ್ಷ್ಮೀಶ್ವರಾ
ಪೆಂಪಿನರಸ ಕವಿ ರಾಘವಾಂಕ
ಮೇಣ್ ಹರಿಹರಾ ಮೇಣ್ ಹರಿಹರಾ
ಮೆರೆದ ನಾಡ ವಿಶ್ವೇಶ್ವರಾ
ಕಲೆಯ ಸ್ಫೂರ್ತಿ ಕರುಣಾಕರಾ
ಕರುಣೆ ಕಾಯೋ ನೀ ಶುಭಕರಾ"[೪೨] ||೨||

ಪ್ರೀತಿ, ಪ್ರೇಮ, ಪ್ರಣಯದ ಗೀತೆ

ರಾಗ: ರಾಗೇಶ್ರೀ   ತಾಳ: ಕೇರವ

ಹೆಣ್ಣು: "ಸರಸ ಸಲ್ಲಾಪ ಮನದಾಲಾಪನಾ
ಶೃಂಗಾರದ ಮಧುರಗಾನಾ ||ಪ||

ಮನಕೋಕಿಲೆ ಹಾಡುತಿದೆ ತಾನಾ
ಪ್ರೀತಿಸುವೆ ಮನದನ್ನಾ ಮೋಹನಾ
ಮನದಿನಿಯಾ ನಿನ್ನಾ

ಗಂ+ಹೆ: ಕೂಡಿ ಪಾಡುವಾ ಪ್ರಣಯ ಗೀತೆ
ಗಂಡು: ಮಧುರ ಪ್ರಣಯದ ಮೂರ್ತಿ ದೇವತಾ
ಪ್ರೇಮಸಾಗರ ರೂಪ ಚಂದಿರಾ
ಪ್ರೀತಿಸಾರ ಶೃಂಗಾರ ಮಧುರಾ
ಗಂ+ಹೆ: ಪ್ರೇಮಗಾನವಾ ಸದಾ ಪಾಡುವ"[೪೩]

ಶೃಂಗಾರದ ಗೀತೆ

ರಾಗ: ನಂದ **ತಾಳ: ತ್ರಿತಾಲ**

ಮಿಡಿಯೇ ಮಾನಸ ವೀಣಾ
ಸದಯ ಹೃದಯ ಮಿಲನ ಪಾವನಾ
ಪ್ರೇಮಗಾನ, ಮಧುರ ವಿತಾನ
ಶೃಂಗಾರ ಪೂರ್ಣ ಸಮ್ಮೋದ ಮಿಲನ
ಬಾರೊ ಜಾಣ ಭೋಗದ ತಾಣ
ಸುಂದರ ಹೆಣ್ಣಿನ ಯೌವನ
ಇಂದು ನಾಳೆ ಎನಲೇಕಿನ್ನು
ಸರಿಯುತಿಹುದು ಚಣ ಚಣ ರಸದಿನ
ಬಿಡು ದುಮ್ಮಾನ, ಸುಖ ಸಂಧಾನ
ಚಲುವೆಯ ಒಲುವಿನ ಸವಿಪಾನ”[೪೪]

ಶೋಕ ಗೀತೆ

ರಾಗ: ಸಾರಂಗ **ತಾಳ: ಕೇರವ**

“ದೇವನಿಲ್ಲದ ಪಾಳು ದೇಗುಲ
ಬಾಳೆ ಭೀಕರ ಮೃಗಜಲ ||
ವಿಧವೆಯಾ ಮನ ಮಥಿಸಿ ಮೂಡಿದ
ವ್ಯಥೆಯ ಕಾವಳ ಬಾನ್ನೆಲ ||
ವಿಧಿಯು ವೀಣೆಯ ನುಡಿಸುತಿಹನು
ಶೋಕಗೀತೆಯ ಸಂಕುಲಾ
ಅದರ ತಂತಿಯ ಮಧುರಾಕಂಪಕೆ
ಬೆದರಿ ನಿಂತಿದೆ ಭೂತಲಾ
ಹಗೆಯ ಬೆಂಕಿಯ ಹೊಗೆಯು ತುಂಬಿದೆ
ಅಂಧಃಕಾರವು ಈ ನೆಲಾ
ನೆಗೆಯು ಮಾಸಿದೆ ಸೊಗವು ರೋಸಿದೆ
ಜಗವೆ ಬವಣೆಯ ಬಾನೆಲಾ”[೪೫]||

ರಂಗಗೀತೆಗಳ ರಚನಾಕ್ರಮ:

"ಮಾಸ್ತರರ ರಂಗಗೀತೆಗಳನ್ನು ಗಮನಿಸಿದಾಗ, ದುಃಖ, ಕರುಣ, ವೀರ, ಹಾಸ್ಯ ಮುಂತಾಗಿ ಎಲ್ಲಾ ಬಗೆಯ ರಂಗಗೀತೆಗಳನ್ನು ಬರೆದಿದ್ದಾರೆ. ಮುಖ್ಯವಾಗಿ ಇವರು ಬರೆದ ರಂಗಗೀತೆಗಳನ್ನು ಎರಡು ಭಾಗಗಳಾಗಿ ನೋಡಬಹುದು. ಒಂದು, ಸಂಸ್ಕೃತ ಪದಗಳನ್ನು ಬಳಸಿ ರಚಿಸಿದ ರಂಗಗೀತೆಗಳು ಎರಡನೆಯದಾಗಿ, ಅತೀ ಸರಳ ರೀತಿಯ ಕನ್ನಡ ಪದಗಳನ್ನು ಬಳಸಿ ರಚಿಸಿದ ರಂಗಗೀತೆಗಳು.

ಬಹುಶಃ ಇದಕ್ಕೆ ಕುವೆಂಪು, ಬೇಂದ್ರೆಯವರ ಪ್ರಭಾವ ಪರೋಕ್ಷವಾಗಿ ಮಾಸ್ತರರ ಮೇಲಾಗಿರಬೇಕು ಎನಿಸುತ್ತದೆ. ಆದರೆ ಮಾಸ್ತರರು ಬೇಂದ್ರೆ, ಕುವೆಂಪುರವರನ್ನು ಅನುಸರಿಸಿ ರಂಗಗೀತೆಗಳನ್ನು ರಚಿಸಿದರು ಎನ್ನುವಂತಿಲ್ಲ.

ಮಾಸ್ತರರ ರಂಗಗೀತೆಗಳನ್ನು ಕರ್ನಾಟಕದ ಹಲವಾರು ರಂಗಸಂಗೀತಗಾರರು ಸಂಯೋಜಿಸಿದಂತೆ, ಶ್ರೀಮತಿ ಸುಭದ್ರಮ್ಮ ಮನ್ಸೂರ್, ಕೆ. ನಾಗರತ್ನಮ್ಮ, ವಾದಿರಾಜರಂಥವರು ಮಾಸ್ತರರ ರಂಗಗೀತೆಗಳಿಗೆ ಧ್ವನಿ ನೀಡಿ ಹೆಚ್ಚು ಪ್ರಚಾರಗೊಳಿಸಿದರು. ಹಾಗೆಯೇ ಅಮೇಚೂರ್ ನಾಟಕಗಳಲ್ಲಿ ಪಾತ್ರ ವಹಿಸುವ ನಟಿಯರು, ಬಯಲಾಟದ ನಟಿಯರು, ಹಗಲು ವೇಷಗಾರರು, ಭಜನಾ ತಂಡಗಳು, ನಾಟಕ ಕಂಪನಿಗಳು ಇವರ ಹಾಡುಗಳ ಪ್ರಸಾರಕ್ಕೆ ಮಾಧ್ಯಮವಾಗಿವೆ.

ಭರಮಲಿಂಗಪ್ಪ ಮಾಸ್ತರ್‌ರವರು ಕೆಲವೊಂದು ಕಟ್ಟುಪಾಡುಗಳಿಗೆ ಬಿದ್ದಾಗ ತಮಗೆ ಇಷ್ಟವಿರದಿದ್ದರೂ ರಂಗಗೀತೆಗಳನ್ನು ರಚಿಸಿಕೊಡುತ್ತಿದ್ದರು. ಅದರಲ್ಲೂ ಅರಳಿಗನೂರು ವೀರಭದ್ರಯ್ಯನಂತಹ ಸಂಗೀತಗಾರರು ಹೆಚ್ಚಾಗಿ ಸಿನಿಮಾ ಮಾದರಿಯ ರಂಗಗೀತೆಗಳನ್ನೇ ಅಪೇಕ್ಷಿಸುತ್ತಿದ್ದರು ಹಾಗೂ ಸಿನಿಮಾ ಸಂಗೀತ ಮಟ್ಟುಗಳನ್ನು ಅಳಡಿಸುತ್ತಿದ್ದರು. ಹಾಗೂ ಹೀಗಾಗಿ ಇವರ ಎಷ್ಟೋ ಹಾಡುಗಳನ್ನು ಕೇಳಿದಾಗ ಯಾವುದೋ ಸಿನಿಮಾ ಹಾಡು ಕೇಳಿದ ಅನುಭವವಾಗುವುದೂ ಉಂಟು. ಬಹುಶಃ ಇದು ಮಾಸ್ತರರಿಗೂ ಇಷ್ಟವಿರದ ವಿಚಾರ. ಇಂತಹ ಕಾರಣಗಳಿಗಾಗಿಯೇ ಮಾಸ್ತರ್‌ರವರು ತಮ್ಮ ರಂಗ ಗೀತೆಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳಲಿಲ್ಲವೇನೋ ಎನ್ನುವ ಅನುಮಾನವೂ ಕಾಡುವುದುಂಟು.

ಸಾವಿರಾರು ರಂಗಗೀತೆಗಳನ್ನು ರಚಿಸಿರುವ ಭರಮಲಿಂಗಪ್ಪ ಮಾಸ್ತರವರು ಎಂದೂ ತಾವು ರಚಿಸಿದ ರಂಗಗೀತೆಗಳನ್ನು ಕಾಯ್ದಿರಿಸಿಕೊಂಡವರಲ್ಲ. ಉದಾಹರಣೆಗೆ ಕಮಲಾಪುರದ ಮೂರು ನಾಲ್ಕು ನಾಟಕಗಳಿಗಾಗಿ ಸುಮಾರು ಎಪ್ಪತ್ತರಷ್ಟು ರಂಗಗೀತೆಗಳನ್ನು ಮಾಸ್ತರರು ರಚಿಸಿದ್ದರಂತೆ. ಅದನ್ನು ಅವರ ಸ್ನೇಹಿತ ಅಕ್ಕಸಾಲಿ ನಾಗಪ್ಪನವರು ಸಂಗ್ರಹಿಸಿಟ್ಟುಕೊಂಡಿದ್ದಾಗಿ ತಿಳಿದು ಬರುತ್ತದೆ. ಆದರೆ ಮಳೆಗಾಲದ ಒಂದು ದಿನ ಹಾಡುಗಳೆಲ್ಲಾ ನೀರಿನಲ್ಲಿ ತೋಯ್ದು ಹಾಳಾದ ಕುರಿತು ಸ್ವತಃ ನಾಗಪ್ಪನವರೇ ತಿಳಿಸುತ್ತಾರೆ. ಇವರ ಎಷ್ಟೋ ರಂಗಗೀತೆಗಳು ಈ ರೀತಿಯಾಗಿ ಕಳೆದು ಹೋಗಿರುವುದೇ ಹೆಚ್ಚು."[೪೬]

ಹೀಗಾ ಹಲವು ಆಧುನಿಕ ಕವಿಗಳ ಪಡೆದು ಪೌರಾಣಿಕ, ಸಾಮಾಜಿಕ, ಐತಿಹಾಸಿಕ ನಾಟಕಗಳಲ್ಲಿ ಭಕ್ತಿ, ಪ್ರೇಮ, ದುಃಖ, ಹಾಸ್ಯದ ರಂಗಗೀತೆಗಳನ್ನು ರಚಿಸಿ ಬಳ್ಳಾರಿ ಜಿಲ್ಲೆಯ ರಂಗಕವಿಗಳಲ್ಲಿ ವಿಶಿಷ್ಟವಾದ ಕೊಡುಗೆಯನ್ನು ನೀಡಿದ್ದಾರೆ.

೨. ಮ.ಬ.ಸೋಮಣ್ಣ

ಪೀಠಿಕೆ:

ಬಳ್ಳಾರಿ ಜಿಲ್ಲೆಯ ಪ್ರಮುಖ ರಂಗಕವಿಗಳಲ್ಲಿ ಮಯಾಚಾರ್ ಬಡಿಗೇರ್ ಸೋಮಣ್ಣನವರು ಒಬ್ಬರಾಗಿದ್ದಾರೆ. ಇವರು ೦೧.೦೭.೧೯೫೨ರಲ್ಲಿ ಮರಿಯಮ್ಮನಹಳ್ಳಿ ಪಕ್ಕದಲ್ಲಿರುವ ಗರಗ ನಾಗಲಾಪುರ ಎಂಬ ಗ್ರಾಮದಲ್ಲಿ ಸಣ್ಣ ತೋಟಪ್ಪಾಚಾರ್, ಸಿದ್ದಮ್ಮ ಎಂಬ ದಂಪತಿಗಳ ಮಗನಾಗಿ ಜನಿಸಿದರು.

ಭರಮಲಿಂಗಪ್ಪ ಮಾಸ್ತಾರ ಸಮಕಾಲೀನರು ಮತ್ತು ಗೆಳೆಯರೂ ಆಗಿದ್ದರು. ಸೋಮಣ್ಣನವರು ವೃತ್ತಿಯಲ್ಲಿ ಶಿಕ್ಷಕರಾಗಿ, ಪ್ರವೃತ್ತಿಯಲ್ಲಿ ತಬಲವಾದಕರು, ನಟರು, ನಾಟಕಕಾರರು, ಅಭಿನಯ, ನಿರ್ದೇಶನ, ಪ್ರವಚನ, ಆಕಾಶವಾಣಿಯ ಕಲಾವಿದರು, ದೂರದರ್ಶನ ಕಲಾವಿದರು ಹಾಗೆಯೇ ರಂಗಗೀತೆಗಳ ರಚನಾಕಾರರು ಹೀಗೆ ಹಲವು ಮುಖಗಳಲ್ಲಿ ಪಳಗಿರುವ ಸೋಮಣ್ಣನವರು ಬಾಲ್ಯದಲ್ಲಿ ರಂಗಭೂಮಿ ಗೀಳು ಅಂಟಿಕೊಂಡಿತು. ಇವರ ತಂದೆ, ಚಿಕ್ಕಪ್ಪ, ದೊಡ್ಡಪ್ಪ ಎಲ್ಲರೂ ರಂಗಕಲಾವಿದರೇ ಬಹುಶಃ ಇದಕ್ಕೆ ಮುಖ್ಯ ಕಾರಣ ಇವರು ಬೆಳೆದ ಪರಿಸರ ಕಲಾ ಮನೆತನದ್ದೇ ಆಗಿದೆ.

ಪ್ರಾರಂಭದಲ್ಲಿ ನಾಟಕ ಬರೆಯುವುದರಲ್ಲಿ ಮತ್ತು ತಬಲ ನುಡಿಸುವುದರಲ್ಲಿ ಎತ್ತಿದ ಕೈ. ಹೀಗೆ ವೃತ್ತಿಯಲ್ಲಿ ಶಿಕ್ಷಕರಾಗಿ ೧೯೬೮ರಲ್ಲಿ ರಾಮಸಾಗಕ್ಕೆ ಸೇರಿಕೊಳ್ಳಲು ಹೋದಾಗ ರಾಮಸಾಗರದಲ್ಲಿ ಭರಮಲಿಂಗಪ್ಪ ಮಾಸ್ತರರಿಗೆ ಒಡನಾಡಿಗಳಾದರು. ಮತ್ತೊಬ್ಬ ಗೆಳೆಯ ಜೆ. ಲಕ್ಷ್ಮೀನಾರಾಯಣರವರು ಸಾಹಿತ್ಯಾಕಾಂಕ್ಷಿ ಅಷ್ಟೇ. ಇವರಿಬ್ಬರ ಒಡನಾಡಿತನ ಮುಂದೆ ಕವಿಯಾಗಲು ಕಾರಣವಾಯಿತು. ಇನ್ನುಳಿದ ಗೆಳೆಯರ ಜೊತೆಗೆ ಶಾಲೆ ಬಿಟ್ಟ ಕೂಡಲೇ ಸಾಯಂಕಾಲಕ್ಕೆ ವಾಕಿಂಗ್‌ಗೆ ಹೋಗುತ್ತಿದ್ದರಂತೆ ಆಗ ಸಾಹಿತ್ಯ ಸಮಲೋಚನೆಯಲ್ಲಿ ತೊಡಗಿ, ಇವರು ಹೇಳಿದಾಗ ಅವರು, ಅವರು ಹೇಳಿದಾಗ ಇವರು ಹೀಗೆ ಹೊಸ ಆಲೋಚನೆಯನ್ನು ಮಾಡತೊಡಗಿದರು. ಅದು ಕಥೆ, ನಾಟಕ, ಹಾಡಾಗಿರಬಹುದು. ಪ್ರತಿನಿತ್ಯದಲ್ಲಿ ಸಾಹಿತ್ಯ ಸೃಷ್ಟಿ ಪ್ರಕ್ರಿಯೆ ನಡೆಯುತ್ತಿತ್ತು. ಕೆಲವೊಂದು ಸಾರಿ ಚಾಲೆಂಜಾಗಿ ಸಮಯವಿಟ್ಟುಕೊಂಡು ಸೌಹಾರ್ದಯುತವಾದ ಸ್ಪರ್ಧಾತ್ಮಕವಾಗಿ ಜಾಲಣ್ಣ, ಸೋಮಣ್ಣ ನೀವೆಲ್ಲರೂ ಬರೆಯಿರಿ ಎಂದು ಭರಮಲಿಂಗಪ್ಪ ಮಾಸ್ತರರು ಹೇಳಿದಾಗ, ಇವರು ಬರೆದರು. ಇನ್ನಷ್ಟು ರಂಗಗೀತೆಗಳು ಬರೆಯಲು ಪುಷ್ಟಿ ತುಂಬಿದರು. ಸಾಯಂಕಾಲ ವಾಕಿಂಗ್ ಮುಗಿಸಿಕೊಂಡು ಮನೆಗೆ ಬಂದಾಗ ಮನೆಯಲ್ಲೂ ಕೂಡ ಅವಿರತವಾಗಿ ಸಾಹಿತ್ಯದ ಚಟುವಟಿಕೆ ನಡೆಯುತ್ತಿತ್ತು. ಆಗ ತಾನೆ ಕೆಲಸಕ್ಕೆ ಸೇರಿದ ಹುಡುಗ ಸೋಮಣ್ಣನವರಿಗೆ, ೧೮ರಿಂದ ೧೯ ವಯಸ್ಸಿನಲ್ಲಿ ಬರೆಯಲಿಕ್ಕೆ ಪ್ರಾರಂಭಿಸಿದರು.

ಒಮ್ಮೆ ಭರಮಲಿಂಗಪ್ಪ ಮಾಸ್ತರರಿಗೆ ಅನೇಕ ಜನರು ನಾಟಕ ಮಾಸ್ತರರು ರಂಗಗೀತೆಗಳನ್ನು ಬರೆಯಲಿಟ್ಟಿದ್ದರು. ಅವರಿಗೆ ಎರಡು ಮೂರು ಸಾರಿ ತುಂಬಾ ಬಿಡುವಿಲ್ಲದಷ್ಟು ಕೆಲಸ ಹೊತ್ತು ಕೊಂಡಾಗ ಆ ಸಂದರ್ಭದಲ್ಲಿ ಆ ಕೆಲಸ ಸೋಮಣ್ಣನವರಿಗೆ ಕೊಟ್ಟರು. ನೀನೇಕೆ ಈ ಗೀತೆಗಳನ್ನು ರಚಿಸಬಾರದು ನೀನು ಬರೆ ಎಂದರು. ಅವರು ಹಿಂದೆ ಚೂರು ಬರೆಯುತ್ತಿದ್ದಕ್ಕೆ ಅವರಿಗೇನು ಕಷ್ಟವೆನಿಸಲಿಲ್ಲ ಆಗ

ಅವರು ಅದೇ ರಂಗದಲ್ಲಿ ಮುಂದುವರೆದರು. ನಂತರ ಕಂಪ್ಲಿಗೆ ೧೯೭೦ರಲ್ಲಿ ಹೋದಾಗ ಇಂತಹದ್ದೇ ಒಂದು ಪರಸರ ಸಿಕ್ಕಿತು. ಕಂಪ್ಲಿ ವಾದಿರಾಜರು ಅದ್ಭುತ ನಾಟಕನಿರ್ದೇಶಕರು, ಸಂಗೀತವಾದಕರು ಅವರ ಪ್ರತಿ ನಾಟಕಕ್ಕೆ ಸಂಗೀತ ಸಂಯೋಜನೆ ಮಾಡುತ್ತಿದ್ದರು.

ಒಂದು ಸಾರಿ ವಾದಿರಾಜರು ಮತ್ತು ಸೋಮಣ್ಣನವರು ಹೊಸ ಹೊಸ ಗೀತೆಗಳನ್ನು ಬರೆಯಬೇಕು ಜೊತೆಗೆ ಹೊಸ ಸಂಗೀತ ರಾಗ ಆಲಾಪನೆ ಮಾಡಬೇಕೆಂದು ಪಣತೊಟ್ಟರು ಆಗ ಸೋಮಣ್ಣನವರಿಗೆ ಪ್ರೋತ್ಸಾಹಿಸಿದವರೆಂದರೆ ಸಿರಿಗೇರಿ ನಾಗನಗೌಡರು, ಮದಿರೆ ಮರಿಸ್ವಾಮಿಯವರು, ಕರೂರು ತಿಮ್ಮಪ್ಪ, ಪಟ್ಟಣಶೆಟ್ಟಿಯವರು, ಮುದ್ದಾಪುರದ ಶಿವಲಿಂಗಪ್ಪ ಮೇಷ್ಟು, ಕಂಪ್ಲಿ ವಾದಿರಾಜರು, ಡಣಾಯಕನಕೇರಿ ತೋಟಯ್ಯನವರು, ಅರಳಿಗನೂರು ವೀರಭದ್ರಯ್ಯ ಇವರು ರಂಗಗೀತೆಗಳನ್ನು ಬರೆಯಲು ಕೊಟ್ಟು ಪ್ರಭಾವ ಬೀರಿದವರು ಇವರು. ಇದರಿಂದಾಗಿ ಅವರು ನಾಲ್ಕುನೂರು ಇದಕ್ಕಿಂತ ಹೆಚ್ಚಾಗಿ ರಂಗಗೀತೆಗಳನ್ನು ಬರೆದಿದ್ದಾರೆ. ಇದಕ್ಕೆ ಪೂರಕವಾಗಿ ಇವರ ರಂಗಗೀತೆಗಳನ್ನು ಸುಭದ್ರಮ್ಮನವರಂತಹ, ಆಕಾಶವಾಣಿಯಲ್ಲಿ ಶಾಂತಕುಲಕರ್ಣಿಯವರಂತಹ ಗಾಯಕರು ಇದ್ದುದ್ದರಿಂದ ರಾಜ್ಯದಲ್ಲಿ ಎಲ್ಲಾ ಕಡೆ ಹರಡಲು ಸಾಧ್ಯವಾಯಿತು. ಹೀಗೆ ಇವರು ಅನೇಕ ರಂಗಗೀತೆಗಳನ್ನು ರಚಿಸಿದ್ದಾರೆ. ಅವರ ಪ್ರಮುಖ ರಂಗಗೀತೆಗಳು ಹೀಗಿವೆ.

ನಾಂದಿಗೀತೆ

ರಾಗ : ಯಾವುದನ್ನಾದರು ಅಳವಡಿಸಿಕೊಳ್ಳಬಹುದು   ತಾಳ:ಕೇರವ ಮತ್ತು ದಾದರ

ನಮೋ ಕನ್ನಡ ಗೌರಿ
ನಮೋ ಭುವನೇಶ್ವರಿ
ನಮೋ ಕರ್ನಾಟಕ ರಾಜರಾಜೇಶ್ವರಿ

ತಾಳ : ಕೇರವ ಶರಣು ಕನ್ನಡ ಗೌರಿ ಭುವನೇಶ್ವರಿ
ವರ ಕರ್ನಾಟಕ ರಾಜೇಶ್ವರಿ ||ಪ||

ತಾಳ : ದಾದರ ತುಂಬಿ ತುಳುಕಿ ಹರಿ ತುಂಗಭದ್ರೆ ಕಾವೇರಿ
ಧುಮುಧುಮು ಧುಮು ಧುಮ್ಮಿಕ್ಕುವ ಜಲಪಾತದ ವೈಖರಿ
ಹಸಿರುಕ್ಕಿದೆ ಮಲೆನಾಡಲಿ ಗಿರಿದರಿ ನಲವೇರಿ
ನೀನಿರುವ ಭೂರಮೆಯು ನಿತ್ಯ ಸುಂದರಿ ||೧||

ತಾಳ : ಕೇರವ ವಿದ್ಯಾರಣ್ಯರ ಗುರುಮುನಿವರರ ತಪಿಸಿನ ಫಲವಿದು ನಿನ್ನೂರು
ಜಕ್ಕಣ ಡಂಕಣ ಶಿಲ್ಪಾಚಾರ್ಯರ ಕಲಾರಸಿಕರ ಬಾಳುಸಿರು
ಗಂಗ ಕದಂಬರು ಕಂಪಲಿರಾಯರು ನೆತ್ತರಿನರ್ಚನೆ ಮಾಡಿದರು
ಸೋಮಚಾಮರಸ ಕುವರರ ವ್ಯಾಸ ಪ್ರಭು ಕನಕದಾಸರ ತವರೂರು||೨||

[illegible]

[illegible]

[illegible]

[illegible]

ಶೃಂಗಾರ ಗೀತೆ

ರಾಗ : ಯಾವುದನ್ನಾದರು ಅಳವಡಿಸಿಕೊಳ್ಳಬಹುದು **ತಾಳ:ಕವಾಲಿ**

ಚಲುವಿನಾ ಸೆರೆ ಒಲವಿನಾ ಕರೆ
ಸಮ್ಮಿಳಿತ ನಂದನ ವನವೀ ಧರೆ ||ಪ||

ಋತುರಾಜನೊಲಿದ ಭುವಿಯ ಬಿನ್ನಾಣ
ಸ್ವರ ಚತುರೆಯ ಮಧುರ ಮಂಜುಳಗಾನ
ಚಲುವೊಲವಿನ ಮಿಲನವೀ ಸುಂದರ ತಾಣ
ರಸ ಋಷಿಗಿದು ನವರಸ ಚೇತನ ||೧||

ಅರಳಿದ ಹೂಬನ ನಿತ್ಯ ವಿನೂತನ
ದುಂಬಿಯ ಝೇಂಕಾರ ಪ್ರೇಮದ ಕವನ
ಸಂತೋಷ ಸಂಗೀತ ಬೆರೆತ ಬೃಂದಾವನ
ಈ ನೆಲ ಜಲ ಪಡೆದ ಜನ್ಮ ಪಾವನ ||೨||

ನೃತ್ಯದ ಗೀತೆ

ನಾಟಕ: ಸತ್ಯಹರಿಶ್ಚಂದ್ರ (ಇಂದ್ರಸಭೆಯ ಆರಂಭದಲ್ಲಿ ಒಂದು ನರ್ತನ ಗೀತೆ)

ತಾಳ : ಕೇರವ

ಜಯ ಹೋ ಜಯಹೋ ಭೋಗೇಂದ್ರ
ಜಯ ಹೋ ಜಯ ಹೋ ದೇವೇಂದ್ರ ||ಪ||

ಸುಗುಣೆ ಶಚಿದೇವಿ ಹೃನ್ಮಾನಸೇಂದ್ರ
ಸುರಮುನಿ ಸಭೆಗೆ ನೀ ಪೂರ್ಣಚಂದ್ರ
ಸಕಲ ಗುಣಸಾಂದ್ರ ಅಮರ ನಗರೇಂದ್ರ
ಸದ್ಧರ್ಮಿ ಸುಪ್ರೇಮಿ ಸಕಲ ಕಲಾಕೇಂದ್ರ ||೧||

ಸುರತರು ಸುರಧೇನು ಪರುಷ ಐರಾವತ
ಕಿನ್ನರ ಗಂಧರ್ವ ಸೇವ್ಯಾ ಸಂಪೂಜಿತ
ಅತುಳ ಬಲಯುತ ಅಸುರಾರಿ ಪ್ರಖ್ಯಾತ
ಸಾಹಿತ್ಯ ಸಂಗೀತ ನಾಟ್ಯ ಸಂಪ್ರೀತ ||೨||

ಪ್ರಣಯದ ಗೀತೆ

ನಾಟಕ: ಶ್ರೀಕೃಷ್ಣತುಲಾಭಾರ (ಸತ್ಯಭಾಮೆಯ ಸ್ವಯಂ ವರ್ಣನೆ ಹಾಡು)

ರಾಗ: ಹಂಸಧ್ವನಿ   ತಾಳ: ತೀನ್‌ತಾಲ್/ತ್ರಿತಾಲ್

ರಾಗಸಂಯೋಜನೆ: ಕಂಪ್ಲಿವಾದಿರಾಜರು

ನಾನೇ ರೂಪಸಿ ಊರ್ವಸಿ
ಮಧು ಚೈತ್ರ ಚಲುರಾಸಿ ಷೋಡಸಿ ||ಪ||

ನಗೆಮಕರಂದದ ವದನಾರವಿಂದ
ಮುಂಗುರುಳು ದುಂಬಿಯೊಲಾಡಿ ಸೊಗದಿಂದ
ಕೆಂಪೇರಿತು ಕೆನ್ನೆ ನಾಚಿಕೆಯಿಂದ
ಹಣ್ಣೆಂದ ಅರಗಿಳಿಯ ಚುಂಬನದಿಂದ ||೧||

ಅಕ್ಷಯಾಮೃತ ಕಲಶ ಈ ಕನ್ನೆ ಕೆಂದುಟಿ
ತೆಳುಕಟಿಯ ಬಳಸಿರಲು ನಾಗರ ನೀಳ್ಜಡೆ
ಬಳ್ಳಿ ದೇಹವ ಕಂಡು ನಾಚಲು ಲತಾನಟಿ
ಕೇಳಿತು ಸುಳಿಗಾಳಿ ಬೇರೇನು ಸಾಟಿ ||೨||

ಪ್ರೇಮದ ಗೀತೆ

ತಾಳ: ಕೇರವ/ಕವಾಲಿ

ಹೆಣ್ಣು: ನಲಿದು ಹಾರಾಡುವ | ಸತತ
ಒಲಿದು ಒಂದಾಗುವ

ಗಂಡು: ಕಳೆದು ದಿನವೆಲ್ಲ ಮರೆಯುವ | ನಗುತ
ಬಾಳಿ ಮೈ ಮರೆಯುವ

ಹೆಣ್ಣು: ಹಾಲು ಜೇನಾಗುವ | ಬೆರೆತ
ಭೂಮಿ ಬಾನಾಗುವ

ಗಂಡು: ನೀಲಿ ಮುಗಿಲೇರುವ | ಕಲೆತು
ಸುಖದಿ ಓಲಾಡುವ

ಹೆಣ್ಣು: ಹರಿದು ಹೊಳೆ ಸೇರಿತು | ಕಡಲು
ಮಿಲನ ಸವಿ ಪಡೆಯಿತು

ಗಂಡು: ಮೋಡ ಮಳೆಗರೆಯಿತು | ಬಯಲು
ಹಸಿರುಟ್ಟು ತಾ ನಲಿಯಿತು

ಹಾಸ್ಯದ ಗೀತೆ

ರಾಗ: ತಾಳ: ಕೇರವ

ಗಂಡು: ಬೆಳ್ಳಿಚುಕ್ಕಿ ಕಣ್ಣ ಕುಕ್ಕಿ ಕಾಡ್ಯಾದ
ಕಳ್ಳನೋಟ ಬೀರಿ ಮಳ್ಳ ಮಾಡ್ಯಾದ

ಹೆಣ್ಣು: ಹಾಲಿನಾಗಸದಾಗ ಚಂದ್ರ ತಾನಿರುವಾಗ
ಮಿಣುಮಿಣುಕಿ ಹೊಳೆವಾಸೆ ಮನದಾಗ

ಗಂಡು: ತಾರೆ ಸಾವಿರದಾಗ ಮಿಗಿಲಾಗಿ ಹೊಳೆದಾಗ
ಇವಳೇ ನನ್ನವಳೆಂದ ಚಂದ್ರ ಕತ್ತಲದಾಗ

ಹೆಣ್ಣು: ಚೆಲುವ ಚಂದ್ರನ ಪಡೆದು ನಲಿವ ಸಂಭ್ರಮದಾಗ
ಮುಂದಿನ ಹಗಲೆನ್ನೆ ಮರೆತಾಗ

ಗಂಡು: ಹಗಲಾದರೇನೀಗ ಮನವೆರಡು ಬೆರೆತಾಗ
ಸ್ವರ್ಗ ಭೂಮ್ಯಾಗ ಬೆರೆತಾಗ

ಷಟ್ಪದಿಯಲ್ಲಿ ರಚಿಸಿದ ರಂಗಗೀತೆ

(ಶ್ರೀಕೃಷ್ಣನು ರುಕ್ಮಿಣಿಯ ಭಕ್ತಿಗೆ ಮೆಚ್ಚಿ ಹೇಳುವ ಪದ್ಯ) -'ಭಾಮಿನಿ ಷಟ್ಪದಿ'ಯಲ್ಲಿದೆ

ಸರಸದಿಂ ಭಾಮೆಯನು ಮಂಜುಳ
ಮುರಳಿ ಗಾನದಿ ರಾಧೆಯ ಅಸಮ
ಪರಾಕ್ರಮದಿ ಜಾಂಬವತಿಯ ನಯನದಿಕಾಳಂದಿಯ
ಸುರೂಪದಿ ಮಿತ್ರವಿಂದೆಯ ಕೈ
ವಾರದಿಂದ ಭದ್ರೆಯನೊಲೆಸಿರುವ
ಗಿರಿಧರನು ನಿನ ಭಕ್ತಿಗೊಲಿದಾಳಾಗಿಹನು ದೇವಿ

ರಂಗಗೀತೆಗಳ ರಚನಾಕ್ರಮ

ರಂಗಗೀತೆಗಳ ರಚನೆ ಮಾಡುವ ವಿಧಾನದಲ್ಲಿ ೨-೩ ವಿಧಾನಗಳಿವೆ. ಒಂದು, ರಂಗಭೂಮಿಗೆ ರಂಗಗೀತೆಗಳನ್ನು ಬರೆಯುವವನಿಗೆ ಮುಖ್ಯವಾಗಿ ಸಾಹಿತ್ಯದ ಜ್ಞಾನ, ಲಯದ ಜ್ಞಾನ, ತಾಳದ ಜ್ಞಾನ ಇರಬೇಕು. ಆ ತಾಳದ ಗುತ್ತಿಗೆ ತಕ್ಕಂತೆ ಅವನು ಆ ಹಾಡು ರಚಿಸುತ್ತಾನೆ. ಎರಡು, ಸಾಹಿತ್ಯ ಎನ್ನುವುದು ಛಂದಸ್ಸು ಶಾಸ್ತ್ರವು ಕೂಡ ಲಯಕ್ಕೆ ಸಂಬಂಧಿಸಿದ್ದಾಗಿದೆ. ಒಂದನೇ ಸಾಲಿನಲ್ಲಿ ಇಷ್ಟು ಮಾತ್ರೆ, ಎರಡನೇ ಸಾಲಿನಲ್ಲಿ ಇಷ್ಟು ಮಾತ್ರೆಗಳಿರಬೇಕೆಂದು ಹೇಳುವ ಹಾಗೇ, ತಾಳದಲ್ಲೂ ಮಾತ್ರೆ ಇದೆ. ಕವಾಲಿ, ದಾದರ, ದೀಪ್‌ಚಂದ್, ದಿನ್‌ತಾ ಎಂಬ ತಾಳಕ್ಕೆ ಇಷ್ಟು ಮಾತ್ರೆಗಳಿರಬೇಕೆಂದು ತಿಳಿದುಕೊಂಡಿದ್ದರೆ. ಯಾವ

ಹಾಡನ್ನು, ಯಾವ ಓಟದರ್ಶಿಯಾಗಿ ಬರೆಯಬಹುದು. ಈಗ, ದುಃಖದ ಹಾಡನ್ನು ಜೋರಾಗಿ ಹಾಡಬಾರದು. ವಿಲಂಬಿತವಾಗಿ ಎಳೆದು ಹಾಡಬೇಕು, ನಿಧಾನವಾಗಿ ಬಳಸಬೇಕು. ಅದಕ್ಕೆ ಬೇರೆ ತಾಳ ಬಾರಿಸಬಾರದು. ದೀಪ್‌ಚಂದ್, ಎನ್ನುವಂತಹ ತಾಳ ಬಳಸಬೇಕು. ಈ ಕಲ್ಪನೆ ಹಾಡುಗಾರಿಗೆ ಇರಬೇಕು. ಇವರೊಬ್ಬ ತಬಲವಾದರಾದ್ದರಿಂದ ಎಲ್ಲಾ ತಾಳದ ಪರಿಚಯವಿತ್ತು. ಇವರು ಯಾವ ತಾಳದಿಂದ ಯಾವ ರಸ ಹೆಚ್ಚು ಸ್ಫುರಿಸುತ್ತದೆ ಎಂದು ತಿಳಿದು, ತಮ್ಮಷ್ಟಕ್ಕೆ ತಾವೇ ಕಂಡು ಕೊಂಡಿದ್ದರಿಂದ ತಮಗೆ ಕೊಟ್ಟಂತಹ ಹಾಡುಗಳು ಇಂತಹ ಸನ್ನಿವೇಶದ ಹಾಡನ್ನು ಇಂತಹ ತಾಳದಲ್ಲಿ ಮಾನಸಿಕವಾಗಿ ಹೇಳಿಕೊಳ್ಳುತ್ತಾ ಆ ಗದ್ಯಕ್ಕೆ ತಕ್ಕಂತೆ ಸಾಹಿತ್ಯ ರಚಿಸುತ್ತಿದ್ದರು. ಅದನ್ನು ನಾಟಕದ ಮಾಸ್ತರರು ಆ ಮೇಲೆ ರಾಗ ಸಂಯೋಜನೆ ಮಾಡಿಕೊಳ್ಳುತ್ತಿದ್ದರು. ಆದರೆ ಯಾರೂ ಮಾಸ್ತರರು ಮೊದಲು ಟ್ಯೂನ್ ಕೊಟ್ಟು ಗೀತೆ ರಚನೆಮಾಡಿ ಎಂದು ಕೊಡಲಿಲ್ಲ. ಟ್ಯೂನ್ ಕೊಟ್ಟು ಗೀತೆ ರಚಿಸಿದರೆ ಸತ್ವ ಇರುವುದಿಲ್ಲ ಬರೆಯುವವರಿಗೆ ಸ್ವಾತಂತ್ರ್ಯವಿರುವುದಿಲ್ಲ ಅಲ್ಲಿ ಕೇವಲ ಸ್ವರಕ್ಕೆ ಅಕ್ಷರಗಳನ್ನು ತುರುಕಿದಂತಾಗುತ್ತದೆ. ಭಾವ ತನ್ನಿಂದ ತಾನೇ ಹೊರಬರುವುದಿಲ್ಲ ಎಂದು ಮಾಸ್ತರರಿಗೆ ತಿಳಿದಿತ್ತು.

ಸೋಮಣ್ಣನವರಿಗೆ ಮುಖ್ಯವಾಗಿ ಭರಮಲಿಂಗಪ್ಪ ಮಾಸ್ತರರೇ ರಂಗಗೀತೆಗಳನ್ನು ಬರೆಯಲು ಹೆಚ್ಚು ಪ್ರಭಾವಿತರೂ ಮತ್ತು ಅವರಿಗಿಂತ ಮುಂಚಿತವಾಗಿ ಅನೇಕ ರಂಗಗೀತೆಗಳನ್ನು ಬರೆದಿದ್ದರು. ಬರೆಯುತ್ತಿದ್ದರು. ಅವರದು ನೇರವಾದ ಪ್ರಭಾವ. ಆದರೆ ಅದಕ್ಕಿಂತ ಹಿನ್ನೆಲೆಯಲ್ಲಿ ಆ ಹಿಂದೆ ಬಂದಿರುವ ಗೇರಿಗುಣವುಳ್ಳಂತ ಹಾಡುಗಳನ್ನು ಬರೆಯುವಂತಹ ಅನೇಕ ಕವಿಗಳಾದ ಕುವೆಂಪು, ದ.ರಾ.ಬೇಂದ್ರೆ ಮತ್ತು ಸಿದ್ಧಯ್ಯ ಪುರಾಣಿಕ ಇವರು ಬರೆದ ಹಾಡುಗಳೆಲ್ಲ ಲಯಪ್ರಧಾನವಾದ ಭಾವಗೀತೆಗಳೇ ಹಾಗಾಗಿ ಅವರೊಬ್ಬ ಸಾಹಿತ್ಯ ವಿದ್ಯಾರ್ಥಿಯಾಗಿದ್ದರಿಂದ ಓದಿದ್ದರು ಮತ್ತು ಅವುಗಳನ್ನು ಅನುಭವಿಸಿದ್ದರು. ಅವರಿಗೆ ತಕ್ಕಂತೆ ಅಂದುಕೊಳ್ಳುತ್ತಿದ್ದರು. ಅಲ್ಲಿನ ಪ್ರತಿಮೆಗಳು, ಅವರು ಬಳಸಿದಂತಹ ಛಂದೋವಿಧಾನ ಲಯಗತಿ ಇವೆಲ್ಲ ಅವರಿಗೆ ಪ್ರಭಾವವಾದ್ದರಿಂದ ಆ ತರಹದ ಹಾಡುಗಳನ್ನು ಬರೆಯಲಾರಂಭಿಸಿದರು.

ರಂಗಗೀತೆಗಳು ತಾಳಕ್ಕೆ ಸಿಗಲಾರದ ನವ್ಯ ಗೀತೆಗಳಲ್ಲ, ಇವತ್ತಿನ ನವ್ಯ ಆಲಯ ಗೀತೆಗಳು ಇಷ್ಟೇ ಉದ್ದವಿರಬೇಕೆಂಬ ಛಂದೋಬದ್ಧ ನಿಯಮಗಳಿಲ್ಲ. ಆದರೆ ಇಂದಿನ ಎಲ್ಲಾ ಹಾಡುಗಳಿಗೂ ಕೂಡ ಕಾವ್ಯಗಳಿಗೆ ಇರುವಂತೆ ಛಂದೋನಿಯಮಗಳನ್ನು ಭಕ್ತಿಗೀತೆಗಳನ್ನು ಬರೆದ ನಮ್ಮ ಕನ್ನಡದ ಹಿಂದಿನ ಸಾಹಿತಿಗಳಂತೆ ಸೋಮಣ್ಣನವರು ಅದೇ ಪರಂಪರೆಯಲ್ಲಿ ಬಂದಂತವರು ಅದರ ಪ್ರಭಾವ ಇವರಿಗಾಗಿದೆ. ಅವರ ಗುರುಗಳ ಮತ್ತು ಹಿಂದಿನ ಕವಿಗಳ ಹಾಡುಗಳನ್ನು ಓದಿದ್ದ ಫಲವೇ ಅವರಿಗೆ ಪ್ರಭಾವವಾಯಿತು. ರಂಗಗೀತೆಗಳನ್ನು ಸಂಭಾವನೆಯನ್ನು ತೆಗೆದುಕೊಳ್ಳದೆ ಬರೆದುಕೊಡುತ್ತಿದ್ದರು. ಹಾಡು ಬರೆದುಕೊಟ್ಟು ಹಣ ಪಡೆದುಕೊಳ್ಳಬೇಕೆಂಬ ಯೋಚನೆಯೂ ಸಹ ಅವರಿಗೆ ಇರಲಿಲ್ಲ. ಅಂಥವರಲ್ಲಿ ಭರಮಲಿಂಗಪ್ಪ

[illegible]

[illegible]

[illegible]

ಮಾಸ್ತರರು ಮತ್ತು ಡಣಾಯಕನಕೆರೆ ನಾರಾಯಣಮೂರ್ತಿಯವರೂ ಕೂಡ ಆಗಿದ್ದಾರೆ. ನಾಟಕಕಾರರು ಹಾಡು ಬರೆದುಕೊಡುವುದರಿಂದ ಖುಷಿಯನ್ನು ಕೊಡುತ್ತಿದ್ದವಂತೆ ಸೋಮಣ್ಣನವರ ಮಾತಾಗಿದೆ. (ಸಂದರ್ಶನ ಮಾಡಿದಾಗ ಹೇಳಿದ ಮಾಡಿದು)

ಒಮ್ಮೆ ಕಂಪ್ಲಿಯ ವಾದಿರಾಜರು 'ಶ್ರೀಕೃಷ್ಣ ಪಾರಿಜಾತ' ಎಂಬ ನಾಟಕ ಬರೆದರು. ಆಗ ಪೌರಾಣಿಕ ನಾಟಕಕ್ಕೆ ಸುಮಾರು ೨೫ ಹಾಡು ಬರೆದುಕೊಡಬೇಕಾಗಿತ್ತು. ಅದು ಕಂದ ಪದ್ಯ ರೂಪದಲ್ಲಿ ತೆಲುಗಿನಲ್ಲಿರುವ ಪದ್ಯಗಳಂತೆ ಬರೆಯಬೇಕಾಗಿತ್ತು. ಅಂತಹ ಸಂದರ್ಭದಲ್ಲಿ ಕೃಷ್ಣನಿಗೆ, ರುಕ್ಮಿಣಿಗೆ, ನಾರದರಿಗೆ ಶ್ಲೋಕದ ಆಲಾಪನಾ ಮಾಡುವಂತಹ ಪದ್ಯದ ರೂಪದಲ್ಲಿ ಬೇಕಾಗಿದ್ದವು.

ಹೀಗಾಗಿ ಹಿಂದಿನ ಕವಿಗಳು ಹೇಗೆ ರಚನೆ ಮಾಡಿದ್ದಾರೆಂದು ತಿಳಿದು, ಆಗ ಕಂದ ಪದ್ಯ ಬರೆಯುವ ವಿಧಾನವೇ ಬೇರೆಯಾಗಿತ್ತು. ಇಂತಹ ಸನ್ನಿವೇಶದಲ್ಲಿ ಇವರೊಬ್ಬ ಕನ್ನಡದ ಮಾಸ್ತರಾಗಿದ್ದರಿಂದ, ಮಕ್ಕಳಿಗೆ ಹೇಳುತ್ತಿದ್ದರಿಂದ, ಅವರಿಗೆ ಒಳವು ಸಿಕ್ಕಿತು. ಹಾಗಾಗಿ ಅಂತಹ ಷಟ್ಪದಿಯಂತಹ ಹಾಡುಗಳನ್ನು ರಚಿಸಿದರು. ಹೀಗೆ ಇವರು ಅನೇಕ ಭಾಮಿನಿ, ವಾರ್ಧಕ ಷಟ್ಪದಿಯಂತಹ ಹಾಡುಗಳನ್ನು ಸಹ ಬರೆದಿದ್ದಾರೆ. ಛಂದಸ್ಸುಶಾಸ್ತ್ರ ಬಲ್ಲವನು ರನ್ನ, ಪಂಪ ಮತ್ತು ಕುಮಾರವ್ಯಾಸರಂತೆ ದೊಡ್ಡ ಕವಿಗಳಾಗಿ ಕವಿತೆಗಳನ್ನು ರಚನೆ ಮಾಡಬಹುದು ಎನ್ನುತ್ತಾರೆ. (ಸಂದರ್ಶನದ ಸಂದರ್ಭದಲ್ಲಿ) ಹೀಗೆ ಕಂದ, ಷಟ್ಪದಿಯಂತಹ ಪದ್ಯಗಳನ್ನು ಬರೆದು ತೆಗೆದುಕೊಂಡು ಕಂಪ್ಲಿವಾದಿರಾಜರ ಹತ್ತಿರ ಹೋದಾಗ ಅವರು ಅದನ್ನು ನೋಡಿ ಲಘು ಗುರು ಪ್ರಸ್ತಾರ ಹಾಕಿದರೆ ಸರಿಯಾಗಿದ್ದನ್ನು ಕಂಡು ಚೆನ್ನಾಗಿ ಬರೆಯುತ್ತೀರಿ, ಹೀಗೆ ಬರೆಯಿರಿ ಎಂದು ಪ್ರೇರಣೆಯು ಸಹ ತುಂಬಿದರು. ಮುಂದೆ. ಪೌರಾಣಿಕ ನಾಟಕಗಳಂತಹ 'ಹೇಮರೆಡ್ಡಿ ಮಲ್ಲಮ್ಮ', 'ಅಕ್ಷಯಾಂಬರ', 'ಕುರುಕ್ಷೇತ್ರ', 'ಹರಿಶ್ಚಂದ್ರ', 'ಲವಕುಶ' ನಾಟಕಗಳಿಗೂ ರಂಗಗೀತೆಗಳು ಬರೆದರು ಎಂದು ತಿಳಿಯುತ್ತದೆ. (ಸಂದರ್ಶನದಲ್ಲಿ ಹೇಳಿದ ಮಾತು)

ಒಟ್ಟಾರೆಯಾಗಿ ಮ.ಬ.ಸೋಮಣ್ಣನವರು ಕಂದ, ಷಟ್ಪದಿಯ ರೂಪದ ಅನೇಕ ರಂಗಗೀತೆಗಳನ್ನು ರಚಿಸಿದ್ದಾರೆ ಎಂಬುದು ನಿರ್ವಿವಾದದ ಸಂಗತಿಯಾಗಿದೆ.

೩. ಡಿ.ಎಂ. ತೋಟಯ್ಯಸ್ವಾಮಿ

ಪೀಠಿಕೆ

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕು ಡಣಾಯಕನ ಕೆರೆಯಲ್ಲಿ ದಿನಾಂಕ ೦೧.೦೬.೧೯೩೭ರಂದು ಕಲ್ಲಯ್ಯಸ್ವಾಮಿ ಮತ್ತು ಕೊಟ್ರಬಸಮ್ಮ ಎಂಬ ದಂಪತಿಗೆ ಜನಿಸಿದರು. ಡಿ.ಎಂ. ತೋಟಯ್ಯಸ್ವಾಮಿಯವರು ಆನೇ ತರಗತಿಯವರೆಗೆ ಮಾತ್ರ ಶಿಕ್ಷಣ ಪಡೆದರು. ಇವರ ತಂದೆಯವರಾದ ಕಲ್ಲಯ್ಯಸ್ವಾಮಿಯವರು

ಮೂಲತಃ ಬಯಲು ನಾಟಕಗಳಲ್ಲಿ ಹೆಸರಾಂತ ನಿರ್ದೇಶಕರು ಮತ್ತು ನಟರು ತೀರಾ ಸಹಜವೆನ್ನುವಂತೆ ತಂದೆಯವರ ಪ್ರಭಾವದಡಿಯಲ್ಲಿ ವಾದ್ಯ ಸಂಗೀತದೆಡೆ ಆಕರ್ಷಿತರಾದರು.

ಗರಗ ನಾಗಲಾಪುರದ ಷಡಾಕ್ಷರ ಗವಾಯಿಗಳವರಿಂದ ಐದು ವರ್ಷ ಕೋಗಳಿ ಗುರುಸಿದ್ಧಯ್ಯ ರವರಲ್ಲಿ ಮೂರು ವರ್ಷ, ಸತತವಾಗಿ ಎಂಟು ವರ್ಷಗಳ ಕಾಲ ಕಲಿತರು. ಕಲಿತ ಹಾರ್ಮೋನಿಯಂ ವಿದ್ಯೆ ಅವರ ಜೀವನಕ್ಕೆ ಭದ್ರಬುನಾದಿಯಾಯಿತು. ಇಲ್ಲಿಂದ ಮುಂದೆ ಸತತ ಮೂರು ವರ್ಷಗಳಲ್ಲಿ ಮುದ್ದಾಪುರದ ಶಿವಲಿಂಗಪ್ಪ ಮಾಸ್ತರರವರಿಂದ ತಂತಿವಾದ್ಯ ಮತ್ತು ದಿಲ್‌ರುಬಾ ವಾದ್ಯ ಕಲೆತರು. ನಂತರ ಕಾಲಕ್ಕನುಗುಣವಾಗುವಂತೆ ಕ್ಯಾಸಿಯೋ ವಾದನದ ತರಬೇತಿಯೂ ಸಹ ಆಯಿತು. ಇಲ್ಲಿಂದ ಮುಂದೆ ಅವರ ನಿರಂತರ ಗ್ರಾಮೀಣ ರಂಗ ಯಾತ್ರೆಯೇ ಆರಂಭವಾಯಿತು.

ಈ ರೀತಿ ಮೂರು ವಾದ್ಯಗಳ ಬಳಕೆಯೊಂದಿಗೆ ಕರ್ನಾಟಕ, ಆಂಧ್ರ, ಮಹಾರಾಷ್ಟ್ರಗಳಲ್ಲಿ ಕನಿಷ್ಠ ೪೨ ವರ್ಷಗಳಿಂದಲೂ ಸಂಚರಿಸಿ ನಾಟಕ ನಿರ್ದೇಶನ ಮಾಡಿದರು. ಅಲ್ಲದೆ ಸ್ವತಃ ರಾಗಸಂಯೋಜನೆ ಮಾಡಿದ್ದೂ ಉಂಟು. ಜನತೆಯ ಅಪೇಕ್ಷೆಯ ಮೇರೆಗೆ ಬೇರೆ ಮಾಸ್ತರರು ಕಲಿಸಿದ ನಾಟಕಗಳಿಗೆ ಅವರ ಅಪೇಕ್ಷಿಸಿದಂತೆ ದಿಲ್‌ರುಬಾ ವಾದ್ಯ, ಕ್ಯಾಸಿಯೋವಾದ್ಯ, ಹಾರ್ಮೋನಿಯಂ ವಾದ್ಯ ನುಡಿಸಿ ಜನಮೆಚ್ಚುಗೆಗೆ ಪಾತ್ರರಾದರು. ಈ ಎಲ್ಲಾ ಅವರ ಸಂಗೀತ ಸುಧೆ ಬಳಕೆಗೊಂಡಿದ್ದು ನಾಟಕಕ್ಕೆ ಅಂದರೆ ಕನ್ನಡ ರಂಗಭೂಮಿಗೆ. ಇವರು ಇಪ್ಪತ್ತು ವರ್ಷಗಳ ಒಳಗೆ ಸ್ತ್ರೀ- ಪುರುಷ ನಾಟಕಗಳಲ್ಲಿ ನಟಿಸಿ ಪ್ರಖ್ಯಾತಿ ಪಡೆದಿದ್ದಾರೆ. ಸೌಭಾಗ್ಯಲಕ್ಷ್ಮೀ ನಾಟಕದಲ್ಲಿ 'ಶಾರದ' ಪಾತ್ರ ಕುರುಕ್ಷೇತ್ರ ನಾಟಕದಲ್ಲಿ 'ಉತ್ತರೆ' ಪಾತ್ರ ಸಿದ್ಧರಾಮೇಶ್ವರ ನಾಟಕದಲ್ಲಿ 'ಸಿದ್ಧರಾಮನ' ಪಾತ್ರ ರಾಮಾಯಣದಲ್ಲಿ 'ಮರಿಕೋತಿಯ' ಪಾತ್ರ ಅದ್ಭುತ ರಾಮಾಯಣದಲ್ಲಿ 'ಕುಶನ'ಪಾತ್ರ ಹೇಮರೆಡ್ಡಿ ಮಲ್ಲಮ್ಮನ ನಾಟಕದಲ್ಲಿ 'ಮಲ್ಲಮ್ಮನ'ಪಾತ್ರ ಹೀಗೆ ಹಲವು ನಾಟಕಗಳಲ್ಲಿ ನಟಿಸಿದ್ದಾರೆ.

ಆ ಕಾಲದಲ್ಲಿ ಪ್ರಚಲಿತವಾದ ಪೌರಾಣಿಕ ನಾಟಕಗಳಾದ 'ಮಹಾರಥಿಕರ್ಣ', 'ಚಿತ್ರಕೇತು,' 'ಮಹಾರಾಜ,' 'ರುಕ್ಮಿಣಿ ಸ್ವಯಂವರ', 'ರಕ್ತರಾತ್ರಿ', ದೇವದಾಸಿ,' 'ಹೇಮರೆಡ್ಡಿ ಮಲ್ಲಮ್ಮ' ದಂತಹ ನಾಟಕಗಳಿಗೆ ಸಂಗೀತ, ನಿರ್ದೇಶನ ಹಾಗೂ ಹೊಸ ಹೊಸ ಬಗೆಯ ರಂಗಗೀತೆಗಳನ್ನೂ ಸಹ ರಚಿಸಿ, ರಾಗಸಂಯೋಜನೆ ಮಾಡಿ ಹೆಸರುವಾಸಿಯಾದವರು. ಇವರು ಸುಮಾರು ಒಂದುನೂರಕ್ಕೂ ಹೆಚ್ಚು ರಂಗಗೀತೆಗಳನ್ನು ರಚಿಸಿ ಸ್ವತಃ ರಾಗ ಸಂಯೋಜನೆ ಮಾಡಿದ್ದು ಉಂಟು. ಸುಮಾರು ಮೂವತ್ತೈದು ಪೌರಾಣಿಕ, ಐತಿಹಾಸಿಕ, ಮತ್ತು ಸಾಮಾಜಿಕ ನಾಟಕಗಳಿಗೆ ರಂಗಗೀತೆಗಳನ್ನು ರಚಿಸಿದ್ದಾರೆ ಜೊತೆಗೆ ಅವುಗಳನ್ನು ಒಂದೆಡೆ ಕೂಡಿಸಿದ್ದಾರೆ ಎಂಬುದು ಇಲ್ಲಿ ಮುಖ್ಯವಾದ ಸಂಗತಿಯಾಗಿದೆ. ಹಾಗೆಯೇ ಬೇರೆ ಕವಿಗಳು ಬರೆದ ರಂಗಗೀತೆಗಳಿಗೆ ರಾಗ ಸಂಯೋಜನೆ ಸಹ ಮಾಡಿದ್ದಾರೆ.

ಇವರು ರಚಿಸಿದ ಪೌರಾಣಿಕ ನಾಟಕಗಳ ರಂಗಗೀತೆಗಳನ್ನು ಇಲ್ಲಿ ನಿರೂಪಿಸಲಾಗಿದೆ.

ಪ್ರೀತಿ, ಪ್ರೇಮ, ಪ್ರಣಯದ ಗೀತೆ

ನಾಟಕ: ಪ್ರಮೀಲಾ ರಾಜ್ಯ

ರಾಗ: ಭೀಪಲಾಸ್ **ತಾಳ: ಕೇರವ**

('ಪ್ರಮೀಲಾ ರಾಜ್ಯ' ಎಂಬ ನಾಟಕದಲ್ಲಿ ಶೋಭಾ, ಲೋಭಾ
ಈ ವಿಷಕನ್ನೆಯರು ಹಸ್ತಿನಾವತಿಯ ದೂತ ವಿರಾಮನನ್ನು
ಪ್ರಣಯ ಪಂಕ್ತಿಗೆ ಕರೆಯುತ್ತಿರುವ ಭಾವದ ಹಾಡು)

ಶೋಭಾ-ಲೋಭಾ: ಮೆಲ್ಲನೆ ಮೆಲ್ಲನೆ ಬಾ ರಸಿಕಾ ನೋಡುಮುಖಾ
ಕೊಡು ಸುಕ ಬಯಸಿ ಬಂದಿದೆವು ನಾವ್ ನಿನ್ನ
ದೂರ ಮಾಡದೇ ನೀಡು ಸುಖಾ
ಮುಂದೆಂದು ದೊರೆಯದೂ ಈ ಸುಖ ನೀ ಮಿಂದು
ನೋಡು ಬಾರೋ ಸಖಾ ||೧||

ವಿರಾಮ: ಒಲ್ಲೇ ನಾನೊಲ್ಲೇ ನಿಮದೆಲ್ಲ ನಾನು ಬಲ್ಲೇ|
ನೀವಾರು ಬೇಡ ನಾ ನೊಲ್ಲೇ|
ನಿಮ್ಮನ್ನ ಪ್ರೀತಿ ಮಾಡುವುದು ಸರಿಯಲ್ಲೇ ||೨||

ಶೋಭಾ-ಲೋಭಾ: ನೋಡು ನಮ್ಮ ನೋಟಾ ನಮ್ಮ ಮೈಯ ಮಾಟಾ|
ಕೂಡು ನಮ್ಮ ಕೂಟಾ |ಮೈ ಮರೆಸಿ ನೀಡು|
ಬಾರೋ ಸಖಾ ||೩||

ವಿರಾಮ: ನನ್ನಲ್ಲೇನಿದೇನಲ್ಲೇ |ನಾನು ಗಂಡಸಲ್ಲ ವಲ್ಲೇ|
ನಾನು ಶೂರ ನಲ್ಲೇ ನಲ್ಲೇ |ನಾನು ಧೀರ ನಲ್ಲೇ ನಲ್ಲೇ|
ವೀರಧೀರನಾನಾದರೂ ನಿಮ್ಮನ್ನ ಪ್ರೀತಿ ಮಾಡಿದವಗುಳಿವಿಲ್ಲೇ ||೪||

ನಾಂದಿ ಗೀತೆ

ನಾಟಕ: ಪ್ರಮೀಲಾ ರಾಜ್ಯ

ನಾಟಕದ ಕರ್ತೃ: ನಲವಡಿ ಶ್ರೀಕಂಠ ಶಾಸ್ತ್ರಿಗಳು

ರಾಗ: ಹಂಸಧ್ವನಿ ತಾಳ: ಜಲದ ಏಕ್ತಾ

ಕನ್ನಡದಾ ನಾಟ್ಯಕಲೆಯು ಬೆಳಗಲೀ
ಕನ್ನಡದಾ ನಾಟ್ಯಕುಸುಮ ಅರಳಲೀ
ಶ್ರೀಗುರುವೇ ನಿಮ್ಮಯಾ ಕರುಣೆಯಾ ಕೃಪೆಯಲೀ ||ಪ||

ರಾಗ : ಮಧುವಂತಿ

ಚೈತ್ರ ರವಿಯ ಕಲಾಛವಿಯ ಮಳೆಯು ಸುರಿಯಲೀ|
ವಸಂತ ಋತುವಿನಂತೆ ಕಲೆಯು ಚಿಗುರುತಲಿರಲೀ|
ಗ್ರೀಷ್ಮ ಋತುವಿನಂತೆ ಕಲೆಯು ಭರದಿ ಸಾಗಲೀ|
ವರ್ಷಋತುವಿನಂತೆ ಕಲೆಯು ಸೊಗದಿ ಬೆಳೆಯಲಿ
ಶ್ರೀ ಗುರುವೇ ನಿಮ್ಮಯೂ ಕರುಣೆಯೂ ಕೃಪೆಯಲೀ ||೧||

ರಾಗ: ಬಸಂತ

ಈ ನಮ್ಮಾ ನಾಟ್ಯ ಕಲೆಗೆ ಯಶವು ದೊರೆಯಲೀ|
ಎಂದೆಂದೂ ಬರಿದಾಗದ ಸಿಹಿ ಸಾಗರವಾಗಲೀ|
ಸರ್ವಜನತೆಗೆಂದೆಯೂ ಸುಖ ಶಾಂತಿ ದೊರೆಯಲೀ
ಶ್ರೀ ಗುರುವೆ ನಿಮ್ಮಯೂ ಕರುಣೆಯೂ ಕೃಪೆಯಲೀ ||೨||

ಶೋಕ ಗೀತೆ

ನಾಟಕ: ವೀರಾಭಿಮನ್ಯು

ನಾಟಕ ಕರ್ತೃ: ವಾಮನರಾವ್ ಮಾಸ್ತರರು

ರಾಗ: ಭಾಗೇಶ್ರೀ ತಾಳ: ದೀಪಚಂದ್

ಎಂಥ ಘೋರ ಬಾಳಿದೂ ವ್ಯಥೆಯ ತಂದ ಕಥೆ ಇದೂ
ತಾಳಲಾರದ ಗೋಳಿದೂ ದಾಟಲಾರದ ನದಿ ಇದೂ ಪ
ಅತ್ತು ಕಂಬನಿ ಸುರಿಸಿದೇ ಅತ್ತರೂ ಇನ್ನೇನಿದೇ
ಕಣ್ಣನೀರೆ ಬತ್ತಿದೇ ಬದುಕಿ ಮಾಡುವುದೇನಿದೇ ||೧||

ರಂಗಗೀತೆಗಳ ರಚನಾ ಕ್ರಮ

ಡಿ.ಎಂ. ತೋಟಯ್ಯ ಸ್ವಾಮಿಯವರಿಗೆ ರಂಗಗೀತೆಗಳನ್ನು ರಚಿಸುವುದಕ್ಕೆ ದಿವಂಗತ ರಾಮಸಾಗರದ ಭರಮಲಿಂಗಪ್ಪ ಮಾಸ್ತಾರರ ಪ್ರಭಾವ, ಪ್ರೋತ್ಸಾಹವಿದೆ. ಒಮ್ಮೆ 'ಬರಿದಾಯಿತೆ ಬಾಳಿನ ಚಿಂತೆ ಧರೆಯಾಯಿತೆ ಗೋಲಿನ ಚಿಂತೆ' ಎಂಬ ಸಾಹಿತ್ಯ ತಪ್ಪು ಬರೆದಾಗ ಇದು ತಪ್ಪಿದೆ ಎಂದು ಹೇಳಿದಾಗ ಭರಮಲಿಂಗಪ್ಪ ಮಾಸ್ತರರು ಅವರನ್ನು ಆ ಸಂದರ್ಭದಲ್ಲಿ ಗುರುತಿಸಿ, ತೋಟಯ್ಯ ನಿನಗೆ ಸಹ ಬರೆಯುವ ಆಸಕ್ತಿ ಇದೆ, ಇದೇ ರೀತಿಯಾಗಿ ನೀನು ಬರೆಯಲು ಕಲೆತುಕೊ ಎಂದು ಹೇಳಿದರಂತೆ (ಸಂದರ್ಶನ ೦೪.೦೯.೦೯ರಂದು)

ಮಾಸ್ತರರು ಅದೆ ಮೊದಲ ಬಾರಿಗೆ ನಮ್ಮೂರಾದ ಡಣಾಯಕನ ಕೆರೆಗೆ ಬಂದಾಗ ಈ ಘಟನೆ ನೆಡೆದಿತ್ತು ಎಂದು ಡಿ.ಎಂ. ತೋಟಯ್ಯನವರು ಹೇಳಿದ ಮಾತಿದು, ಅಂದು ಬರೆಯಲು ಪ್ರಾರಂಭಿಸಿದ ನಾನು ಇಂದಿಗೂ ವಿಭಿನ್ನ ರಂಗಗೀತೆಗಳನ್ನು ಬರೆಯ ಬಲ್ಲೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಹಾಗೆಯೇ ಕುವೆಂಪು, ಬೇಂದ್ರೆ, ಬೀಚಿ, ಶಿವರಾಮ ಕಾರಂತರ ಸಾಹಿತ್ಯವನ್ನು ಓದಿ ಅನುಸರಿಸಿ ರಂಗಗೀತೆಗಳನ್ನು ರಚಿಸಿದ್ದಾರೆ. ಇವರು ರಚಿಸಿದ ಅನೇಕ ರಂಗಗೀತೆಗಳನ್ನು ಶ್ರೀಮತಿ ಸುಭದ್ರಮ್ಮ ಮನ್ಸೂರು, ಕೆ.ನಾಗರತ್ನಮ್ಮ ಮುಂತಾದವರ ಒಳ್ಳೆಯ ಗಾಯಕಿಯರ ಕಂಠದಿಂದ ರಂಗಗೀತೆ ಹಾಡಾಗಿ ಹೊರಹೊಮ್ಮಿವೆ. ಇವರು ಎಷ್ಟೋ ಜನರಿಗೆ ರಂಗ ಗೀತೆಗಳನ್ನು ಬರೆದುಕೊಟ್ಟಿದ್ದು ಉಂಟು.

ಇವರು ತಮ್ಮದೇ ಆದ ಉತ್ತಮ ಶೈಲಿಯಲ್ಲಿ ರಂಗ ಗೀತೆಗಳನ್ನು ಬರೆದಿದ್ದಾರೆ. ಸಾಹಿತ್ಯವು ಅರ್ಥಗರ್ಭಿತವಾಗಿ ನವನವೀನವಾಗಿ ಬರೆಯುತ್ತಾರೆ, ಷಟ್ಪದಿ ಹಾಗೂ ಅಲಂಕಾರಗಳನ್ನು ಮೈಗೂಡಿಸಿಕೊಂಡು ಬರೆದಿದ್ದಾರೆ.

ಹೀಗೆ ಒಬ್ಬ ನಟರಾಗಿ, ಸಂಗೀತ,ನಿರ್ದೇಶಕರಾಗಿ, ನಾಟಕ ನಿರ್ದೇಶಕರಾಗಿ, ನೂರಕ್ಕೂ ಹೆಚ್ಚು ರಂಗಗೀತೆಗಳನ್ನು ಬರೆದು ಉತ್ತಮ ಕವಿಗಳಾಗಿ ಬಳ್ಳಾರಿ ಜಿಲ್ಲೆಯ ಕನ್ನಡ ರಂಗಭೂಮಿಗೆ ತಮ್ಮದೇ ಆದ ಸೇವೆಯನ್ನು ಸಲ್ಲಿಸಿದ್ದಾರೆ.

ಅಡಿಟಿಪ್ಪಣಿ

೦೧. ಡಾ.ಹೆಚ್.ಎ.ಪಾರ್ಶ್ವನಾಥ್, ರಂಗಲೋಕ, ೨೦೦೩, ಪುಟ-೮೨

೦೨. ಅದೇ, ಪುಟ-೮೩

೦೩. ಅದೇ, ಪುಟ-೮೪

೦೪. ರವೀಂದ್ರನಾಥ ಕೆ (ಸಂ), ಬಳ್ಳಾರಿ ಜಿಲ್ಲಾ ದರ್ಶನ, ೨೦೦೫, ಪುಟ-೧೬೭

೦೫. ದೊಡ್ಡನಗೌಡ ಕೆ. ನಾಟ್ಯಯೋಗಿ ಬಳ್ಳಾರಿ ರಾಘವ, ೧೯೭೫, ಪುಟ-೩,೪,೫,೬

೦೬. ರವೀಂದ್ರನಾಥ ಕೆ (ಸಂ), ಬಳ್ಳಾರಿ ಜಿಲ್ಲಾ ದರ್ಶನ, ೨೦೦೫, ಪುಟ-೧೬೯

೦೭. ಅದೇ, ಪುಟ-೧೬೯,೭೦

೦೮. ಮೃತ್ಯುಂಜಯ ಹೊರಿಕೇರಿ, ರಂಗ ವೃತಿರಂಗ, ೨೦೦೦, ಪುಟ-೫೧,೫೩

೦೯. ಅದೇ, ಪುಟ-೫೪,೫೫

೧೦. ಸಂದರ್ಶನ, ಬೆಳಗಲ್ ವೀರಣ್ಣ, ದಿ:೦೩.೦೯.೨೦೦೯, ಬಳ್ಳಾರಿ

೧೧. ರವೀಂದ್ರನಾಥ ಕೆ (ಸಂ), ಬಳ್ಳಾರಿ ಜಿಲ್ಲಾ ದರ್ಶನ, ೨೦೦೫, ಪುಟ-೧೭೦

೧೨. ಸುಜಾತ ಅಕ್ಕಿ, ಬಳ್ಳಾರಿ ಜಿಲ್ಲೆಯ ರಂಗನಟಿಯರ ಅಧ್ಯಯನ ಪಿಹೆಚ್.ಡಿ (ಅಪ್ರಕಟಿತ), ೨೦೦೪, ಪುಟ-೬೧

೧೩. ರವೀಂದ್ರನಾಥ ಕೆ (ಸಂ), ಬಳ್ಳಾರಿ ಜಿಲ್ಲಾ ದರ್ಶನ, ೨೦೦೫, ಪುಟ-೧೭೧,೧೭೨

೧೪. ಅದೇ, ಪುಟ-೧೭೨

೧೫. ಸುಜಾತ ಅಕ್ಕಿ, ಬಳ್ಳಾರಿ ಜಿಲ್ಲೆಯ ರಂಗನಟಿಯರ ಅಧ್ಯಯನ ಪಿಹೆಚ್.ಡಿ (ಅಪ್ರಕಟಿತ), ೨೦೦೪, ಪುಟ-೬೩

೧೬. ರವೀಂದ್ರನಾಥ ಕೆ (ಸಂ), ಬಳ್ಳಾರಿ ಜಿಲ್ಲಾ ದರ್ಶನ, ೨೦೦೫, ಪುಟ-೧೭೩

೧೭. ಸುಜಾತ ಅಕ್ಕಿ, ಬಳ್ಳಾರಿ ಜಿಲ್ಲೆಯ ರಂಗನಟಿಯರ ಅಧ್ಯಯನ ಪಿಹೆಚ್.ಡಿ (ಅಪ್ರಕಟಿತ), ೨೦೦೪, ಪುಟ-೬೪

೧೮. ರವೀಂದ್ರನಾಥ ಕೆ (ಸಂ), ಬಳ್ಳಾರಿ ಜಿಲ್ಲಾ ದರ್ಶನ, ೨೦೦೫, ಪುಟ-೧೭೩

೧೯. ಸುಜಾತ ಅಕ್ಕಿ, ಬಳ್ಳಾರಿ ಜಿಲ್ಲೆಯ ರಂಗನಟಿಯರ ಅಧ್ಯಯನ ಪಿಹೆಚ್.ಡಿ (ಅಪ್ರಕಟಿತ), ೨೦೦೪, ಪುಟ-೬೪,೬೫

೨೦. ಅದೇ, ಪುಟ-೬೬

೨೧. ಅದೇ, ಪುಟ-೬೭

೨೨. ಅದೇ, ಪುಟ-೬೭

೨೩. ರವೀಂದ್ರನಾಥ ಕೆ (ಸಂ), ಬಳ್ಳಾರಿ ಜಿಲ್ಲಾ ದರ್ಶನ, ೨೦೦೫, ಪುಟ-೧೭೪,೧೭೫

೨೪. ಅದೇ, ಪುಟ-೧೭೮

೨೫. ಅದೇ, ಪುಟ-೧೬೮

೨೬. ಸುಜಾತ ಅಕ್ಕಿ, ಬಳ್ಳಾರಿ ಜಿಲ್ಲೆಯ ರಂಗನಟಿಯರ ಅಧ್ಯಯನ ಪಿಹೆಚ್.ಡಿ (ಅಪ್ರಕಟಿತ), ೨೦೦೪, ಪುಟ-೭೨

೨೭. ಅದೇ, ಪುಟ-೭೩,೭೪

೨೮. ಸಿರಿಗೇರಿ ಯರಿಸ್ವಾಮಿ, ರಂಗಲಹರಿ, ೨೦೦೬, ಪುಟ-೨೬,೨೭

೨೯. ಸುಜಾತ ಅಕ್ಕಿ, ಬಳ್ಳಾರಿ ಜಿಲ್ಲೆಯ ರಂಗನಟಿಯರ ಅಧ್ಯಯನ ಪಿಹೆಚ್.ಡಿ (ಅಪ್ರಕಟಿತ), ೨೦೦೪, ಪುಟ-೭೭

೩೦. ರವೀಂದ್ರನಾಥ ಕೆ (ಸಂ), ಬಳ್ಳಾರಿ ಜಿಲ್ಲಾ ದರ್ಶನ, ೨೦೦೫, ಪುಟ-೧೭೭

೩೧. ಸುಜಾತ ಅಕ್ಕಿ, ಬಳ್ಳಾರಿ ಜಿಲ್ಲೆಯ ರಂಗನಟಿಯರ ಅಧ್ಯಯನ ಪಿಹೆಚ್.ಡಿ (ಅಪ್ರಕಟಿತ), ೨೦೦೪ ಪುಟ-೭೭,೭೮

೩೨. ಸುಜಾತ ಅಕ್ಕಿ, ಬಳ್ಳಾರಿ ಜಿಲ್ಲೆಯ ರಂಗನಟಿಯರ ಅಧ್ಯಯನ ಪಿಹೆಚ್.ಡಿ (ಅಪ್ರಕಟಿತ), ೨೦೦೪, ಪುಟ-೮೦

೩೩. ಸಂದರ್ಶನ: ಮ.ಬ.ಸೋಮಣ್ಣ, ಹೊಸಪೇಟೆ, ದಿ.೦೩.೦೮.೨೦೦೯

೩೪. ಸುಜಾತ ಅಕ್ಕಿ, ಬಳ್ಳಾರಿ ಜಿಲ್ಲೆಯ ರಂಗನಟಿಯರ ಅಧ್ಯಯನ, ೨೦೦೪, ಪುಟ-೧೦೯

೩೫. ರವೀಂದ್ರನಾಥ ಕೆ (ಸಂ), ಬಳ್ಳಾರಿ ಜಿಲ್ಲಾ ದರ್ಶನ, ೨೦೦೫, ಪುಟ-೧೩೫

೩೬. ಸುಜಾತ ಅಕ್ಕಿ, ಬಳ್ಳಾರಿ ಜಿಲ್ಲೆಯ ರಂಗನಟಿಯರ ಅಧ್ಯಯನ, ಪುಟ-೧೦೬,೧೦೮

೩೭. ಅದೇ, ಪುಟ-೧೦೯,೧೧೦

೩೮. ಅದೇ, ಪುಟ-೧೧೦,೧೧೨

೩೯. ರವೀಂದ್ರನಾಥ ಕೆ (ಸಂ), ಬಳ್ಳಾರಿ ಜಿಲ್ಲಾ ದರ್ಶನ, ೨೦೦೫, ಪುಟ-೧೩೪

೪೦. ಸುಜಾತ ಅಕ್ಕಿ, ಬಳ್ಳಾರಿ ಜಿಲ್ಲೆಯ ರಂಗನಟಿಯರ ಅಧ್ಯಯನ ಪಿಹೆಚ್.ಡಿ (ಅಪ್ರಕಟಿತ), ೨೦೦೪, ಪುಟ-೧೦೬

೪೧. ಡಾ. ಆರ್.ಬಿ.ದಿವಾಕರ್ ಹಾಗೂ ಡಾ.ಆರ್.ಬಿ.ಕುಮಾರ್, (ಸಂ) ಆರ್.ಭರಮಲಿಂಗಪ್ಪ ಮಾಸ್ತರರ ರಂಗಗೀತೆಗಳು, ೨೦೦೫, ಸಂಪಾದಕರ ನುಡಿ, ಪುಟ-xxiv

೪೨. ಅದೇ, ಪುಟ-೭

೪೩. ಅದೇ, ಪುಟ-೧೫೩

೪೪. ಅದೇ, ಪುಟ-೩೮

೪೫. ಅದೇ, ಪುಟ-೭೬

೪೬. ಅದೇ, ಸಂಪಾದಕರ ನುಡಿ, ಪುಟ-xxv, xxvi

ಅಧ್ಯಾಯ - ಮೂರು

ಬಳ್ಳಾರಿ ಜಿಲ್ಲೆಯ ರಂಗಗೀತೆಗಳು ಮತ್ತು ಸಂಗೀತ

೩.೧. ರಂಗಗೀತೆಗಳನ್ನು ಹಾಡಿದ ಪ್ರಮುಖ ಗಾಯಕ ನಟರು

೩.೨. ಬೇರೆ ಬೇರೆ ರಂಗಗೀತೆಗಳ ವಿಶಿಷ್ಟತೆಗಳು

೩.೨.೧. ಮೌಖಿಕ ರೂಪದ ರಂಗಗೀತೆಗಳು

೩.೨.೨. ಬರಹ ರೂಪದ ರಂಗಗೀತೆಗಳು

ಅಧ್ಯಾಯ - ಮೂರು

ಬಳ್ಳಾರಿ ಜಿಲ್ಲೆಯ ರಂಗಗೀತೆಗಳು ಮತ್ತು ಸಂಗೀತ

ನಾಟಕವು ಸಕಲ ಕಲೆಗಳ ಸಮಾವೇಶವುಳ್ಳ ಕಲೆ. ಅದರಲ್ಲಿ ವಿವಿಧ ಸಂಗೀತ ಪ್ರಕಾರಗಳೂ ಕೂಡಿರುತ್ತವೆ. ನಾಟಕಗಳು ಇಂದು ನರ್ತನದಿಂದ ಬಹುಮಟ್ಟಿಗೆ ಬಿಡುಗಡೆ ಹೊಂದಿದ್ದರೂ ಸಂಗೀತದಿಂದ ಸರಿದು ನಿಲ್ಲುವುದು ಅವುಗಳಿಗೆ ಅಸಾಧ್ಯವಾಗಿದೆ. ಸಂಗೀತವೂ ರಂಗ ಪ್ರದರ್ಶನದ ಒಂದು ಮಾರ್ಗ, ಒಂದು ಪ್ರಮುಖ ಮಾಧ್ಯಮ. ಸಂಗೀತವೆಂಬುದು ಒಂದು ಗಾರುಡಿ ವಿದ್ಯೆ. ರಂಗಭೂಮಿಯೊಂದಿಗೆ ಹುಟ್ಟಿಕೊಂಡು, ಭಾರತದ ಜನಜೀವನದಲ್ಲಿ ಹಿರಿದಾದ ಪಾತ್ರವನ್ನು ಸಂಗೀತವು ಹೊಂದಿದೆ. ನಮ್ಮ ಕಲೆಗೂ ಸಂಸ್ಕೃತಿಗೂ ಒಂದು ತುಂಬುಗುಣವನ್ನು ತಂದುಕೊಟ್ಟಿದೆ. ಸಂಗೀತವಿಲ್ಲದಿದ್ದರೆ ರಂಗ ಪ್ರಪಂಚಕ್ಕೆ ದೊಡ್ಡ ಕೊರತೆಯಾಗುತ್ತಿತ್ತು. ದಕ್ಷಿಣ ಭಾರತದಲ್ಲಂತೂ ಈ ಸಂಗೀತ ಸಂಪ್ರದಾಯವು ಬೇರೆ ಕಡೆಗಳಿಗಿಂತ ಹೆಚ್ಚು ಪ್ರಭಾವಯುತವಾಗಿ ಬೆಳೆದು ಉಳಿದುಕೊಂಡು ಬಂದಿದೆ.

ಭಾರತೀಯ ಸಂಗೀತವು ಕರ್ನಾಟಕ ಸಂಗೀತ ಹಾಗೂ ಹಿಂದುಸ್ತಾನಿ ಸಂಗೀತವೆಂದು ಎರಡು ಪ್ರವಾಹಗಳಲ್ಲಿ ಹರಿಯುತ್ತಿದೆ. ಡಾ.ಆರ್.ಎನ್.ಶ್ರೀಲತಾರವರು ತಮ್ಮ ಸಂಗೀತದಲ್ಲಿ ಮನೋಧರ್ಮ ಎಂಬ ಅಭಿನಂದನ ಗ್ರಂಥದಲ್ಲಿ (೧೯೮೩-ಪ್ರಕಟ) (ಪುಟ-೧೪೨) "ನಮ್ಮ ಭಾರತೀಯ ಸಂಗೀತದಲ್ಲಿ ಕರ್ನಾಟಕೀ ಅಥವಾ ದಕ್ಷಿಣಾದಿ ಸಂಗೀತ ಮತ್ತು ಹಿಂದುಸ್ತಾನೀ ಅಥವಾ ಉತ್ತರಾದಿ ಸಂಗೀತ ಎಂಬ ಎರಡು ಪ್ರಭೇದಗಳುಂಟು. ಎರಡು ಪ್ರಭೇದಗಳಾಗಿ ಕವಲೊಡೆದರೂ ಇವೆರಡಕ್ಕೂ ಮೂಲಾಧಾರಗಳು ಒಂದೇ. ಎಂಬ ಮಾತು ಉಲ್ಲೇಖನೀಯ. ಒಟ್ಟಿನಲ್ಲಿ ಹಿಂದುಸ್ತಾನೀ ಹಾಗೂ ಕರ್ನಾಟಕ ಸಂಗೀತಗಳೆರಡೂ ಒಂದೇ ವೃಕ್ಷದ ಎರಡು ಶಾಖೆಗಳಾಗಿದ್ದು, ಒಂದೇ ಮೂಲದಿಂದ ಅನ್ನಾಹಾರಗಳನ್ನು ಪಡೆದು ಬೆಳೆದಿವೆಯೆನ್ನಬಹುದು.

"ರಂಗಭೂಮಿಯ ಸಂಗೀತಕ್ಕೆ ಶಾಸ್ತ್ರೀಯ ಸಂಗೀತವೇ ಆಧಾರ. ಶಾಸ್ತ್ರೀಯ ಸಂಗೀತದಲ್ಲಿ ಹಂತಹಂತವಾಗಿ, ನಿಧಾನವಾಗಿ ರಸಾನುಭವ ಪಡೆಯುತ್ತ ಕೊನೆ (climax) ಮುಟ್ಟಬಹುದು. ಆದರೆ

[illegible]

[illegible]

[illegible]

[illegible]

[illegible]

[illegible]

ರಂಗಭೂಮಿ ಸಂಗೀತದಲ್ಲಿ ಹಾಗಲ್ಲ. ಇರುವ ಎರಡು ನಿಮಿಷ ಕಾಲಾವಕಾಶದಲ್ಲಿ ಕೊನೆ (Climax) ತಲುಪಬೇಕು. ಯಾವ ಹಾಡು ಯಾವ ರೀತಿ ಅಭಿವ್ಯಕ್ತವಾಗಬೇಕು, ಯಾವ ಸನ್ನಿವೇಶಕ್ಕೆ ಎಂಥ ಪರಿಣಾಮ ಮಾಡಬೇಕೋ ಅಂಥ ಉದ್ದೇಶವನ್ನು ಅಷ್ಟರಲ್ಲೇ ಸಾಧಿಸಬೇಕು. ಆದ್ದರಿಂದ ರಂಗಸಂಗೀತಕ್ಕೂ, ಶಾಸ್ತ್ರೀಯ ಸಂಗೀತಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಶಾಸ್ತ್ರೀಯ ಸಂಗೀತಕ್ಕೆ ಹೆಚ್ಚಿನ ಕಸರತ್ತು ತಿಳಿದು, ರಂಗಭೂಮಿಯಲ್ಲಿ ಸಂಗೀತವೇ ಪ್ರಧಾನವಲ್ಲ. ಅದೊಂದು ಸಾಧನ, ಸಂಗೀತದ ಮೂಲಕ ರಸಾನುಭವ ಸೃಷ್ಟಿಯಾಗಬೇಕು. ಇಂಥ ರಸಾನುಭವಕ್ಕೆ ಸಂಗೀತದ ಜೊತೆ ಸಾಹಿತ್ಯವೂ ಒಂದು ಭಾಗ. ಸಂಗೀತ ಆ ಸಾಹಿತ್ಯಕ್ಕೆ ಪುಷ್ಟಿಯಾಗಿ ಬರಬೇಕೇ ವಿನಃ ಧ್ವಂಸ ಮಾಡುವಂತಿರಬಾರದು. ರಂಗಭೂಮಿಯಲ್ಲಿ ಸಂಗೀತ ಹೀಗೆ ಪ್ರಯೋಗವಾಗಬೇಕು.”[೧] ಒಟ್ಟಿನಲ್ಲಿ ಶಾಸ್ತ್ರೀಯ ಸಂಗೀತ ಹಾಗೂ ರಂಗಭೂಮಿಯ ಸಂಗೀತಗಳ ಉದ್ದೇಶ ರಸಾನುಭವವೇ ಆದುದರಿಂದ ರಸಿಕರಿಗೆ ಎರಡೂ ಬೇಕು.

ಸಂಗೀತವನ್ನು ರಂಗದಿಂದ ಸಂಪೂರ್ಣವಾಗಿ ಓಡಿಸಲಾಗುವುದಿಲ್ಲ. ಆದರೆ ಎಷ್ಟು ಸ್ಥಾನಮಾನಗಳಿಗೆ ಅದು ಅರ್ಹವೋ ಅಷ್ಟನ್ನು ಮಾತ್ರ ನೀಡಬೇಕು. “ಹಾಗೆ ನೋಡಿದರೆ ಸಂಗೀತವನ್ನು ಗರುಡ ಸದಾಶಿವರಾಯರು ರಂಗದಿಂದ ಹೊಡೆದಟ್ಟಿದವರು. ಅವರು ಹೇಳುವಂತೆ ಸಂಗೀತ, ನಾಟಕದ ಕೈಯಾಳಾಗಿರಬೇಕು. ಬೇತಾಳವಾಗಿ ಬೆಳೆಯಬಾರದು. ಹಿತಮಿತವಾದ ರಂಗಸಂಗೀತ ನಾಟಕಕ್ಕೆ ಕಳೆಕೊಡುತ್ತದೆ. ನಾಟಕವೆಂದರೆ ಸಂಗೀತ ಕಛೇರಿಯಲ್ಲ, ನಾಟಕದ ಅಂಗಗಳಲ್ಲಿ ಸಂಗೀತ ಒಂದು. ಅಂಗವೇ ಮೈಯನ್ನು ನುಂಗುವಂತಾದರೆ ಅದನ್ನು ತುಂಡರಿಸಿ ಹತೋಟಿಯಲ್ಲಿ ಇಡಬೇಕೆಂಬುದು” ಗರುಡ ಸದಾಶಿವರಾಯರ ಅಭಿಪ್ರಾಯ. ಒಟ್ಟಿನಲ್ಲಿ, ಸಂಗೀತ, ರಂಗಭೂಮಿಗೆ ಅಲ್ಪವಾಗಿರಬೇಕು. ಇಲ್ಲವಾದಲ್ಲಿ ಅದು ಅಧೋಗತಿಗೆ ಎಡೆಮಾಡಿಕೊಡುತ್ತದೆ.

“ಉತ್ತರ ಕರ್ನಾಟಕದ ರಂಗಸಂಗೀತವೆಲ್ಲ ಮರಾಠಿ ಮೂಲದಿಂದ ಬಂದುದು ಎಂಬ ತಿಳುವಳಿಕೆ ಗಾಢವಾಗಿದೆ. ಇದು ತಪ್ಪು ಕಲ್ಪನೆ. ಎಷ್ಟೋ ಕನ್ನಡ ಧಾಟಿಗಳನ್ನು ಮರಾಠಿಗರು ತಮ್ಮದಾಗಿಸಿಕೊಂಡು ಆ ಮೇಲೆ ನಮಗೆ ನೀಡಿದ್ದಾರೆ. ನಮ್ಮ ಶ್ರೀಕೃಷ್ಣಪಾರಿಜಾತದಂತಹ ಬಯಲಾಟದ ಹಾಡುಗಳು, ಕರ್ನಾಟಕಿ ಸಂಗೀತದ ಕೀರ್ತನೆಗಳು ಮರಾಠಿ ದೀಕ್ಷೆ ಪಡೆದು ಜನಪ್ರಿಯ ಧಾಟಿಗಳೆನಿಸಿದವು. ಈ ಧಾಟಿಗಳನ್ನು ನಮ್ಮವರು ಆಸ್ಥೆಯಿಂದ ಸ್ವೀಕರಿಸಿದರು. ಇನ್ನೊಂದು ಮಹತ್ವದ ಸಂಗತಿಯೇನೆಂದರೆ, ಕನ್ನಡ ಮತ್ತು ಮರಾಠಿ ರಂಗಸಂಗೀತಕ್ಕೆ ಒಂದೇ ಮೂಲದ ಹಿಂದುಸ್ತಾನಿ ಸಂಗೀತದ ಚೀಜುಗಳು ಆಕರವಾಗಿರುವುದು. ಹಿಂದುಸ್ತಾನಿ ಸಂಗೀತದ ಅಭಿರುಚಿ ಅಂದಿನ ರಂಗಸಂಗೀತವನ್ನು ರೂಪಿಸಿತು.

ಗಾಯಕನಟರು ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ಪ್ರಚಲಿತವಿರುವ ಆಕರ್ಷಕ ಚೀಜುಗಳಿಗೆ ತಮ್ಮ ತಮ್ಮ ಭಾಷೆಗಳ ಸಾಹಿತ್ಯ ಜೋಡಿಸಿ (ಮರಾಠಿ, ಕನ್ನಡ) ಹಾಡುತ್ತಿದ್ದರು. ಅಂದು ನಾಟಕಗಳಿಗೆ ಹಾಡು ಬರೆಯುವುದೆಂದರೆ ಹಿಂದುಸ್ತಾನಿಯ ಚೀಜುಗಳ ಧಾಟಿಗೆ ಹೊಂದುವಂತೆ ಪದ ಜೋಡಣೆಯ ಕಾರ್ಯ ಅಷ್ಟೇ. ಹೀಗೆ ಹಿಂದುಸ್ತಾನಿ ಸಂಗೀತ ಮೂಲದಿಂದ ಮೂಡಿಬಂದ ಧಾಟಿಗಳು ಸ್ವಲ್ಪ

ಮುಂಚಿತವಾಗಿ ಮರಾಠಿಯಲ್ಲಿ ಜನಪ್ರಿಯವಾಗಿ ಅಲ್ಲಿಂದ ಕನ್ನಡಕ್ಕೆ ಬಂದವು. ಮೇಲ್ನೋಟಕ್ಕೆ ಇವು ಮರಾಠಿ ಧಾಟಿಗಳೆಂಬ ಭ್ರಮೆ ಹುಟ್ಟಿಸಿದವು. ಮರಾಠಿಗರಂತೆ ಕನ್ನಡಿಗರೂ ಚೀಜುಗಳ ಧಾಟಿಗಳನ್ನು ವಿಫುಲವಾಗಿ ರೂಢಿಗೆ ತಂದರು."[3] ಒಟ್ಟಾರೆಯಾಗಿ ಕನ್ನಡ ಚೀಜುಗಳ ಧಾಟಿಗಲನ್ನು ಮರಾಠಿಗರು ಅಳವಡಿಸಿಕೊಂಡಿದ್ದರು ಎಂದು ಗೊತ್ತಾಗುತ್ತದೆ.

ಮ.ಬ.ಸೋಮಣ್ಣನವರು ಹೇಳುವಂತೆ, 'ರಂಗಗೀತೆಗಳು ಮೊದಲು ಪೌರಾಣಿಕ ನಾಟಕದ ಕಥಾವಸ್ತುವನ್ನೊಳಗೊಂಡಿರುತ್ತಿದ್ದವು. ಮುಂದೆ ಬಯಲಾಟಗಳ ಹಾಡುಗಳೇ ರಂಗಗೀತೆಗಳಾದವು. ಕಥೆ ಬರೆಯುವಂತಹವರು ಹಾಡುಗಳನ್ನು ಬರೆಯುತ್ತಿದ್ದರು, ಕವಿಗಳೂ ಬರೆಯುತ್ತಿದ್ದರು. ಆ ಹಾಡುಗಳನ್ನು ತುಂಬಾ ಹೆಸರಾಂತ ಸಂಗೀತ ನಿರ್ದೇಶಕರು ಟ್ಯೂನ್ ಮಾಡಿ ಹಾಡಿಗೆ ಇಂತಹ ರಾಗ, ತಾಳ ಎಂಬುದನ್ನು ಪ್ರಕಟಿಸಿಬಿಡುತ್ತಿದ್ದರು. ಕವಿಗಳು ಉತ್ತರಾದಿ ಸಂಗೀತದ ಚೀಜುಗಳನ್ನು ಆಧರಿಸಿ ಹಾಡುಗಳನ್ನು ಬರೆಯುತ್ತಿದ್ದರು.

ಮುಂದೆ ರಂಗಗೀತೆಗಳು ಚೀಜುಗಳ ಆಧಾರಿತವಾಗಿ ಹುಟ್ಟಿದರೂ ಹಿಂದಿ, ಕನ್ನಡಸಿನಿಮಾ ಧಾಟಿಗಳನ್ನು ಅಳವಡಿಸಿಕೊಂಡು ಸಾಹಿತ್ಯ ರಚನೆ ಮಾಡತೊಡಗಿದರು. ನಂತರ ಮುಂದೆಬಂದ ಕವಿಗಳು ಸಿನಿಮಾ ಹಾಡುಗಳ ಧಾಟಿಗಳೇಕೆ ಅಳವಡಿಸಿಕೊಳ್ಳಬೇಕು ಹೊಸದಾಗಿ ಸ್ವತಂತ್ರವಾಗಿ ಟ್ಯೂನ್‌ಗಳನ್ನು ಬಳಸಿ ಸಾಹಿತ್ಯವನ್ನು ಬರೆಯಲಾರಂಭಿಸಿದರು ಎಂದು ಹೇಳಿದ ಮಾತು ಉಲ್ಲೇಖನೀಯ.' ಒಟ್ಟಾರೆ ಅಂದಿನ ಪ್ರೇಕ್ಷಕರ ಅಭಿರುಚಿಗೆ ತಕ್ಕಂತೆ ಕಾಲಬದಲಾದಂತೆ ಗೀತೆಗಳನ್ನು ರಚನೆ ಮಾಡತೊಡಗಿದರು ಎಂದು ಹೇಳಬಹುದು.

ಬೆಳಗಲ್ ವೀರಣ್ಣನವರು ಹೇಳುವಂತೆ, '೬೦ ವರ್ಷಗಳ ಹಿಂದೆ ರಂಗಗೀತೆಗಳು ಶುದ್ಧವಾದ ರಾಗಗಳಿಂದ ಕೂಡಿರುತ್ತಿದ್ದವು. ಅದು ಕರ್ನಾಟಕ ಸಂಗೀತವಾಗಿರಬಹುದು, ಹಿಂದುಸ್ತಾನಿ ಸಂಗೀತವಾಗಿರಬಹುದು. ಒಂದು ಯಮನ್‌ರಾಗ, ಆ ರಾಗಕ್ಕೆ ಅದೇ ಸಂಪೂರ್ಣವಾದ ರಾಗದೊಳಗೆ ಪ್ರಾರಂಭದಲ್ಲಿ ಮುಗಿಯುತ್ತಿತ್ತು. ಹೀಗೆ ರಂಗಗೀತೆಗಳ ಹಾಡುಗಳನ್ನು ಕವಿಗಳು ತಮ್ಮ ತಮ್ಮ ಪಾತ್ರಗಳಿಗನುಗುಣವಾಗಿರುವಂತಹ ಹಾಡುಗಳನ್ನು ಬರೆಯುತ್ತಿದ್ದರು. ಮುಂದೆ ನಿರ್ದೇಶಕರ, ನಟರ, ಕವಿಗಳ ಮುಖಾಂತರ ರಂಗಗೀತೆಗಳು ಪ್ರಚಲಿತವಾಗಿ ಬಂದವು ಎಂಬ ಮಾತು ಗಮನಾರ್ಹವಾದುದು' ಒಟ್ಟಾರೆ ರಂಗಗೀತೆಗಳನ್ನು ಹಲವು ಸಂಗೀತಗಳಲ್ಲಿ ಮೈಗೂಡಿಸಿಕೊಂಡು ಅನೇಕ ಕಲಾವಿದರ ಮೂಲಕ ಯಶಸ್ವಿಯಾಗಿ ಬಂದಿರುವುದನ್ನು ಕಾಣುತ್ತೇವೆ.

ಹೀಗೆ ರಂಗಭೂಮಿ ಎಂಬುದು ಒಂದು ಶಾಲೆ ಇದ್ದಂತೆ. ಅದು ವಿದ್ಯಾವಂತರಿಗೆ, ಅವಿದ್ಯಾವಂತರಿಗೆ ಎಲ್ಲರಿಗೂ ಶಿಕ್ಷಣವನ್ನು ನೀಡುತ್ತಾ ಹೋಗುತ್ತದೆ. ರಂಗಗೀತೆಗಳು ಕೂಡ ಹಾಗೆ ಸಂಗೀತದ ಜ್ಞಾನವನ್ನು ಮತ್ತು ಮತ್ತೊಂದು ಕಡೆ ಸಂಸ್ಕೃತಿಯನ್ನು ಬೆಳೆಸುತ್ತದೆ. ಹೀಗಾಗಿ ಬಳ್ಳಾರಿ ಜಿಲ್ಲೆಯಲ್ಲಿ ಕೂಡ ಅಪಾರ ರಂಗಗೀತೆಗಳು ಕಂಡುಬರುತ್ತವೆ. ಅವುಗಳನ್ನು ಹಾಡುವ ಎಷ್ಟೋ ವೃತ್ತಿಗಾಯಕ-ಗಾಯಕಿಯರು,

ಹವ್ಯಾಸಿಗರು ನಮ್ಮಲ್ಲಿ ಹಾಡಿ ಜಿಲ್ಲೆಯ ರಂಗಭೂಮಿಯನ್ನು ಉನ್ನತಮಟ್ಟಕ್ಕೇರಿಸಿದ್ದಾರೆ. ಅಂತವರನ್ನು ಪ್ರಮುಖವಾಗಿ ಅಧ್ಯಯನದ ದೃಷ್ಟಿಯಿಂದ ರಂಗಗೀತೆಗಳನ್ನು ಹಾಡಿದ ಪ್ರಮುಖ ಗಾಯಕ ನಟರೆಂದು ಆಯ್ಕೆ ಮಾಡಿಕೊಳ್ಳಲಾಗಿದೆ. ಹಾಗೆಯೇ ಬೇರೆ ಬೇರೆ ರಂಗಗೀತೆಗಳ ವಿಶಿಷ್ಟತೆಯ ಅಧ್ಯಾಯದಲ್ಲಿ ಶ್ರೀಮತಿ ಸುಭದ್ರಮ್ಮ ಮನ್ಸೂರುರವರನ್ನು ಹಾಗೂ ಶ್ರೀಮತಿ ಕೆ.ನಾಗರತ್ನಮ್ಮನವರು ಹಾಡಿದ ರಂಗಗೀತೆಗಳನ್ನು ಅನುಲಕ್ಷಿಸಿ ಚರ್ಚೆಮಾಡಲಾಗಿದೆ.

೩.೧. ರಂಗಗೀತೆಗಳನ್ನು ಹಾಡಿದ ಪ್ರಮುಖ ಗಾಯಕನಟರು

ನಾಟಕದ ಸಂಭಾಷಣೆಯ ಮಧ್ಯದಲ್ಲಿ ಪ್ರೇಕ್ಷಕರ ಮನರಂಜನೆಗೆ ದೃಷ್ಟಿಯಲ್ಲಿ, ತಮ್ಮ ಜೀವನೋಪಾಯ ಸಾಗಿಸಿಕೊಂಡು ಹೋಗುವಂತ ವೃತ್ತಿಗಾಯಕರು-ಹವ್ಯಾಸಿಗಾಯಕರು ಜಿಲ್ಲೆಯಲ್ಲಿ ಬಹಳ ಮಂದಿ ಗಾಯಕನಟರು ಸಿಗುತ್ತಾರೆ. ಅಂಥವರಲ್ಲಿ ಜೋಳದರಾಶಿ ದೊಡ್ಡನ ಗೌಡರು, ಬಳ್ಳಾರಿ ಲಲಿತಮ್ಮ ಕಂಪ್ಲಿವಾದಿರಾಜರು, ಆದವಾನಿ ಲಕ್ಷ್ಮೀದೇವಿ, ಸುಭದ್ರಮ್ಮ ಮನ್ಸೂರು, ಪ್ರಹ್ಲಾದ ಕಂಪ್ಲಿ, ಕೆ.ಜಂಬುನಾಥ, ಮ.ಬ.ಸೋಮಣ್ಣ, ಹೆಚ್.ಪಿ.ಕಲ್ಲಂಭಟ್ಟ, ರತ್ನಸೋಗಿ, ಗಡದಯ್ಯ, ಉಲವೆತ್ತಿ ಮೌನೇಶ್ವರ, ಬೂದಗುಂಪಿ ವೀರಭದ್ರಪ್ಪ, ಕುಡತಿನಿ ಪ್ರಕಾಶ್ ಮುಂತಾದವರೆಲ್ಲ ಪ್ರಮುಖರು.

೧. ಜೋಳದರಾಶಿ ದೊಡ್ಡನ ಗೌಡರು

ಜೋಳದರಾಶಿ ದೊಡ್ಡನಗೌಡರು ಯಶಸ್ವಿ ಗಮಕಿ ಮತ್ತು ನಟರಾಗಿ ಪ್ರಸಿದ್ಧಿ ಪಡೆದದ್ದು ನಿಜ. ಅವರ ಈ ಯಶಸ್ಸಿಗೆ ಕಾರಣವಾದುದು ಅವರ ಸಂಗೀತಜ್ಞಾನ ಮತ್ತು ಸಾಧನೆ ಇವರು ಗಮಕಿಗಳಾಗಿದ್ದರಿಂದ ಸುಶ್ರಾವ್ಯವಾಗಿ ಹಾಡುತ್ತಿದ್ದರು. ಅರ್ಥಸ್ಪಷ್ಟತೆ, ಭಾವಸ್ಫುರಣೆ, ತನ್ಮಯತೆ ಇವು ದೊಡ್ಡನ ಗೌಡರ ಹಾಡುಗಾರಿಕೆಯ ವಿಶಿಷ್ಟತೆ. ಶ್ರೀಯುತರು ನೂರಾರು ನಾಟಕಗಳಿಗೆ ತಮ್ಮ ಅಮೂಲ್ಯವಾದ ಕಂಠದಾನ ಮಾಡಿ ಕರ್ನಾಟಕ ಆಂಧ್ರ ಎಲ್ಲೆಡೆಯ ಮಹಾವ್ಯಕ್ತಿಗಳಿಂದ ತಮ್ಮ ಗಾನಭಕ್ತಿಗಳ ಪಾರವಶ್ಯದಿಂದ ಮನಮೆಚ್ಚಿಕೊಂಡಿದ್ದಾರೆ.

೨. ಬಳ್ಳಾರಿ ಲಲಿತಮ್ಮ

ಬಳ್ಳಾರಿ ಲಲಿತಮ್ಮ ಸಂಗೀತ, ನೃತ್ಯಕ್ಕೆ ಹೆಸರಾದವರು. ಚಿಕ್ಕಂದಿನಿಂದಲೇ ಸಂಗೀತದ ಬಗ್ಗೆ ಆಸಕ್ತಿ ಇದ್ದುದ್ದರಿಂದ ಹಾಗೂ ತಂದೆಯವರಾದ ಪಿಟೀಲು ತಿಮ್ಮಪ್ಪನವರ ಸಹಕಾರದೊಂದಿಗೆ ಗಾಯನ, ಸಂಗೀತ ಹಾಗೂ ಭರತನಾಟ್ಯಗಳಲ್ಲಿಯೂ ಪ್ರಾವಿಣ್ಯತೆಯನ್ನು ಸಾಧಿಸಲು ಇವರಿಗೆ ಸಾಧ್ಯವಾಯಿತು. ಸಾಮಾನ್ಯವಾಗಿ ರಂಗಭೂಮಿಯಿಂದ ಬೆಳ್ಳಿ ತೆರೆಗೆ ಸೇರಿ ಹೆಸರು ಮಾಡಿರುವವರೇ ಹೆಚ್ಚಾಗಿರುವ ಇಂದಿನ ದಿನಗಳಲ್ಲಿ ಬೆಳ್ಳಿ ತೆರೆಯಿಂದ ರಂಗಭೂಮಿ ಮರಳಿಬಂದು ಹೆಸರು ಮಾಡಿದ್ದ ದಿವಂಗತ ಲಲಿತಮ್ಮನವರಂತ ಕಲಾವಿದರು ಅತಿವಿರಳ. ಹೀಗೆ ಪೂರ್ವಜರ ಕಲೆಯಾದ ಹಾಡುಗಾರಿಕೆಯನ್ನೇ ತನ್ನ ವೃತ್ತಿಯನ್ನಾಗಿಸಿಕೊಂಡು ರಂಗಭೂಮಿಯ ಮೇಲೆ ರಂಗ ಗೀತೆಗಳನ್ನು ಹಾಡಿ ಕಲೆಯನ್ನು ಉಳಿಸಿ ಬೆಳೆಸಿದ್ದಾರೆ.

೩. ಕನಕಗಿರಿ ವಾದಿರಾಜರು

ತಮ್ಮ ಹಲ್ಲು ಕಳೆದುಕೊಂಡರು ಬೊಚ್ಚುಬಾಯಿ ಆದರೂ ಸ್ಪಷ್ಟವಾದ ಉಚ್ಚಾರ, ನಿರರ್ಗಳ ಹಾಡುವಿಕೆ ಹೊಸ ಅಲೆಯ ನಾಟಕ ತಂತ್ರ ಮೀರಿಸುವ ಛಲ ಕನಕಗಿರಿ ವಾದಿರಾಜರದು. ಕೀರ್ತನ ಕೇಸರಿ ದಾಸಚಾರ್ಯರು ತಂಗೋಡರ ಬಳಿ ಸಂಗೀತ ಕಲಿತ ಅವರು ಇಂದು ರಂಗಭೂಮಿ ಹಿನ್ನೆಲೆ ಸಂಗೀತದಲ್ಲಿ ದಾಖಲೆ ನಿರ್ಮಿಸಿದ್ದಾರೆ. ಇಲ್ಲಿಯವರೆಗೆ ಸುಮಾರು ಐದುನೂರು ರಂಗಗೀತೆಗಳನ್ನು ಬರೆದು ಹಾಡಿ, ಸಂಗೀತ ನಿರ್ದೇಶನ ಮಾಡಿದ್ದಾರೆ.

೪. ಆದವಾನಿ ಲಕ್ಷ್ಮೀದೇವಿ

ಬಳ್ಳಾರಿ ಗಡಿಭಾಗದ ಆದವಾನಿ ಲಕ್ಷ್ಮೀದೇವಿಯವರು ಬಳ್ಳಾರಿಯ ರಂಗಗೀತೆಗಳನ್ನು ಹಾಡಿದ ಗಾಯಕಿ-ನಟಿಯರಲ್ಲಿ ಒಬ್ಬರಾಗಿದ್ದಾರೆ. ಆದವಾನಿ ಲಕ್ಷ್ಮೀದೇವಿ ತನಗೆ ಬಲು ಪ್ರಿಯವಾದ ವಾದ್ಯ ಸಂಗೀತಗಳನ್ನು ಅಕ್ಕರೆಯಿಂದ ಕಲಿತು ಸೊಗಸಾಗಿ ಹಾಡುತ್ತಿದ್ದುದರಿಂದ ಅವರ ಅಭಿನಯ ರಂಗದ ಮೇಲೆ ಬರಲು ಕಾರಣವಾಯಿತು. ಪ್ರೇಕ್ಷಕರನ್ನು ರಂಜಿಸಲು ಹಾಡುವುದರಿಂದ ರಂಗ ಪ್ರವೇಶ ಮಾಡಿದ್ದೇ ಒಂದು ವಿಶೇಷ ಪ್ರಸಂಗವಾಯಿತು. ಕೊನೆಗೆ ತನ್ನ ನಟನೆಯೊಂದಿಗೆ ಹಿನ್ನೆಲೆಯಾಗಿ ಹಾಡುವ ನಂಟನ್ನು ಉಳಿಸಿಕೊಂಡು ಬಂದರು.

೫. ಸುಭದ್ರಮ್ಮ ಮನ್ಸೂರು

ಬಳ್ಳಾರಿ ಜಿಲ್ಲೆಯಲ್ಲಿ ರಂಗಗೀತೆಗಳನ್ನು ಹಾಡುವ ಗಾಯಕ ನಟಿಯರಲ್ಲಿ ಸುಭದ್ರಮ್ಮನವರು ಪ್ರಮುಖರಾಗಿದ್ದಾರೆ. ಸಂಗೀತ ಪ್ರಧಾನವಾದ ನಾಟಕಗಳ ಸಂದರ್ಭದಲ್ಲಿ ಹಾಡುಗಾರಿಕೆಯನ್ನು ಮುಖ್ಯ ಬಂಡವಾಳವನ್ನಾಗಿಸಿಕೊಂಡು ಸುಭದ್ರಮ್ಮ ಮನ್ಸೂರರು ಮಧುರವಾದ ಕಂಠ ಹಾಗೂ ವಂಶಸ್ಥರಿಂದ ದೊರೆತ ಸಂಗೀತದಿಂದ ಅಪಾರ ಜನಮನ್ನಣೆಗಳಿಸಿದವರು. ಒಳ್ಳೆಯ ಅಭಿನಯದ ಜೊತೆಗೆ ಹಾಡನ್ನು ಕೇಳಿಸಿ ಅಭಿಜಾತ ನಟಿ ಎನಿಸಿಕೊಂಡಿದ್ದಾರೆ. ಅವರು ಯಾವುದೇ ಸಭೆ ಸಮಾರಂಭಕ್ಕೆ ಹೋದರೂ ಅಲ್ಲಿ 'ಬೆಟ್ಟದಾ ಮೇಲೊಂದು ಮನೆಯ ಮಾಡಿ...' ಎಂಬ ವಚನದ ಸಾಲುಗಳನ್ನು ಸುಶ್ರಾವ್ಯವಾಗಿ ಹಾಡಿ ಜನಮನ್ನಣೆಗೆ ಪ್ರಸಿದ್ಧಿ ಪಡೆದಿದ್ದಾರೆ. ಸಾಕಷ್ಟು ನಾಟಕ ಕಂಪನಿಗಳಲ್ಲಿಯೂ ತರಬೇತಿ ಪಡೆದು ಹಲವಾರು ಹಳ್ಳಿಗಳಲ್ಲಿಯೂ ಕಾರ್ಯ ನಿರ್ವಹಿಸಿದ ಸುಭದ್ರಮ್ಮನವರು ಉತ್ತಮ ಹಿನ್ನೆಲೆ ಗಾಯಕಿಯಾಗಿ, ರಂಗಗೀತೆಗಳ ಹಾಡುಗಾರಿಕೆಯಲ್ಲಿ ಪ್ರಸಿದ್ಧಿ ಪಡೆದು ಬಳ್ಳಾರಿ ಜಿಲ್ಲೆಯ 'ರಂಗಕೋಗಿಲೆ' ಎಂದೇ ಹೆಸರಾಗಿದ್ದಾರೆ.

೬. ಪ್ರಹ್ಲಾದ ಕಂಪ್ಲಿ

ಬಳ್ಳಾರಿ ಜಿಲ್ಲೆಯ ರಂಗಗೀತೆಗಳ ಗಾಯಕ ನಟರಲ್ಲಿ ಪ್ರಹ್ಲಾದ ಕಂಪ್ಲಿಯವರು ಒಬ್ಬರಾಗಿದ್ದಾರೆ. ಮಧುರ ಕಂಠದಲ್ಲಿ ರಂಗಗೀತೆಗಳನ್ನು, ಚಲನಚಿತ್ರ ಗೀತೆಗಳನ್ನು ಹಾಡುತ್ತಾರೆ. ಅವರ ಕಂಠ ಬಾಲಸುಬ್ರಮಣ್ಯಂನಂತಿರುವುದರಿಂದ ಪ್ರಹ್ಲಾದರಿಗೆ 'ಜ್ಯೂನಿಯರ್ ಬಾಲಸುಬ್ರಮಣ್ಯಂ' ಎಂದೇ

ಕರೆಯುತ್ತಾರೆ. ಶ್ರೀಯುತರು ಕನ್ನಡ ಹಾಗೂ ಹಿಂದಿ ಭಾಷೆಗಳೆರಡರಲ್ಲೂ ಚೆನ್ನಾಗಿ ಹಾಡಬಲ್ಲರು ಬಾಲ್ಯದಿಂದಲೇ ಹಾಡುಗಳನ್ನು ಹಾಡುವ ಹವ್ಯಾಸವನ್ನು ರೂಢಿಸಿಕೊಂಡಿರುವ ಇವರು ಕಾಲೇಜು ವ್ಯಾಸಂಗ ಮಾಡುತ್ತಿದ್ದಾಗ ಬಹುರಂಜನೀಯವಾಗಿ ಹಾಡಿ ಅನೇಕ ಬಹುಮಾನಗಳನ್ನು ಪಡೆದಿದ್ದಾರೆ.

ವಂಶದ ಹಿರಿಯರೆಲ್ಲರೂ ಕಲಾವಂತರಾಗಿದ್ದರಿಂದ ಕಲೆಯು ಪ್ರಹ್ಲಾದರಿಗೆ ವಂಶಪಾರಂಪರ್ಯವಾಗಿ ಹರಿದು ಬಂದಿದೆ. ಅನೇಕ ವೃತ್ತಿ ಹಾಗೂ ಹವ್ಯಾಸಿ ನಾಟಕ ಸಂಸ್ಥೆಗಳಿಗೆ ನೂರಾರು ರಂಗಗೀತೆಗಳನ್ನು ರಚಿಸಿಕೊಟ್ಟು ಹಾಡಿದ್ದಾರೆ. ಇವರ ಅನೇಕ ಹಾಡುಗಳು ರೇಡಿಯೋದಲ್ಲಿಯೂ ಪ್ರಸಾರವಾಗಿವೆ.

೭. ಕೆ.ಜಂಬುನಾಥ

ಬಳ್ಳಾರಿ ಜಿಲ್ಲೆಯ ರಂಗಗೀತೆಗಳನ್ನು ಹಾಡಿದ ಗಾಯಕ ನಟರಲ್ಲಿ ಕೆ.ಜಂಬುನಾಥರು ಒಬ್ಬರು. ಕರ್ನಾಟಕ ಶಾಸ್ತ್ರೀಯ ಸಂಗೀತ ಕಲಿತವರು. ಬಾಲ್ಯದಿಂದಲೂ ಸಂಗೀತದ ಗೀಳು ಅಂಟಿಸಿಕೊಂಡವರು. ಇವರ ಮಧುರ ಕಂಠದ ಕಾರಣದಿಂದ ಇವರ ಪಾತ್ರಗಳಿಗೆ ಹಾಡುಗಳು ಇರಲೇಬೇಕು. ತಾಯಿಯವರಿಂದ ಸಂಗೀತ ಜ್ಞಾನ ಪಡೆದ ಇವರು ಕರ್ನಾಟಕ ಶಾಸ್ತ್ರೀಯ ಸಂಗೀತ ಕಲಿತು ನಂತರದಲ್ಲಿ ಹಿಂದೂಸ್ತಾನಿ ಸಂಗೀತವನ್ನು ಅಭ್ಯಸಿಸಿ ಶಾಸ್ತ್ರೋಕ್ತವಾಗಿ ಹಾಡಲು ಕಲಿತು ನೂರಾರು ನಾಟಕಗಳಿಗೆ ಹಿನ್ನೆಲೆಗಾಯನ ಹಾಡಿದ್ದಾರೆ. ಜೊತೆಗೆ ರಂಗಗೀತೆಗಳನ್ನೂ ಸಹ ಹಾಡಿದ್ದಾರೆ.

೮. ಮ.ಬ.ಸೋಮಣ್ಣ

ಮ.ಬ.ಸೋಮಣ್ಣನವರು ಉತ್ತಮ ನಟರಾಗಿ, ಉತ್ತಮ ಸಂಸ್ಕಾರದಿಂದ ಬೆಳೆದ ಇವರು ಗಾಯಕರೂ, ನಾಟಕಕಾರರಾಗಿ ಮೆರೆದವರು. ಇವರು ನಾಲ್ಕು ನೂರಕ್ಕೂ ಹೆಚ್ಚು ರಂಗಗೀತೆಗಳನ್ನು ರಚಿಸಿದ್ದಾರೆ. ಇವರ ಅನೇಕ ಹಾಡುಗಳು ರೇಡಿಯೋದಲ್ಲಿ ಪ್ರಸಾರವಾಗಿವೆ. ರಂಗಗೀತೆಗಳ ಹಾಡುಗಾರರಲ್ಲಿ ಒಬ್ಬರಾಗಿದ್ದಾರೆ.

೯. ಹೆಚ್.ಪಿ.ಕಲ್ಲಂಭಟ್ಟ

"ಹಾಡುಗಾರಿಕೆ, ರಾಗಸಂಯೋಜನೆ, ಸಂಗೀತ ಸಂಯೋಜನೆಯಲ್ಲಿ ಪಳಗುತ್ತ ಬಂದಿರುವ ಕಲ್ಲಂಭಟ್ಟರ ಸಾಧನೆ ಹಲವು. ಅವರು ಭಕ್ತಿಗೀತೆ, ಭಾವಗೀತೆ ಹಾಗೂ ರಂಗಗೀತೆಗಳ ಸಮನ್ವಯಕಾರ, ಮನೆಯಲ್ಲಿರುವ ಆರೇಳು ಜನರೆಲ್ಲರೂ ಸಂಗೀತಗಾರರೇ. ಇವರಾರೂ ಸಂಗೀತವನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡಿದವರಲ್ಲ ಇವರಿಗೆ ಸಂಗೀತ ಹಾಗೂ ಹಾಡುಗಾರಿಕೆ ತಮ್ಮಿಂದಲೇ ತಾವೇ ಸಂಗೀತದಲ್ಲಿ ತೊಡಗಿಸಿಕೊಂಡವರು. ಹಾಡುಗಾರಿಕೆಯಲ್ಲಿ ಭೀಮಸೇನ ಜೋಷಿಯಂತೆ ಕಲ್ಲಂಭಟ್ಟರು ಪ್ರಸಿದ್ಧರಾದವರಾಗಿದ್ದಾರೆ.

೧೦. ರತ್ನಸೋಗಿ

ಇಪ್ಪತ್ತೆರಡು ವರ್ಷಗಳ ರಂಗಭೂಮಿಯ ಸೇವೆಯಲ್ಲಿ ಅಪಾರ ಅನುಭವ ಹಾಗೂ ಅಭಿನಯ, ಕಲೆ ಗಳಿಸಿರುವ ರತ್ನ ಸೋಗಿಯವರು ಉತ್ತಮ ಗಾಯಕ ನಟಿಯರಲ್ಲಿ ಒಬ್ಬರಾಗಿದ್ದಾರೆ. ಇವರು

ರಂಗಗೀತೆಗಳನ್ನು ತಮ್ಮ ಕಂಚಿನ ಕಂಠದಿಂದ ಹಾಡಬಲ್ಲವರು. ರತ್ನನ ಕನ್ನಡ ಪದಗಳನ್ನು, ದಾಸರ ಹಾಗೂ ಶರಣರ ವಚನಗಳನ್ನು ಸುಶ್ರಾವ್ಯವಾಗಿ ಹಾಡಬಲ್ಲವರು. ಬಾನುಲಿ ಕಲಾವಿದೆಯಾಗಿ ಅನೇಕ ರಂಗಗೀತೆ ಕಾರ್ಯಕ್ರಮ ನೀಡಿದ್ದಾರೆ.

೧೧. ಗಡದಯ್ಯ

ಸುಮಾರು ೨೦೦ ನಾಟಕಗಳಲ್ಲಿ ಅಭಿನಯಿಸಿ ಐವತ್ತಕ್ಕೂ ಹೆಚ್ಚು ನಾಟಕಗಳಿಗೆ ಹಿನ್ನೆಲೆ ಗಾಯನ ಗಡದಯ್ಯನವರು ನೀಡಿದ್ದಾರೆ. ಕ್ರಮಬದ್ಧವಾಗಿ ಸಂಗೀತ ಕಲಿಯದೇ ಇದ್ದರೂ ಅವರಿಗೆ ಹಲವಾರು ರಾಗಗಳ ಪರಿಚಯವಿದೆ. ಮಾಲಕೌನ್ಸ್, ತಿಲಂಗ, ಚಾಂದ್, ಬಿಹಾಗ್, ಅಸಿವೇರಾ ಇತ್ಯಾದಿ ಅವರು ಹೆಚ್ಚಾಗಿ ಅಲಪ್ ಮತ್ತು ಬಯತ್ ಎನ್ನುವ ರಾಗದಲ್ಲಿ ಹಾಡಿ ಪ್ರೇಕ್ಷಕರ ಮನವನ್ನು ಗೆದ್ದು ಉತ್ತಮ ಗಾಯಕ ನಟರೆನಿಸಿಕೊಂಡಿದ್ದಾರೆ.

೧೨. ಉಲವೆತ್ತಿ ಮೌನೇಶ್ವರ

ಉಲವೆತ್ತಿ ಮೌನೇಶ್ವರ ಸಕಲ ಕಲೆಯ ಪ್ರವೀಣರಾಗಿದ್ದಾರೆ. ಭಕ್ತಿಗೀತೆ, ಭಾವಗೀತೆ, ಜಾನಪದ ಗೀತೆ, ದೇಶಭಕ್ತಿ ಗೀತೆ ಹೀಗೆ ಎರಡುನೂರಕ್ಕೂ ಹೆಚ್ಚಿನ ಗೀತೆಗಳನ್ನು ರಚಿಸಿ ರಾಗ ಸಂಯೋಜಿಸಿದ್ದಾರೆ. ಸುಂದರವಾಗಿ ಹಾಡುವ ಕಲೆಯನ್ನು ಮೈಗೂಡಿಸಿಕೊಂಡು ರಂಗಗೀತೆಗಳನ್ನು ಹಾಡಿ ಪ್ರೇಕ್ಷಕರನ್ನು ಆಕರ್ಷಿಸಿದ್ದಾರೆ.

ಹಾಗೆಯೇ ಬೂದಗುಂಪಿ ವೀರಭದ್ರಪ್ಪ ಹಾಗೂ ಎಸ್.ಎಂ.ರುದ್ರಯಸ್ವಾಮಿ ಉಲವೆತ್ತಿ ಭಾಗದಲ್ಲಿ ರಂಗಗೀತೆಗಳಿಗಾಗಿಯೇ ಹೆಸರಾಗಿದ್ದಾರೆ.

೧೩. ಕುಡತಿನಿ ಪ್ರಕಾಶ

೧೯೮೫ರಿಂದ ರಂಗಭೂಮಿಯ ಹಿನ್ನೆಲೆ ಗಾಯಕರಾಗಿ ಕುಡತಿನಿ ಪ್ರಕಾಶರು ಬೆಳಕಿಗೆ ಬಂದರು. ರಾಯಚೂರು, ಬಿಜಾಪುರ, ಬಳ್ಳಾರಿ ಜಿಲ್ಲೆ ಹಾಗೂ ಆಂಧ್ರದ ಹೊರನಾಡುಗಳಲ್ಲಿಯೂ ಸಂಚರಿಸಿ ಖ್ಯಾತಿ ಪಡೆದಿದ್ದಾರೆ. 'ಭಾವನಾತ್ಮಕ ಗಾಯಕ' ಎಂಬ ಬಿರುದು ಪಡೆದು ಸನ್ಮಾನಿತರಾಗಿದ್ದಾರೆ."[೩]

ಹೀಗೆ ಎಷ್ಟೋ ಜನ ಗಾಯಕನಟರು ನಮ್ಮಲ್ಲಿ ಹೆಚ್ಚಾಗಿ ಸಿಗುತ್ತಾರೆ. ಆದರೂ ಇನ್ನೂ ಎಷ್ಟೋ ಜನ ಈ ತರಹದ ಕಲಾವಿದರು ಎಲೆಮರೆಕಾಯಿಯಂತೆ ಇದ್ದಾರೆ. ಅಂತವರನ್ನು ಹೊರ ತರುವುದು ಪ್ರತಿಯೊಬ್ಬ ಸಂಶೋಧಕನ ಆದ್ಯ ಕರ್ತವ್ಯ. ಹೀಗಾಗಿ ಇಷ್ಟು ಜನ ನಮ್ಮ ಬಳ್ಳಾರಿ ಜಿಲ್ಲೆಯ ರಂಗಭೂಮಿಯಲ್ಲಿ ಹಾಡುವಂತಹ ಗಾಯಕ ನಟರಾಗಿದ್ದಾರೆ.

೩.೨. ಬೇರೆ ಬೇರೆ ರಂಗಗೀತೆಗಳ ವಿಶಿಷ್ಟತೆಗಳು

ಬಳ್ಳಾರಿ ಜಿಲ್ಲೆಯಲ್ಲಿ ಅಪಾರವಾದ ರಂಗಗೀತೆಗಳು ಸಿಗುತ್ತವೆ. ಅದರಲ್ಲಿ ಎಷ್ಟೋ ಜನ ರಂಗಕವಿಗಳು ರಂಗಗೀತೆಗಳನ್ನು ಸಂಗ್ರಹ ರೂಪದಲ್ಲಿ ಇಟ್ಟುಕೊಳ್ಳದೇ ಇರುವುದು ಒಂದು ದುರಾದೃಷ್ಟಕರ ಸಂಗತಿ. ಮತ್ತೆ ಕೆಲ ಬುದ್ಧಿ ಜೀವಿ ರಂಗಕವಿಗಳು ರಂಗಗೀತೆಗಳನ್ನು ನಾಟಕಗಳಿಗೆ ಬರೆದು ಪ್ರಯೋಗವಾದ ನಂತರ ಅವುಗಳನ್ನು ತಮ್ಮಲ್ಲಿ ಶೇಖರಿಸಿಟ್ಟುಕೊಂಡಿರುವುದು ಕಾಣುತ್ತೇವೆ.

ಪ್ರಸ್ತುತ ಈ ಅಧ್ಯಯನದ ದೃಷ್ಟಿಯಿಂದ ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚಾಗಿ ಪೌರಾಣಿಕ ವಸ್ತುವುಳ್ಳ ಅನೇಕ ನಾಟಕಗಳನ್ನು ಆಡಿರುವುದು ಕಂಡುಬರುತ್ತವೆ. ಈ ನಾಟಕಗಳಲ್ಲಿ ಕಂಡುಬರುವ ರಂಗಗೀತೆಗಳನ್ನು ಈ ರೀತಿಯಾಗಿ ವರ್ಗೀಕರಿಸಿಕೊಂಡು ಅಧ್ಯಯನದಲ್ಲಿ ಚರ್ಚೆ ಮಾಡಲಾಗಿದೆ.

೧. ಮೌಖಿಕ ರೂಪದ ರಂಗಗೀತೆಗಳು

೨. ಬರಹ ರೂಪದ ರಂಗಗೀತೆಗಳು

೩.೨.೧. ಮೌಖಿಕ ರೂಪದ ರಂಗಗೀತೆಗಳು

ಬಳ್ಳಾರಿ ಜಿಲ್ಲೆಯಲ್ಲಿ ಕಂಡು ಬರುವ ಪೌರಾಣಿಕ ಹವ್ಯಾಸಿ ರಂಗಭೂಮಿ ರಂಗಗೀತೆಗಳು ಅಪಾರ. ಅವುಗಳನ್ನು ವೃತ್ತಿ ಹಾಗೂ ಹವ್ಯಾಸಿ ಗಾಯಕ ನಟ ನಟಿಯರು ಹಾಡುವುದು ಉಂಟು. ಹೀಗಾಗಿ ಒಳ್ಳೆಯ ಗಾಯಕರ ಕಂಠದಿಂದ ರಂಗಗೀತೆಗಳು ಹಾಡಾಗಿ ಹೊರಹೊಮ್ಮಿದಾಗ ಸಿಗುವ ಆನಂದವೇ ಬೇರೆ. ರಂಗಸಂಗೀತಗಾರರು ಸಂಯೋಜಿಸಿದಂತೆ ಹಾಡುವ ಗಾಯಕರು, ಸ್ವತಃ ತಾವೇ ರೂಢಿಸಿಕೊಂಡು ಹಾಡುವ ಗಾಯಕರು ಹೇರಳವಾಗಿ ಕಂಡು ಬರುತ್ತಾರೆ.

ಪ್ರಸ್ತುತ ಅಧ್ಯಾಯದಲ್ಲಿ ಶ್ರೀಮತಿ ಸುಭದ್ರಮ್ಮ ಮನ್ಸೂರು ಹಾಗೂ ಕೆ.ನಾಗರತ್ನಮ್ಮನವರು ಹಾಡಿದ ರಂಗಗೀತೆಗಳನ್ನು ಸಂದರ್ಶನದ ಸಂದರ್ಭದಲ್ಲಿ ಕಂಡಂತಹ ಆಂಗಿಕ ಸ್ವರೂಪದ ಅಂಶಗಳನ್ನು ನಿರೂಪಿಸಲಾಗಿದೆ. ಹೀಗೆ ಮೌಖಿಕ ರೂಪದ ರಂಗಗೀತೆಗಳಾಗಿ ಅಧ್ಯಯನದ ತೆಕ್ಕೆಗೆ ತೆಗೆದುಕೊಳ್ಳಲಾಗಿದೆ.

ಶ್ರೀಮತಿ ಸುಭದ್ರಮ್ಮ ಮನ್ಸೂರು

ಬಳ್ಳಾರಿ ಜಿಲ್ಲೆಯ ರಂಗಕೋಗಿಲೆ ಎಂದೇ ಪ್ರಸಿದ್ಧಿ ಪಡೆದಿರುವ ಶ್ರೀಮತಿ ಸುಭದ್ರಮ್ಮ ಮನ್ಸೂರುರವರು. ಹಾಡುಗಾರಿಕೆಯಲ್ಲಿ ರಂಗಗೀತೆಗಳನ್ನು ಪ್ರೇಕ್ಷಕರ ಮನಮುಟ್ಟುವಂತೆ ಹಾಡಿದ್ದಾರೆ. ಇಲ್ಲಿ ಮುಖ್ಯವಾಗಿ ಭಕ್ತಿಗೀತೆ ಪ್ರಣಯದ ಗೀತೆ, ಶೋಕಗೀತೆ, ಶೃಂಗಾರದ ಗೀತೆ ಹಾಡಿರುವುದು ಕಾಣುತ್ತೇವೆ. ಹೀಗೆ ವಿಭಿನ್ನ ರೀತಿಯ ಪೌರಾಣಿಕ ನಾಟಕಗಳಲ್ಲಿ ಕಂಡುಬರುವ ಗೀತೆಗಳನ್ನು ಸಂದರ್ಶನದ ಸಮಯದಲ್ಲಿ ಕಂಡುಕೊಂಡ ಭಿನ್ನವಾದ ಆಂಗಿಕ ಚಲನ ವಲಯಗಳನ್ನು ತಿಳಿಸುವುದಾಗಿದೆ.

ಭಕ್ತಿಗೀತೆ

ಯಾವುದೇ ನಾಟಕದಲ್ಲಿ ಯಾರೇ ಗಾಯಕ ಗಾಯಕಿಯರು ಭಕ್ತಿ ರೂಪದ ಹಾಡುವುದನ್ನು ಕಾಣುತ್ತೇವೆ. ಇಲ್ಲಿ ಸುಭದ್ರಮ್ಮನವರು ಭಕ್ತಿರಸದ ಗೀತೆಯನ್ನು ಮೊದಲಿಗೆ ಕೈ ಮುಗಿದುಕೊಂಡು ಧ್ಯಾನರೂಪದಲ್ಲಿ ಈ ಹಾಡು ಹಾಡಲಾರಂಭಿಸಿದರು. ಇಲ್ಲಿ ಅವರ ದೇಹದ ಆಂಗಿಕ ಚಲನವಲನಗಳು ಗಂಭೀರತೆಯಿಂದ ಕೂಡಿದ್ದನ್ನು ಕಾಣಬಹುದು. ಅವರಾಡಿದ ಪ್ರಮುಖ ಪ್ರಾರ್ಥನೆ ಗೀತೆ / ಭಕ್ತಿಗೀತೆ ಹೀಗಿದೆ.

"ಶುಭಕರ ಶಿವ ಮಲ್ಲಿಕಾರ್ಜುನ ಘನ
ಶ್ರೀ ಶೈಲನಾಥ ಪೊರೆಯೊ ವರದಾತ ಶಾಂತಿಮನ"

[illegible]

ಎಂಬ ಹಾಡು ಪ್ರಸಿದ್ಧಿ ಪಡೆದ ಹಾಡಂತೆ. ಈ ಹಾಡನ್ನು ಹಾಡುವಾಗ ಸಂಪೂರ್ಣವಾಗಿ ಧ್ಯಾನ ತಪ್ತರಾಗಿ ಕಣ್ಣು ಮುಚ್ಚಿಕೊಂಡು ಹಾಡುವಾಗ ಮೈಮನ ನವಿರೇಳಿಸುತ್ತಿತ್ತು, ಅಷ್ಟು ತಲ್ಲೀನರಾಗಿ ಹಾಡುತ್ತಿದ್ದರು.

ಪ್ರೀತಿ, ಪ್ರೇಮ, ಪ್ರಣಯದ ರಂಗಗೀತೆ

ಇವರು ಅನೇಕ ನಾಟಕ ಕಂಪನಿಗಳಲ್ಲಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಇಂತಹ ಹಾಡುಗಳನ್ನು ತಮ್ಮ ಯೌವ್ವನದ ವಯಸ್ಸಿನಲ್ಲಿ ಅನೇಕ ರಂಗಗೀತೆಗಳನ್ನು ಹಾಡಿರುವುದು ಉಂಟು. ಪೌರಾಣಿಕ ನಾಟಕಗಳಲ್ಲಿ ಹಾಡಿನ ಹಾಡನ್ನು ಅಧ್ಯಯನಕಾರನ ಮುಂದೆ ಹಾಡುವಾಗ ಯಕ್ಷಲೋಕವೇ ಕಂಡುಬರುವಂತಿತ್ತು. ಅನೇಕ ಪೌರಾಣಿಕ ನಾಟಕಗಳಲ್ಲಿ ಒಬ್ಬ ಗಂಡು, ಹೆಣ್ಣು ಪರಸ್ಪರ ಕೂಡಿ ಹಾಡುವ ರಂಗಗೀತೆಯನ್ನು ಈ ರೀತಿಯಾಗಿ ಹಾಡಿದರು.

"ಪ್ರಿಯಾ... ಓ ಪ್ರಿಯಾ

ಪ್ರಿಯಾ ಪ್ರಿಯಾ ರಸಿಕರಾಜ ಬಾ"

ಎಂದು ಹಾಡುವಾಗ ರಂಗಭೂಮಿಯಲ್ಲಿ ಇನ್ನೆಷ್ಟರ ಮಟ್ಟಿಗೆ ಇವರು ಹಾಡಿದ್ದಾರೆಂಬುದು ಈ ಹಾಡಿನ ಮೂಲಕ ತಿಳಿಯಿತು. ಅವರ ದೇಹದ ಚಲನವಲನ ಹಾಗೆಯೇ ನಡುಕ ಹುಟ್ಟಿಸಿ ಹೇಳುವ ಶಾರೀರವೂ ಕೂಡ ಅಷ್ಟೇ ಸ್ಪಷ್ಟವಾಗಿ ಎದ್ದು ಕಾಣುತ್ತಿತ್ತು. ಕುಂತಲ್ಲೇ ನಟನೆಯ ಮೂಲಕ ವ್ಯಕ್ತಪಡಿಸಿದ ಇವರು ಶ್ರೇಷ್ಠ ಗಾಯಕ ನಟಿಯರಲ್ಲಿ ಪ್ರಮುಖ ಕಲಾವಿದೆ ಎಂದು ಗೋಚರವಾಗುತ್ತದೆ.

ಶೋಕಗೀತೆ

ಪೌರಾಣಿಕ ನಾಟಕದಲ್ಲಿ ಪ್ರಮುಖವಾಗಿ ಪ್ರೇಕ್ಷಕರನ್ನು ಮನಕರಗುವಂತೆ ಹಾಡುವ ಹಾಡೇ ಶೋಕಗೀತೆ. ಈ ಹಾಡನ್ನು ಒಂದು ನಾಟಕದ ಸನ್ನಿವೇಶವನ್ನು ತಿಳಿಸಿ ಹೇಳಲು ಪ್ರಾರಂಭಿಸಿದ ಇವರು ರಕ್ತರಾತ್ರಿ ನಾಟಕದಲ್ಲಿ ಉತ್ತರೆಯು ತನ್ನ ಗಂಡನನ್ನು ಕಳೆದುಕೊಂಡು ಹೇಳುವ ಹಾಡು ಎಂದು ತಕ್ಷಣವೇ ಅವರು ಶೋಕತಪ್ತರಾಗಿ "ಇಂತಿದೆ ಜನುಮದ ಭೋಗ ಆ ಚಿತ್ತಾರ ವಿಧವೆಯುರದಿ ಅಮ್ಮಮ್ಮ ಘೋರ" ಎಂಬ ಶೋಕಗೀತೆಯನ್ನು ಹಾಡುತ್ತಾ ಅಳುವಂತೆ, ಪರಿತಪಿಸುತ್ತಾ ಹೆಣ್ಣಿನ ಘೋರವಾದ ದುಃಖವನ್ನು ಈ ಹಾಡಿನಲ್ಲಿ ತೋಡಿಕೊಂಡಿದ್ದಾರೆ.

ಶೃಂಗಾರದ ಗೀತೆ

ಯಾವುದೇ ನಾಟಕದಲ್ಲಿ ಮಧ್ಯ ಮಧ್ಯ ಶೃಂಗಾರ ರಸವುಳ್ಳ ಹಾಡನ್ನು ಹಾಕುವುದು ಕಾಣುತ್ತೇವೆ. ನಾಟಕದ ಶೃಂಗಾರದ ಗೀತೆಯನ್ನು ಹಾಡುವಾಗ ಸುಭದ್ರಮ್ಮನವರು ಹೆಣ್ಣು ತನ್ನ ಪ್ರಿಯಕರನನ್ನು ನೆನೆಸಿಕೊಳ್ಳುವಾಗ ಹಾಡುವ ಹಾಡೆಂದು ತಟ್ಟನೆ "ಚಲುವ ನಿನ್ನ ಸಿರಿರೂಪ ನನ್ನ ಮನದಾಗ ಮೂಡ್ಯಾದ ಚಲುವೆಯಲ್ಲಿ ಒಲವೆಂಬ ಮಂತ್ರದ ಮೋಡಿ ಮಾಡ್ಯಾದ" ಎಂಬ ಹಾಡನ್ನು ಹಾಡಿದ್ದು ಅಧ್ಯಯನಕಾರನಿಗೆ ಮುಜುಗರವಾಗಿ ತನ್ನಲ್ಲೇ ತಾನು ಮಂದಹಾಸದ ನಗುವನ್ನು ನಗಲಾರಂಭಿಸುತ್ತಾ ಅವರನ್ನು ಹುರಿದುಂಬಿಸುತ್ತಾ ಪ್ರೇಕ್ಷಕರಂತೆ ವರ್ತಿಸಿದ್ದರಿಂದ ಇನ್ನೂ ಹುಮ್ಮಸ್ಸಿನಿಂದ ಹಾಡಿದ್ದು ಕಂಡು ಬಂದಿತು.

ಹೀಗೆ ಸುಭದ್ರಮ್ಮನವರು ತಮ್ಮ ಕಂಠ ಸಿರಿಯಲ್ಲಿ ಈ ಮೇಲಿನ ವಿಭಿನ್ನ ರಂಗಗೀತೆಗಳನ್ನು ಹಾಡಿದ್ದು ಸಂದರ್ಶನದಲ್ಲಿ ಕಂಡುಬಂದಿತು.

ಕೆ.ನಾಗರತ್ನಮ್ಮ

ಮರಿಯಮ್ಮನಹಳ್ಳಿಯ ಸೃಜನಶೀಲ ಸಂವೇದನೆಯ ಗಾಯಕ ನಟಿಯರಲ್ಲಿ ಕೆ.ನಾಗರತ್ನಮ್ಮನವರು ಸಹ ಒಬ್ಬರಾಗಿದ್ದಾರೆ. ಇವರು ಸಹ ಸುಭದ್ರಮ್ಮನವರಂತೆ ಉತ್ತಮ ಶಾರೀರವಿಲ್ಲದಿದ್ದರೂ ನಾಟಕದ ಮಾಸ್ತರರು ಹಾಗೂ ನಾಟಕ ಕಂಪನಿಯ ಸಂಗೀತ ಗವಾಯಿಗಳು ಹೇಳಿಕೊಟ್ಟಂತಹ ಹಾಡನ್ನು ಅನುಕರಣೆ ಮಾಡಿ ಹಾಡುವ ವೈಖರಿ ಇವರದಾಗಿದೆ.

ಇವರು ಸಂದರ್ಶನದಲ್ಲಿ ಪ್ರಮುಖವಾಗಿ ನಾಟಕಗಳಲ್ಲಿ ಕಂಡುಬರುವ ರಂಗಗೀತೆಗಳಾದ ನಾಂದಿಗೀತೆ, ಶೃಂಗಾರ, ಪ್ರಣಯದ ಹಾಡು, ಶೋಕದ ಹಾಡುಗಳನ್ನು ಇವರು ಹಾಡಿದರು.

ನಾಂದಿಗೀತೆ

ಕೆ.ನಾಗರತ್ನಮ್ಮನವರು ವೃತ್ತಿ ಮತ್ತು ಹವ್ಯಾಸಿ ನಾಟಕಗಳಲ್ಲಿ ಅಭಿನಯಿಸಿ ರಂಗಗೀತೆಗಳನ್ನು ಸಹ ಹಾಡಿದ್ದೂ ಉಂಟು. ಅವರ ಇಷ್ಟವಾದ ನಾಂದಿಗೀತೆಯನ್ನು ಹಾಡಿದ್ದೂ ಉಂಟು. ಅವರ ಇಷ್ಟವಾದ ನಾಂದಿಗೀತೆಯನ್ನು ಶ್ರೀಯುತ ಆರ್. ಭರಮಲಿಂಗಪ್ಪ ಮಾಸ್ತರರ ರಂಗಗೀತೆಯನ್ನು ಹಾಡಲಾರಂಭಿಸಿದರು.

'ಕನ್ನಡ ನುಡಿ ಕಾವ್ಯ ದೀಪ ಬೆಳಗಲಿ
ಕನ್ನಡದ ಕೀರ್ತಿ ಕಹಳೆ ಮೊಳಗಲಿ
ಶ್ರೀಗುರುವೆ ನಿಮ್ಮ ಕೃಪೆಯಲಿ'

ಎಂಬ ನಾಂದಿ ಗೀತೆಯನ್ನು ಭಕ್ತಿ ಪರವಶವಾಗಿ ನಮ್ಮ ಕಂಠದಲ್ಲಿ ಹಾಡಿದ್ದನ್ನು ಕಾಣಬಹುದು.

ಶೃಂಗಾರ ಗೀತೆ

ಇವರು ಶೃಂಗಾರದ ಗೀತೆಯನ್ನು ತಮ್ಮ ಆಂಗಿಕ ಚಲನವಲನಗಳ ಮೂಲಕ ನಟನೆಗೆ ಒಳಪಡಿಸಿ ಕೈ ಮೈ ಅಲುಗಾಡಿಸುತ್ತಾ

'ಹಾಡಿ ನಲಿಯುವೆ ಮೋಹನ
ಶೃಂಗಾರ ಸೌಂದರ್ಯ ಪ್ರೇಮ ಕಥನ' ಎಂಬ ಹಾಡನ್ನು ಹೇಳುತ್ತಾ ಅಂದಿನ-ಇಂದಿನ ರಂಗಸ್ಥಿತಿ ಗತಿಯ ಬಗ್ಗೆ ತಿಳಿಸುವಲ್ಲಿ ಯಶಸ್ವಿಯಾದರು.

ಪ್ರಣಯದ ಗೀತೆ

ಇವರು ನಾಟಕಗಳಲ್ಲಿ ಅನೇಕ ಪ್ರೀತಿ, ಪ್ರೇಮ, ಪ್ರಣಯದ ಗೀತೆಯನ್ನುಹಾಡಿದ್ದಾರೆ. ಅದರಲ್ಲಿ ಮುಖ್ಯವಾಗಿ ಒಬ್ಬ ಒಂಟಿ ಹೆಣ್ಣು ಪ್ರಿಯಕರನನ್ನು ನೆನೆಯುವಾಗ ಹಾಡಿದ ಹಾಡಾಗಿದೆ.

'ಒಂಟಿಯಾಗಿ ನಿನ್ನ ಕಾದು ಕುಂತಾಗ | ಹೀಂಗ
ಹೊತ್ತು ಕಳೆವೆ ಚಲುವ ನಿನ್ನ ಚಿಂತ್ಯಾಗ

ನದಿಯಲ್ಲಿ ನಾ ಮಿಂದು ಬಂದಾಗ' ಹೀಗೆ ಪ್ರಣಯದ ಹಾಡನ್ನು ಹಾಡುತ್ತಾ ತಮ್ಮ ಒಂಟಿತನದ ಹುಡುಗಿಯಂತೆ ಭಾವಿಸಿ ಕುಂತಲ್ಲೇ ತಮ್ಮ ಹಾಡಿನ ಮೂಲಕ ವ್ಯಕ್ತಪಡಿಸಿದರು. ಇದರ ಜೊತೆಗೆ ವಾದ್ಯಗಳಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು ಎಂದು ನುಡಿದರು.

ಶೋಕ ಗೀತೆ

ನಾಟಕದಲ್ಲಿ ಮನಕರಗುವಂತೆ ಹಾಡಿದ ಇವರು ಶೋಕಗೀತೆಯನ್ನು ದುಃಖಿತಪ್ತರಾಗಿ ಅಷ್ಟು ತಲ್ಲೀನತೆಯಿಂದ ಹಾಡಿದರು. ಮುಖ್ಯವಾದ ಹಾಡು 'ಸುತ್ತಲೂ ಕತ್ತಲೂ ಪತಿಯ ಪ್ರೀತಿ ಬತ್ತಲು ಕಣ್ಣೀರೇ ಹೆಣ್ಣ ಬಾಳು ಹುಟ್ಟದಿರುವುದೇ ಮೇಲು' ಎಂಬ ದುಃಖದ ಹಾಡನ್ನು ಹಾಡಿದಾಗ ಮೈ ಝಲ್ಲನೆ ಎನ್ನುವಷ್ಟರ ಮಟ್ಟಿಗೆ ಹಾಡಿದರು.

ಒಟ್ಟಾರೆಯಾಗಿ ಕೆ.ನಾಗರತ್ನಮ್ಮನವರಿಗಿಂತ ಸುಭದ್ರಮ್ಮ ಮನ್ಸೂರುರವರು ಹಾಡಿದ ಹೆಚ್ಚು ಹಾಡುಗಳು ಪ್ರೇಕ್ಷಕರ ನೆನಪಿನಲ್ಲಿರುವುದು ಕಾಣಬಹುದು. ಸುಭದ್ರಮ್ಮನವರು ಹಲವು ನಾಟಕ ಕಂಪನಿಗಳಲ್ಲಿ ಹಾಡಿದ್ದರು ಮತ್ತು ಸಂಗೀತದ ಜ್ಞಾನವುಳ್ಳವರಾಗಿದ್ದರು. ಹೀಗಾಗಿ ರಂಗಗೀತೆಗಳನ್ನು ಸರಾಗವಾಗಿ ಹಾಡುವ ವಿಶಿಷ್ಟತೆ ಅವರ ಹಾಡುಗಾರಿಕೆಯಲ್ಲಿತ್ತು. ಹಾಗಾಗಿ ಇವರನ್ನು ಬಳ್ಳಾರಿ ಜಿಲ್ಲೆಯ ರಂಗಭೂಮಿಯ 'ರಂಗಕೋಗಿಲೆ' ಎಂದು ಕರೆಯುತ್ತಾರೆ. ಆದರೂ ನಾಗರತ್ನಮ್ಮನವರು ಸುಭದ್ರಮ್ಮನವರಂತೆ ಹಾಡದಿದ್ದರೂ ನಾಟಕದ ಮಾಸ್ತರರು ಹಾಗೂ ನಾಟಕಕಂಪನಿಯ ಸಂಗೀತದ ಗವಾಯಿಗಳಂತಹವರು ಹೇಳಿದ್ದನ್ನು ನಿಷ್ಠೆಯಿಂದ ಕಲಿತು ಹಾಡುವುದನ್ನು ರೂಢಿಸಿಕೊಂಡವರು. ಹೀಗಾಗಿ ಸುಭದ್ರಮ್ಮನವರು ಇಲ್ಲಿ ಭಿನ್ನವಾಗಿ ಕಾಣಿಸಿಕೊಳ್ಳುತ್ತಾರೆ.

೩.೨.೨. ಬರಹ ರೂಪದ ರಂಗಗೀತೆಗಳು

ಬಳ್ಳಾರಿ ಜಿಲ್ಲೆಯಲ್ಲಿ ರಂಗ ಕವಿಗಳು ಹೆಚ್ಚಾಗಿ ಕಂಡು ಬರುತ್ತಾರೆ. ಅಂತವರಲ್ಲಿ ಮುಖ್ಯವಾಗಿ ದಿವಂಗತ ಆರ್.ಭರಮಲಿಂಗಪ್ಪ ಮಾಸ್ತರರು ಮತ್ತು ಮ.ಬ.ಸೋಮಣ್ಣನವರು ಹೆಚ್ಚಾಗಿ ರಂಗಗೀತೆಗಳನ್ನು ಬರೆದಿದ್ದಾರೆ. ಹಾಗಾಗಿ ಈ ಅಧ್ಯಯನದ ದೃಷ್ಟಿಯಿಂದ ಈ ಇಬ್ಬರ ರಂಗಕವಿಗಳ ತೌಲನಿಕ ಅಧ್ಯಯನ ಮಾಡಲಾಗಿದೆ.

ದಿ.ಆರ್.ಭರಮಲಿಂಗಪ್ಪ ಮಾಸ್ತರರು ಸಾವಿರಾರು ರಂಗಗೀತೆಗಳನ್ನು ರಚಿಸಿದ್ದಾರೆ. ವೃತ್ತಿಯಲ್ಲಿ ಶಿಕ್ಷಕರಾಗಿ, ಪ್ರವೃತ್ತಿಯಲ್ಲಿ ರಂಗಕವಿಗಳಾಗಿ, ನಾಟಕಕಾರರಾಗಿ ರಂಗಭೂಮಿಯಲ್ಲಿ ವಿಶಿಷ್ಟ ಸೇವೆ ಸಲ್ಲಿಸಿದ್ದಾರೆ.

ಇವರು ನಾಟಕದ ಮಾಸ್ತರರಿಗೆ, ರಾಗ ಸಂಯೋಜಕರಿಗೆ ಅನೇಕ ರಂಗಗೀತೆಗಳನ್ನು ಬರೆದುಕೊಟ್ಟಿದ್ದಾರೆ. ಆದರೆ ಅವುಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳದೇ ಇರುವುದು ದುರಾದೃಷ್ಟಕರ ಸಂಗತಿಯಾಗಿದೆ. ಮಾಸ್ತರರ ರಂಗಗೀತೆಗಳನ್ನು ಗಮನಿಸಿದಾಗ ಭಕ್ತಿ, ಪ್ರೇಮ, ದುಃಖ, ಹಾಸ್ಯವನ್ನು ಕುರಿತ ರಂಗಗೀತೆಗಳನ್ನು ರಚಿಸಿದ್ದಾರೆ. ಅವರು ನಮ್ಮ ಕಾಲದ ದೊಡ್ಡ ಕವಿಗಳಾದ ಬೇಂದ್ರೆ ಹಾಗೂ ಕುವೆಂಪು ಮುಂತಾದವರ ಕವಿತೆಗಳಿಂದ ಪ್ರಭಾವಿತರಾಗಿದ್ದಾರೆ. ಮುಖ್ಯವಾಗಿ ಮಾಸ್ತರರ ರಂಗಗೀತೆಗಳನ್ನು ಎರಡು ಭಾಗಗಳಾಗಿ

ನೋಡಬಹುದು. ಒಂದು, ಸಂಸ್ಕೃತ ಪದಗಳನ್ನು ಬಳಸಿ ರಚಿಸಿದ ರಂಗಗೀತೆಗಳು, ಎರಡನೆಯದಾಗಿ, ಅತಿ ಸರಳ ರೀತಿಯ ಕನ್ನಡ ಪದಗಳನ್ನು ಬಳಸಿ ರಚಿಸಿದ ರಂಗಗೀತೆಗಳು -ಈ ರೀತಿಯಾಗಿ ರಚಿಸಿದ್ದಾರೆ.

ಮ.ಬ.ಸೋಮಣ್ಣನವರು ನಾಲ್ಕುನೂರಕ್ಕೂ ಹೆಚ್ಚು ರಂಗಗೀತೆಗಳನ್ನು ರಚಿಸಿದ್ದಾರೆ. ಇವರು ಸಹ ವೃತ್ತಿಯಲ್ಲಿ ಕನ್ನಡ ಶಿಕ್ಷಕರಾಗಿ, ಪ್ರವೃತ್ತಿಯಲ್ಲಿ ರಂಗ ಕವಿಗಳಾಗಿ, ನಾಟಕಕಾರರಾಗಿ, ನಟರಾಗಿ ನಮ್ಮ ಬಳ್ಳಾರಿ ಜಿಲ್ಲೆಯ ರಂಗಭೂಮಿ ಪರಂಪರೆಯಲ್ಲಿ ಪ್ರಮುಖರಾಗಿದ್ದಾರೆ.

ಇವರು ಸಹ ನಾಟಕದ ಮಾಸ್ತರುಗಳು ಹೇಳಿದ ಕಥೆಯ ಸನ್ನಿವೇಶಕ್ಕೆ ತಕ್ಕಂತೆ ಅನೇಕರಿಗೆ ಕೇಳಿದ ಕೂಡಲೇ ಗೀತೆಗಳನ್ನು ಉಚಿತವಾಗಿ ಬರೆದುಕೊಡುತ್ತಿದ್ದರು. ಅವರು ಬರೆದಂತಹ ಹಾಡುಗಳನ್ನು ಅಲ್ಪಸ್ವಲ್ಪವಾಗಿ ಸಂಗ್ರಹಿಸಿಟ್ಟುಕೊಂಡಿದ್ದಾರೆ. ಇವರ ರಂಗಗೀತೆಗಳನ್ನು ಗಮನಿಸಿದಾಗ ಭಕ್ತಿಗೀತೆ, ನಾಂದಿಗೀತೆ, ಪ್ರೀತಿ, ಪ್ರೇಮ, ಪ್ರಣಯದಗೀತೆ, ಶೋಕಗೀತೆ, ಮಂಗಳಾರತಿಯ ಗೀತೆಗಳನ್ನು ಬರೆದಿದ್ದಾರೆ. ಹಾಗೆಯೇ ವಿಶೇಷವಾಗಿ ಇವರು ಷಟ್ಪದಿಯ ರೂಪದ ರಂಗಗೀತೆಗಳನ್ನೂ ರಚಿಸಿದ್ದಾರೆ.

ಮ.ಬ.ಸೋಮಣ್ಣನವರಿಗೂ ಸಹ ಕನ್ನಡದ ಕವಿಗಳಾದ ಕುವೆಂಪು, ಬೇಂದ್ರೆಯವರ ಕವಿತೆಗಳ ಪ್ರಭಾವ ಮತ್ತು ಸಿದ್ಧಯ್ಯ ಪುರಾಣಿಕರು ಬರೆದ ಹಾಡುಗಳ ಪ್ರಭಾವ ಇದೆ. ಅವರೊಬ್ಬ ಸಾಹಿತ್ಯ ವಿದ್ಯಾರ್ಥಿಯಾಗಿದ್ದರಿಂದ ಓದಿದ್ದರು. ಅವುಗಳನ್ನು ಅನುಭವಿಸಿದ್ದರು. ಹೀಗಾಗಿ ಅವರ ಪ್ರಭಾವ ಗಾಢವಾಗಿದೆ.

ಇವರು ಯಾವುದೇ ರಂಗಗೀತೆಗಳನ್ನು ಬರೆಯುವ ರಂಗಕವಿಗಳಿಗೆ ೨ ವಿಧಾನದ ರಚಿಸುವ ಕ್ರಮ ಗೊತ್ತಿರಬೇಕು ಎಂದು ಹೇಳಿದ್ದಾರೆ. ಅವುಗಳಲ್ಲಿ ಒಂದು, ಸಾಹಿತ್ಯದ ಜ್ಞಾನ, ತಾಳ-ಲಯದ ಜ್ಞಾನ ಇರಬೇಕು. ಎರಡನೆಯದಾಗಿ, ಛಂದಸ್ಸುಶಾಸ್ತ್ರ ಲಯಕ್ಕೆ ಸಂಬಂಧಿಸಿದ್ದು ಆದುದರಿಂದ ಅದರ ಜ್ಞಾನ ಕೂಡ ಇರಬೇಕು.

ಮ.ಬ.ಸೋಮಣ್ಣನವರು ಸಹ ಭರಮಲಿಂಗಪ್ಪ ಮಾಸ್ತರರಂತೆ ಸಂಸ್ಕೃತ ಪದಗಳನ್ನು ಬಳಸಿ ರಂಗಗೀತೆಗಳನ್ನು ರಚಿಸಿದ್ದಾರೆ ಮತ್ತು ಸರಳ ರೀತಿಯ ಕನ್ನಡ ಪದಗಳನ್ನು ಬಳಸಿ ರಚಿಸಿದ್ದಾರೆ.

ಒಟ್ಟಾರೆಯಾಗಿ ಈ ಇಬ್ಬರ ರಂಗಕವಿಗಳ ರಂಗಗೀತೆಗಳನ್ನು ಅಲ್ಪ ಸ್ವಲ್ಪ ಬದಲಾವಣೆಗಳು ಕಂಡುಬರುತ್ತವೆ. ಮ.ಬ.ಸೋಮಣ್ಣನವರು ಭಾಮಿನಿ, ವಾರ್ಧಕ ಷಟ್ಪದಿರೂಪದ ರಂಗಗೀತೆಗಳನ್ನು ರಚಿಸಿದ್ದಾರೆ. ಆದರೆ ಭರಮಲಿಂಗಪ್ಪ ಮಾಸ್ತರರು ಷಟ್ಪದಿ ರೂಪದ ರಂಗಗೀತೆಗಳನ್ನು ರಚಿಸಿರುವುದು ಕಂಡುಬಂದಿರುವುದಿಲ್ಲ. ಮ.ಬ.ಸೋಮಣ್ಣನವರು ಯಾವುದೇ ಒಬ್ಬ ರಂಗಕವಿಯ ರಂಗಗೀತೆಗಳನ್ನು ರಚಿಸಬೇಕಾದರೆ ಎರಡು ವಿಧಾನದಲ್ಲಿ ರಚಿಸಬೇಕೆಂದು ಹೇಳಿದ್ದಾರೆ. ಅವುಗಳಲ್ಲಿ ಒಂದು, ಸಾಹಿತ್ಯದ ಜ್ಞಾನ, ತಾಳ-ಲಯದ ಜ್ಞಾನ ಇರಬೇಕು ಎರಡನೆಯದಾಗಿ, ಛಂದಸ್ಸುಶಾಸ್ತ್ರ ಕೂಡ ಲಯಕ್ಕೆ ಸಂಬಂಧಿಸಿದ್ದಾದ್ದರಿಂದ ಇದು ಇರಬೇಕು ಎನ್ನುತ್ತಾರೆ. ಆದರೆ ಭರಮಲಿಂಗಪ್ಪ ಮಾಸ್ತರರು ಈ ರೀತಿಯಾಗಿ ಎಲ್ಲೂ ಹೇಳಿರುವುದಿಲ್ಲ. ಹೀಗೆ ಭಿನ್ನ ಭಿನ್ನವಾದ ವ್ಯತ್ಯಾಸ ಕಂಡು ಬಂದಿರುವುದನ್ನು ಕಾಣಬಹುದಾಗಿದೆ.

ಅಡಿಟಿಪ್ಪಣಿ

೦೧. ಡಾ.ಬಸವರಾಜ ಜಗಜಂಪಿ, ಗರುಡ ಸದಾಶಿವರಾಯರು ನಾಟಕ ಸಾಹಿತ್ಯ ಹಾಗೂ ವೃತ್ತಿರಂಗಭೂಮಿಯ ಅಧ್ಯಯನ, ೧೯೯೩, ಪುಟ-೧೮೧,೧೮೨

೦೨. ಡಾ.ಬಸವರಾಜ ಮಲಶೆಟ್ಟಿ, ಉತ್ತರ ಕರ್ನಾಟಕದ ರಂಗಗೀತೆಗಳು, ೧೯೯೦, ಪ್ರಸ್ತಾವನೆ ನುಡಿ, ಪುಟ-v.vi

೦೩. ಸುಜಾತ ಅಕ್ಕಿ, ಬಳ್ಳಾರಿ ಜಿಲ್ಲೆಯ ರಂಗನಟಿಯರ ಅಧ್ಯಯನ ಪಿಹೆಚ್.ಡಿ (ಅಪ್ರಕಟಿತ), ೨೦೦೪, ಪುಟ-೯೬,೯೭

ಅಧ್ಯಾಯ - ನಾಲ್ಕು

ರಂಗಗೀತೆಗಳ ಸಾಹಿತ್ಯಕ ವಿಶ್ಲೇಷಣೆ

ಅಧ್ಯಾಯ - ನಾಲ್ಕು

ರಂಗಗೀತೆಗಳ ಸಾಹಿತ್ಯಕ ವಿಶ್ಲೇಷಣೆ

ರಂಗಗೀತೆಗಳಲ್ಲಿ ಮುಖ್ಯವಾಗಿ ಸಂಗೀತ, ಸಾಹಿತ್ಯ ಮತ್ತು ರಂಗಭೂಮಿ ಎಂಬ ಮೂರು ಕ್ಷೇತ್ರಗಳ ಸಾಧ್ಯತೆ ಇರುತ್ತದೆ. ಅಂದರೆ ಇದನ್ನು ಸಂಗೀತ ಸಾಧ್ಯತೆ, ಸಾಹಿತ್ಯ ಸಾಧ್ಯತೆ ಮತ್ತು ರಂಗಭೂಮಿ ಸಾಧ್ಯತೆ ಎಂದು ಕರೆಯಬಹುದು. ಆದರೆ ಹಿಂದಿನ ಅಧ್ಯಾಯಗಳಲ್ಲಿ ಸಂಗೀತ, ಮತ್ತು ರಂಗಭೂಮಿಯ ಸಾಧ್ಯತೆಗಳ ಬಗ್ಗೆ ಚರ್ಚೆ ಮಾಡಲಾಗಿದೆ.

ಈ ಅಧ್ಯಾಯದಲ್ಲಿ ಆಯ್ದ ರಂಗಗೀತೆಗಳನ್ನು ಚರ್ಚೆ ಮಾಡಲಾಗಿದೆ. ಈ ಚರ್ಚೆಯಲ್ಲಿ ರಂಗಗೀತೆಗಳ ವಸ್ತು, ಭಾಷೆ ಮತ್ತು ರಚನಾಕ್ರಮದ ಬಗ್ಗೆ ಮಾತ್ರ ಚರ್ಚಿಸಲಾಗಿದೆ. ಸಂಗೀತವು ತಾಂತ್ರಿಕ ವಿಷಯವಾದ ಕಾರಣ ಇಲ್ಲಿ ಸಂಗೀತದ ದೃಷ್ಟಿಯಿಂದ ವಿವರಿಸಿಲ್ಲ. ಪ್ರಮುಖವಾಗಿ ಎರಡು ಜನ ಕವಿಗಳಾದ ಆರ್.ಭರಮಲಿಂಗಪ್ಪ ಮಾಸ್ತರರು ಮತ್ತು ಮ.ಬ.ಸೋಮಣ್ಣನವರ ರಂಗಗೀತೆಗಳನ್ನು ಅನುಲಕ್ಷಿಸಿ ಈ ಅಧ್ಯಾಯದಲ್ಲಿ ಚರ್ಚೆ ಮಾಡಲಾಗಿದೆ.

ರಂಗಗೀತೆಗಳ ಸಾಹಿತ್ಯಕ ವಿಶ್ಲೇಷಣೆಯನ್ನು ಅಧ್ಯಯನ ಮಾಡುವಾಗ ಕೆಲವು ಸಂಗತಿಗಳ ಬಗ್ಗೆ ಸ್ಪಷ್ಟವಾಗಿ ತಿಳಿದುಕೊಂಡಿರಬೇಕಾಗಿರುತ್ತದೆ. ಈ ಬಗ್ಗೆ "ರಹಮತ್ ತರೀಕೆರೆಯವರು ಭರಮಲಿಂಗಪ್ಪ ಮಾಸ್ತರರ ರಂಗಗೀತೆಗಳು ಎಂಬ ಗ್ರಂಥದ ಮುನ್ನುಡಿಯಲ್ಲಿ (ಪುಟ-vi-vii) ಹೀಗೆ ಹೇಳಿದ್ದಾರೆ. ರಂಗಗೀತೆಗಳು ಕವಿಯ ಸ್ವತಂತ್ರ ಭಾವನೆಗಳನ್ನು ವ್ಯಕ್ತಮಾಡಲು ಹುಟ್ಟುವುದಿಲ್ಲ. ಬದಲಿಗೆ ನಾಟಕದ ಕಥೆಯ ಆಯಾ ಸನ್ನಿವೇಶಕ್ಕೆ ತಕ್ಕ ಹಾಗೆ ಪ್ರಾಸಂಗಿಕವಾಗಿ ಹುಟ್ಟುತ್ತವೆ. ಆದ್ದರಿಂದ ಇಲ್ಲಿನ ಹಾಡುಗಳನ್ನು ಸ್ವತಂತ್ರ ಕವಿತೆಗಳಲ್ಲಿ ಮಾಡುವಂತೆ ಅರ್ಥಕ್ಕಾಗಿ ಓದುವುದರಲ್ಲಿ ಪ್ರಯೋಜನವಿಲ್ಲ.

ರಂಗಗೀತೆಗಳು ಓದು ರಚನೆಗಳೇ ಅಲ್ಲ, ಸಂಗೀತ ಪ್ರಧಾನವಾಗಿರುವ ಇವನ್ನು ಕೇಳಬೇಕು. ಇಲ್ಲಿ ಪ್ರತಿಯೊಂದು ಹಾಡಿಗೂ ರಾಗ ತಾಳಗಳನ್ನು ಸೂಚಿಸಲಾಗಿದೆ. ರಂಗಗೀತೆಗಳು ನಾಟಕದ ಸನ್ನಿವೇಶದ ಭಾಗವಾಗಿ ಇವು ನೋಡುವ ಮತ್ತು ಕೇಳುವ ರಚನೆಗಳು, ನಾಟಕದಲ್ಲಿ ನಟರು, ಅವರ ವೇಷಭೂಷಣ,

ಸೀನರಿಗಳು, ಹಿನ್ನೆಲೆಯಲ್ಲಿ ಹಾಡುವ ಗಾಯಕರು, ವಾದ್ಯಗಳ ಸಂಗೀತ ಇವೆಲ್ಲವೂ ಅರೆಜೀವವಾಗಿ ಕಾಣುವ ಈ ಸಾಹಿತ್ಯವನ್ನು ಹತ್ತು ಜೀವಕೊಟ್ಟು ಸ್ಥಾಪಿಸುತ್ತವೆ. ಆಗ ಯಕ್ಷಲೋಕ ನಿರ್ಮಾಣವಾಗುತ್ತದೆ. ಇವನ್ನು ನಾಟಕದ ಈ ಎಲ್ಲ ಹಿನ್ನೆಲೆಯಿಂದ ತೆಗೆದು ನೋಡತೊಡಗಿದರೆ ಅವು ಸಪ್ಪೆಯಾಗಿ ಕಾಣುತ್ತವೆ. ಇವುಗಳಲ್ಲಿರುವ ವಾಗಾಡಂಬರ, ಪ್ರಾಸಬದ್ಧತೆಗಳು ಕೃತಕ ಕ್ಲೀಷೆ ಎನಿಸುತ್ತದೆ.

ಇನ್ನೊಂದು ಸಂಗತಿಯೆಂದರೆ, ಈ ಹಾಡುಗಳಲ್ಲಿರುವ ರಮ್ಯಲೋಕ ಮತ್ತು ವರ್ಣನೆಗಳು, ಯಾವ ಕೊರತೆಗಳೂ ಇಲ್ಲದ ಸಮೃದ್ಧತೆಯನ್ನು ಸೂಚಿಸುವ ವರ್ಣನೆಗಳು ಪ್ರೇಕ್ಷಕರ ಭಾವನೆಗಳನ್ನು ಬಡಿದೇಳಿಸಲು ಅಗತ್ಯವಾಗಿರಬಹುದು" ಎಂದು ಹೇಳಿದ್ದಾರೆ.

ಪ್ರಸ್ತುತ ಅಧ್ಯಾಯದಲ್ಲಿ ಸಾಹಿತ್ಯಕ ಆಯಾಮದ ಹಿನ್ನೆಯಲ್ಲಿ ವಿಶೇಷವಾದ ಚರ್ಚೆ ಮಾಡಲಾಗಿದೆ.

ರಂಗಗೀತೆಗಳು ವಿಶಿಷ್ಟ ರೂಪದಲ್ಲಿ ಕಂಡು ಬರುತ್ತವೆ. ಅದರಲ್ಲಿ ಮುಖ್ಯವಾಗಿ ಭಕ್ತಿಗೀತೆ, ಪ್ರೀತಿ, ಪ್ರೇಮ, ಪ್ರಣಯದ ಗೀತೆ, ಶೃಂಗಾರಗೀತೆ, ಶೋಕಗೀತೆ, ನೃತ್ಯಗೀತೆ ಇವುಗಳಲ್ಲಿ ಬರುವ ವಸ್ತು ವಿಷಯ, ಭಾಷೆಯ ಚರ್ಚೆ, ರಚನಾ ವಿನ್ಯಾಸದ ಬಗ್ಗೆ ಇಲ್ಲಿ ತಾತ್ವಿಕವಾದ ಚರ್ಚೆ ಮಾಡುವುದಾಗಿದೆ.

ಭಕ್ತಿಗೀತೆ

ಯಾವುದೇ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕದ ಪ್ರಾರಂಭದಲ್ಲಿ ಭಕ್ತಿಗೀತೆಯ ಮೂಲಕ ನಾಟಕ ಆರಂಭವಾಗುತ್ತಿತ್ತು. ಹಾಗೆಯೇ ಹೆಚ್ಚಾಗಿ ಭಕ್ತಿ ಪರವಾದ ಹಾಡುಗಳನ್ನು ಹಾಡುತ್ತಿದ್ದರು. ಇಂದಿಗೂ ಹಾಡುತ್ತಿದ್ದಾರೆ. ಆ ನಾಟಕದ ಹಾಡುಗಳು ದೇವರು, ಧರ್ಮ, ಭಕ್ತಿ, ಪ್ರಾರ್ಥನೆ ಕುರಿತಾದವುಗಳಾಗಿದ್ದವು. ಹಾಗಾಗಿ ಬಳ್ಳಾರಿ ಜಿಲ್ಲೆಯ ಭಾಗದಲ್ಲಿ ಇಂತಹ ಹಾಡುಗಳನ್ನು ಕವಿಗಳು ಬರೆದಿದ್ದಾರೆ, ಗಾಯಕರು ಹಾಡುತ್ತಿದ್ದಾರೆ. ಅಂತಹವುಗಳಲ್ಲಿ ಇಲ್ಲಿ ಮುಖ್ಯವಾದ ಪೌರಾಣಿಕ ನಾಟಕದಲ್ಲಾಡುವ ಕೆಲವು ಭಕ್ತಿಗೀತೆಯನ್ನು ಇಲ್ಲಿ ಪರಿಶೀಲಿಸಬಹುದು.

ಗೀತರಚನೆ : ಮ.ಬ.ಸೋಮಣ್ಣ

ರಾಗ : ಯಾವುದಾದರೂ ಅಳವಡಿಸಿಕೊಳ್ಳಬಹುದು, **ತಾಳ : ಕೇರವ**

"ಶ್ರೀಗೆ ಹರಿಪ್ರಿಯೆ ಕಾಯೆ
ಜಯವೀಯ ಜಗದಂಬೆ ವಿಜಯಲಕ್ಷ್ಮಿಯೆ ||ಪ||

ಕ್ಷೀರಸಾಗರ ದುಹಿತೆ ಸಕಲ ಸಂಪದ ಭರಿತೆ
ಭಜಿಪ ಭಕುತಜನ ಸಂಪ್ರೀತೆ ಕಲ್ಪಲತೆ
ಸುರಸ್ತೋಮ ಮುನಿಧಾಮ ನಿತ್ಯವಂದಿತೆ ಮಾತೆ
ವಿನುತೆ ವಿಖ್ಯಾತಿ ಸುಚರಿತೆ ಸಂಪ್ರೀತೆ ||೧||

ಕರುಣಿಸು ಕಾರುಣ್ಯೆ ಘನಕುಂತಲೆ ನೀಲೆ

ದಯತೋರು ಧರ್ಮದುಕೊಲೆ ಸುಶೀಲೆ
ಮಂಗಳೆ ಮಂಜುಳೆ ಮಣಿ ಮೌಕ್ತಿಕ ಮಾಲೆ
ಕಮಲೆ ಕೋಮಲೆ ವಿಮಲೆ ಶಾಮಲೆ ಪಾಲಿಸು ಮಾಂಪಾಲೆ ||೨||

ಪಾಲ್ಗಡಲ ಮಂಥನದಿ ಜನಿಸಿದ ಸಿರಿಗನ್ನೆ
ಶೇಷಶಯನನೊಲಿದ ಸಕಲಗುಣ ಸಂಪನ್ನೆ
ಪಂಕಜದಲನಯನೆ ಮಂದಸ್ಮಿತ ವದನೆ
ಪಂಕಜ ಪೀಠ ನಿವಾಸಿನಿ ಪಾವನೆ ||೩||”[೧]

ವಸ್ತು ವಿಷಯ:- ಇಂತಹ ಪದ್ಯದಲ್ಲಿ ದೇವರನ್ನು ಕುರಿತ ವರ್ಣನೆಯಿದ್ದು, ಅದರ ಜೊತೆಗೆ ಪ್ರಾರ್ಥನೆಯೂ ಇದೆ. ನಾಟಕಕ್ಕೆ ತಕ್ಕ ಹಾಡಿನ ಜೋಡಣೆಯೂ ಇದೆ. ಇದು ಭಕ್ತಿ ಪರವಾದ ಹಾಡಾಗಿಯೂ ಕಂಡು ಬರುತ್ತದೆ. ಬಾಯ್ತುಂಬ ದೇವರನ್ನು ಕುರಿತು ಪ್ರಾರ್ಥಿಸುವ ಇಂತಹ ಹಾಡುಗಳು ಸಾಕಷ್ಟಿವೆ.

ಅಂದಿನ ಪೌರಾಣಿಕ ನಾಟಕಗಳು ಭಕ್ತಿರಸದಿಂದ ಕೂಡಿದ ನಾಟಕಗಳಾಗಿದ್ದವು. ರಾಮಾಯಣ ಮಹಾಭಾರತ ಪುರಾಣದ ಕಥಾವಸ್ತುವನ್ನೊಳಗೊಂಡ ಪೌರಾಣಿಕ ನಾಟಕಗಳ ಜೊತೆಗೆ ಸಂತಶ್ರೇಷ್ಠರ ಜೀವನವನ್ನು ಆಧರಿಸಿ ನಾಟಕಗಳು ಹುಟ್ಟಿಕೊಂಡವು. ಹೊಸ ವಿಷಯ ಕುರಿತ ನಾಟಕಗಳು ಬಂದವಾದರೂ ಅವೆಲ್ಲ ಪೌರಾಣಿಕ ಮಾದರಿಯಲ್ಲಿ ಮೂಡಿ ಬಂದವು. ಪೌರಾಣಿಕ ನಾಟಕಗಳನ್ನು ನೋಡಿ ನಲಿದ ಪ್ರೇಕ್ಷಕರು ಧಾರ್ಮಿಕದವರಾಗಿದ್ದರಿಂದ ರಂಗ ಭೂಮಿಯ ಮೇಲೆ ಬರುವ ಸಂತಶ್ರೇಷ್ಠರನ್ನು ಕಂಡು ಭಯಭಕ್ತಿಯಿಂದ ಕೈ ಮುಗಿದು ನೋಡುತ್ತಿದ್ದರು. ಪ್ರೇಕ್ಷಕರ ಅಭಿರುಚಿಯನ್ನು ಅರ್ಥಮಾಡಿಕೊಂಡ ನಾಟಕಕಾರರು ಭಕ್ತಿಪರ ನಾಟಕಗಳನ್ನು, ಹಾಡುಗಳನ್ನು ಬರೆದು ನಾಟಕ ಸಾಹಿತ್ಯದಲ್ಲಿ ಭಕ್ತಿರಸವನ್ನು ಸಮರ್ಥವಾಗಿ ನಿರೂಪಿಸಿದರು.

ಭಾಷೆ

ರಂಗಗೀತೆಗಳ ಭಾಷೆಯು ಪ್ರಾಸ ಬದ್ಧತೆಯಿಂದ ಕೂಡಿರುತ್ತವೆ. ಇಲ್ಲಿ ಸಂಗೀತ ಪ್ರಮುಖವಾಗಿರುತ್ತದೆ. ಆದರೆ ಸಾಹಿತ್ಯ ಮುಖ್ಯವಾಗಿರುವುದಿಲ್ಲ ಯಾವುದೇ ಹಾಡುಗಳನ್ನು ನೋಡಿದಾಗ ಅವು ಲಯಬದ್ಧವಾಗಿ, ಸಂಸ್ಕೃತ ಮಿಶ್ರಿತ ಕನ್ನಡದಿಂದ ಕೂಡಿರುತ್ತವೆ. ಹಾಗೆಯೇ ಜನಸಾಮಾನ್ಯರಿಗೂ ಅರ್ಥವಾಗುವ ಭಾಷೆಯಿಂದ ಸಹ ಕೂಡಿರುತ್ತವೆ.

ಅಂತ್ಯ ಪ್ರಾಸಯುಕ್ತವಾದ ರಚನೆಗಳು ಲಾವಣಿ ಸಂಪ್ರದಾಯದ ಪ್ರಭಾವವನ್ನು ಕೂಡ ಪಡೆದಿರಬಹುದು. ಇಲ್ಲಿನ ಹಾಡುಗಳಲ್ಲಿ ವರ್ಣನೆ ಹಾಗೂ ಸ್ತುತಿ ಬಂದೊಡನೆ ಸಂಸ್ಕೃತವು ಬಂದುಬಿಡುತ್ತದೆ. ಸಂಸ್ಕೃತಕ್ಕೂ ಸ್ತುತಿ ಮಾಡುವ ಭಾವಕ್ಕೂ ಇರುವ ಆಂತರಿಕ ಸಂಬಂಧ ಕುತೂಹಲಕರವಾದುದು. ಇಲ್ಲಿನ ದೇವರ ಸ್ತುತಿಗಳಲ್ಲಿ ಹೆಚ್ಚಿನ ಸಂಸ್ಕೃತ ಶಬ್ದಗಳ ಬಳಕೆಯೂ ಇದೆ. ಆದರೆ ಈ ಸಂಸ್ಕೃತವು ಕನ್ನಡದ ಸಹವಾಸಕ್ಕೆ ತಕ್ಕನಾಗಿ ಮಿದುಗೊಂಡಿರುವ ಪರಿಚಿತವಾಗಿರುವ ಭಾಷೆಯಾಗಿದೆ.

ರಚನಾವಿನ್ಯಾಸ

ಕವಿಯು ಈ ಹಾಡಿನಲ್ಲಿ ಮೊದಲು ಎರಡು ಸಾಲಿನ ಒಂದು ಪಲ್ಲವಿಯನ್ನು ಮತ್ತು ಎರಡನೇ ಸಾಲಿನಲ್ಲಿ ನಾಲ್ಕು ಸಾಲಿನ ಮೂರು ಪದ್ಯವನ್ನು ಬರೆದಿರುವುದನ್ನು ಕಾಣಬಹುದು. ಹಾಗೆಯೇ ಕೊನೆಗೆ ಅಂತ್ಯಪ್ರಾಸವನ್ನು ಕೂಡ ಒಂದು ಚೌಕಟ್ಟಿನಂತೆ ಬಳಸಿದ್ದಾನೆ.

ಹೀಗೆ ಕವಿಗೆ ಪುರಾಣದ ಜ್ಞಾನವಿರುವುದರಿಂದ ಹೆಣ್ಣು ದೇವತೆಯನ್ನು ಕುರಿತಾದ ಹಾಡನ್ನು ಇಲ್ಲಿ ಭಕ್ತಿಗೀತೆ ಹಾಡನ್ನಾಗಿ ತೆಗೆದುಕೊಂಡಿದ್ದಾನೆ.

ಪ್ರೀತಿ, ಪ್ರೇಮ, ಪ್ರಣಯದ ಗೀತೆ

ಪ್ರೀತಿ, ಪ್ರೇಮ ಪ್ರಣಯದ ಗೀತೆಗಳು ನಾಟಕದ ನಾಯಕ ನಾಯಕಿಯರು ಕೂಡಿ ಹಾಡುವ ಹಾಡುಗಳು ನಾಟಕ ಜೀವಾಳವಾಗಿರುತ್ತವೆ. ಹಾಗೆಯೇ ನಾಯಕಿ ನಾಯಕನ ಬರುವಿಕೆ ಕುರಿತು ಹಾಡುವ ಗೀತೆಗಳು ಮುಖ್ಯವಾಗಿರುತ್ತವೆ. ಪರಸ್ಪರ ಪ್ರೇಮಪೂರಿತ ಭಾವಾಭಿನಯದಿಂದ ಕೂಡಿರುವ ಈ ಹಾಡುಗಳು ಗಂಭೀರತೆಯ ಜೊತೆಗೆ ಪ್ರಚೋದಕವಾಗಿಯೂ ಇರುತ್ತವೆ. ಇವು ಬಹುಬೇಗ ಜನಪ್ರಿಯಗೊಳ್ಳುತ್ತವೆ. ಇಂತಹ ಒಂದು ಹಾಡನ್ನು ಇಲ್ಲಿ ಗಮನಿಸಬಹುದು.

ಸಾಹಿತ್ಯ ರಚನೆ : ದಿವಂಗತ ಆರ್.ಭರಮಲಿಂಗಪ್ಪ ಮಾಸ್ತರರು

ರಾಗ : ಮಧುಮಾಸಾರಂಗ **ತಾಳ : ಕೇರವ**

“ಹೆಣ್ಣು : ಎದೆಯಲಿ ಜೇನು ತುಂಬಿರೆ ತಾನು
ಸೌರಭ ಗಾಳಿಯಲೇಕೆ?

ಗಂಡು : ಕಮಲಿನಿಯ ಕೆಂಪಡರಿದ ಮುಖವು
ಅರಳಿದೆ ಮಧು ಸಂಭ್ರಮಕೆ

ಹೆಣ್ಣು : ಕೆಂದುಟಿಯ ಕಾಣೆಯನು ಬೇಡಿ
ಹಾಡಿದೆ ದುಂಬಿಯದೇಕೆ?

ಗಂಡು : ತುಟಿಯಂಚಲಿ ಎದೆ ಜೇನಿನ ಕೋಡಿ
ಹರಿದಿದೆ ನೋಡಿದೋ ಅದಕೆ

ಹೆಣ್ಣು : ಚಂದ್ರನುದಿಸಿದರೆ ವಿರಹಿ ಚಕೋರಿಯು
ಹಾರುತ ಅಲೆಯುವುದೇಕೆ?

ಗಂಡು : ತಿಂಗಳ ದೂತನ ಕಳುಹಿದ ಚಂದಿರ
ದೂರದೊಳಿರುವನು ಅದಕೆ

ಹೆಣ್ಣು : ತಂಗಾಳಿಯು ಕಚಗುಳಿಯನಿಡುತಿದೆ
ಚಿವುಟಲು ಕಣ್ಣನು ತಾರೆ

ಗಂಡು : ಕರುಬುವ ಚಂದಿರ ಕಂಡೆಮ್ಮಿರುವ
ಮರೆ ಸೇರುವ ಬಾ ಬಾರೆ
ಕತ್ತಲ ಮರೆ ಸೇರುವ ಬಾ ಬಾಲೆ”[3]

ವಸ್ತು-ವಿಷಯ:- ಇಂತಹ ಗೀತೆಗಳ ವಸ್ತು ಪ್ರೀತಿ, ಪ್ರೇಮದಿಂದ ಕೂಡಿರುತ್ತವೆ. ನಾಯಕ ನಾಯಕಿಯರ ಪರಸ್ಪರ ವರ್ಣನೆಗಳಿಂದ ಕೂಡಿದ್ದು, ಪ್ರಣಯದಾಟವೂ ಇಲ್ಲಿದೆ, ಮಧುರ ಬಂಧದ, ಸುಂದರ ಕನಸುಗಳಿಂದ ತುಂಬಿದ ಈ ಹಾಡುಗಳು ರಸಿಕತೆಗೆ ಉದಾಹರಣೆಗಳೆನಿಸಿವೆ.

ಇಂತಹ ಅನೇಕ ರಂಗಗೀತೆಗಳು ಕಾಮದ ಆತುರತೆ ಇದ್ದರೂ ಸೌಂದರ್ಯದ ವರ್ಣನೆ ಮೋಹಕವಾಗಿದೆ. ಇಂತಹ ಅನೇಕ ಹಾಡುಗಳು ಕೂಡಲೇ ಪ್ರೇಕ್ಷಕರನ್ನು ಆಕರ್ಷಿಸುವವು. ಇಂದಿಗೂ ಈ ಹಾಡುಗಳು ರಂಗಭೂಮಿಯಲ್ಲಿ ಕಾಣಿಸುವುದುಂಟು.

ನಾಟಕಕಾರ ಯಾವುದೇ ನಾಟಕದಲ್ಲಿ ಪ್ರಿಯತಮೆ ಪ್ರಿಯಕರನನ್ನು ಕೂಡಿಸುವ ಸಲುವಾಗಿ ಪ್ರೀತಿ ಪ್ರೇಮ, ಪ್ರಣಯದ ಸನ್ನಿವೇಶವನ್ನು ನಾಟಕದ ಮಧ್ಯದಲ್ಲಿ ಅವಕಾಶಮಾಡಿಕೊಡುತ್ತಿದ್ದನು. ಆ ಪರಿಸರವನ್ನು ತಿಳಿದ ರಂಗಕವಿಯು ನಾಟಕಗಳಲ್ಲಿ ಪ್ರಿಯಕರ, ಪ್ರಿಯತಮೆಯ ಆಲಿಂಗನಕ್ಕೆ ಅಥವಾ ಕೂಡುವ ಸನ್ನಿವೇಶಕ್ಕೆ ತಕ್ಕಂತೆ ಕಥೆಯ ಭಾವಾರ್ಥವನ್ನು ಒಳಾರ್ಥವನ್ನು ತಿಳಿದುಕೊಂಡು ಆ ಜಾಗಕ್ಕೆ ರಂಗಗೀತೆಗಳನ್ನು ಬರೆಯುತ್ತಿದ್ದನು. ಅದು ಯುವ ಪೀಳಿಗೆಗೆ ಆಕರ್ಷಿತವಾಗುತ್ತಿದ್ದದು ಕಂಡುಬರುತ್ತದೆ.

ನಟನು, ನಟಿಯು ರಂಗಭೂಮಿಯಲ್ಲಿ ದೇಹದ ಆಂಗಿಕ ಚಲನವಲನೆಯ ಮೂಲಕ ನರ್ತಿಸಿ ಪ್ರೇಕ್ಷಕರನ್ನು ಆಕರ್ಷಿಸುತ್ತಿದ್ದರು, ಇಂದಿಗೂ ಆ ಪರಿಸರವಿದೆ. ಸಿನಿಮಾದ ಟ್ಯೂನ್‌ಗಳ ಬಳಕೆ ಮಾಡಿ ಈ ಪ್ರೇಮದ ಹಾಡುಗಳನ್ನು ಸಂಗೀತ ಸಂಯೋಜಕರು ಮಾಡುತ್ತಿರುವ ಇತ್ತೀಚಿನ ಬೆಳವಣಿಗೆಯ ಪ್ರತೀಕವಾಗಿದೆ.

ಭಾಷೆ

ಪ್ರೀತಿ, ಪ್ರೇಮದ ಹಾಡುಗಳಲ್ಲಿ ಸಾಂಪ್ರದಾಯಕವಾದ ಮಲ್ಲಿಗೆ, ಮಾವು, ದುಂಬಿ, ಹೂವು, ಗಿಳಿ, ಕೋಗಿಲೆ, ಚಿಟ್ಟೆ ನವಿಲುಗಳೇ ಹೆಚ್ಚಾಗಿ ಬರುತ್ತವೆ. ಇವು ಹೆಣ್ಣಿಗೆ ಹೋಲಿಸಲ್ಪಡುತ್ತವೆ. ಪುರುಷ ಪ್ರಧಾನ ಸಮಾಜವು ಸಹಜವಾಗಿ ಹೆಣ್ಣನ್ನು ಕುರಿತ ಇಂತಹ ಹಾಡುಗಳನ್ನು ಸೃಷ್ಟಿಸುವುದು ಕಾಣುತ್ತೇವೆ.

ಪ್ರೀತಿ, ಪ್ರೇಮ, ಪ್ರಣಯದ ರಂಗಗೀತೆಗಳ ಭಾಷೆಯು ರಮ್ಯವಾದ ಕಲ್ಪನಾ ಲೋಕಗಳನ್ನು ಸಮೃದ್ಧಿಯ ಲೋಕಗಳನ್ನು ಬಣ್ಣಿಸಲು ತಕ್ಕಂತೆ ರೂಪುಗೊಂಡಿರುವ ಅಲಂಕಾರಿಕ ಭಾಷೆ, ಇದರಲ್ಲಿ ರಮ್ಯ ಲೋಕಗಳನ್ನು ಹಿಡಿಯಬಹುದೇ ಹೊರತು ವಾಸ್ತವವನ್ನಲ್ಲ ಇಲ್ಲಿನ ಪದಗಳಿಗೆ ಲಯಗಾರಿಕೆಯ ಕಾರಣಕ್ಕಾಗಿ ಅರ್ಥವಿದೆಯೇ ಹೊರತು ನಿಜವಾದ ಅರ್ಥಗಳಿಲ್ಲ. ಇಲ್ಲಿ ವಾಸ್ತವಾತೀತ ಲೋಕನಿರ್ಮಾಣವು ಮುಖ್ಯ ಉದ್ದೇಶವಾಗಿದೆ.

ಈ ಗೀತೆಗಳಲ್ಲಿ ಅಂತ್ಯಪ್ರಾಸ, ಕ್ರಿಯಾಪದದ ಬಳಕೆಯು ಹೆಚ್ಚಾಗಿ ಕಂಡುಬರುತ್ತವೆ. ಕವಿಯು ಸಾಮಾನ್ಯ ಜನರಿಗೂ ಅರ್ಥವಾಗುವ ಆಡು ಭಾಷೆಯನ್ನೇ ಬಳಸಿದ್ದಾನೆ.

ರಚನಾವಿನ್ಯಾಸ

ಪ್ರಸ್ತುತ ಪದ್ಯದಲ್ಲಿ ಕವಿಯು ನವೀನತೆಗೆ ಕಟ್ಟುಬಿದ್ದು ಗಂಡು, ಹೆಣ್ಣಿನ ನಡುವೆ ನಡೆಯುವ ಮುಖತಃ ಚರ್ಚೆಯಂತಿದೆ. ಇದು ಬಹುಶಃ ಯುಗಳ ಗೀತೆಯಂತಿದೆ. ಎರಡು ಸಾಲು ಹೆಣ್ಣು ಹೇಳುವ

ಎರಡು ಸಾಲು ಗಂಡು ಹೇಳುವಂತಹ ಕಾಮಾತುರತೆಯ ಸಂಕೇತದಂತಿದೆ. ಈ ಪದ್ಯದಲ್ಲಿ ಪ್ರಾಸಗಳನ್ನು ಗುರುತಿಸಬಹುದು. ಕೊನೆಯ ಎರಡು ಸಾಲಿನ ಪದ್ಯದಲ್ಲಿ ಅರ್ಥಕೆಡುವ ಸಂಭವವಿದೆ ಎಂದು ಭಾವಿಸಿ ಕವಿಯು ಅಂತ್ಯಪ್ರಾಸ ಬಳಸಿಲ್ಲ.

ಶೃಂಗಾರ ಗೀತೆ

ಯಾವುದೇ ನಾಟಕಗಳಲ್ಲಿ ಶೃಂಗಾರ ರಸಭರಿತವಾದ ಹಾಡುಗಳಿರುವುದು ನಾಟಕದ ಒಂದು ಅಂಗ ಎನಿಸಿದೆ. ಕಥೆಗೆ ಸಂಬಂಧವಿರದಿದ್ದರೂ ಇಂತಹ ಹಾಡುಗಳಿಗಾಗಿಯೇ ಕೆಲ ಸನ್ನಿವೇಶಗಳನ್ನು ಸೃಷ್ಟಿಸಲಾಗುತ್ತಿದೆ. ಹೆಣ್ಣಿಗೆ ಗಂಡೋ, ಗಂಡಿಗೆ ಹೆಣ್ಣೋ ಕಾಮಕ್ಕಾಗಿ ಕರೆಯುವ ಶೃಂಗಾರ ರಸಭರಿತ ಹಾಡುಗಳು ಒಂದು ರೀತಿಯಲ್ಲಿ ನಾಟಕಕ್ಕೆ ಆಕರ್ಷಣೆಯನ್ನುಂಟು ಮಾಡುತ್ತವೆ. ಅಂತಹ ಹಾಡುಗಳನ್ನು ಇಲ್ಲಿ ಪರಿಶೀಲಿಸಬಹುದು.

ಸಾಹಿತ್ಯ ರಚನೆ : ದಿವಂಗತ ಆರ್. ಭರಮಲಿಂಗಪ್ಪ ಮಾಸ್ತರರು **ನಾಟಕ : ಚಂದ್ರಹಾಸ**

ರಾಗ : ಹಂಸಧ್ವನಿ **ತಾಳ : ತ್ರಿತಾಳ**

"ಮಧುವನಾ ಮಧುರವನ
ಮುದವಾಂತ ಮದನನ ಸುಖ ಸದನ ||ಪ||
ರಸಿಕ ವಸಂತನ ಸ್ವಾಗತ ಸಾಧನ
ವಿಕಸಿತ ವದನ ವಿಲಾಸ ಚೇತನ
ಹಾಸ ತೋಷ ನವಲಾಸ್ಯ ಪೂರಣ"[೩] ||೧||

* * *

ರಾಗ : ಕೇದಾರ **ತಾಳ : ತ್ರಿತಾಳ**

"ಹಾಡಿ ನಲಿಯುವೆ ಮೋಹನ
ಶೃಂಗಾರ ಸೌಂದರ್ಯ ಪ್ರೇಮ ಕಥನ ||ಪ||
ಮಧು ಝೇಂಕಾರ ಗೆಜ್ಜೆಯನಾದ
ಲಯಗತಿ ಹೆಜ್ಜೆಯ ಶೃತಿ ಸಂವಿಧಾನ
ರಾಗ ಮಾಧುರ್ಯದಾಲಾಪನಾ
ಸವಿ ಭಾವ ಬೆರೆತ ಮೃದು ಮಿಲನ"[೪] ||೧||

ವಸ್ತು-ವಿಷಯ:- ಇಂತಹ ಅನೇಕ ರಂಗಗೀತೆಗಳು ಬಳ್ಳಾರಿ ಜಿಲ್ಲೆಯ ರಂಗ ಕವಿಗಳು ರಂಗಭೂಮಿಗೆ ವರದಾನವಾಗಿ ನೀಡಿದ್ದಾರೆ. ಈ ಮೇಲಿನಂತಹ ಗೀತೆಗಳು ಗಂಡು, ಹೆಣ್ಣು ಪಾತ್ರಗಳು ಹಾಡುವರು ಇಂತಹ ಹಾಡಿನಲ್ಲಿ ಶೃಂಗಾರತೆ ಉಳ್ಳ ವಸ್ತುವನ್ನೇ ಹೊಂದಿರುತ್ತವೆ. ನಾಟಕಕಾರನು ನಾಟಕವನ್ನು

ಬರೆಯುವಂತಹ ಸಂದರ್ಭದಲ್ಲಿ ಇಂತಹ ಶೃಂಗಾರತೆ ಹಾಡುಗಳಿಗೆ ಕಥೆಯಲ್ಲಿ ಅಲ್ಲಲ್ಲಿ ಸನ್ನಿವೇಶವನ್ನು ಸೃಷ್ಟಿಸುತ್ತಾನೆ. ಅಂದರೆ ದುಃಖಿದ ಪಾತ್ರಗಳು ದುಃಖಿತರಾದಾಗ ಕಥೆಗಾರ ಕಥೆಗೆ ಸಂಬಂಧವಿರದಿದ್ದರೂ ಅಲ್ಲಿ ಇಂತಹ ಶೃಂಗಾರ ಗೀತೆಗಳಿಗೆ ಎಡೆ ಮಾಡಿಕೊಟ್ಟಿರುತ್ತಾನೆ.

ಕವಿ ಅದರಂತೆ ಕೆಲ ಸಿನಿಮಾದ ಟ್ಯೂನ್‌ಗಳನ್ನು ಗಮನದಲ್ಲಿಟ್ಟುಕೊಂಡು ಸಹ ಗೀತೆರಚನೆ ಮಾಡಬಹುದು. ಇಲ್ಲವೇ ಸ್ವತಂತ್ರವಾಗಿ ಸಾಹಿತ್ಯ ಬರೆಯಬಹುದು. ಅದರಂತೆ ರಾಗ ಸಂಯೋಜಕರು ಗೀತೆಯನ್ನು ವಿಭಿನ್ನ ಶೃಂಗಾರತೆಯ ಹಾಡಿಗೆ ಹಾಕುವ ಸಂಗೀತವನ್ನೇ ಅವನು ಮಾಡಲೆತ್ನಿಸುವನು. ಹಾಗೆಯೇ ನಟ ನಟಿಯರು ನಟನೆಯ ಮೂಲಕ ತಮ್ಮ ನಗುವಿನ ಮಂದಹಾಸದಲ್ಲಿ ಪ್ರೇಕ್ಷಕರನ್ನು ಆಕರ್ಷಿಸುವಂತಹ ಪಾತ್ರ ನಿರ್ವಹಿಸುವರು.

ಶೃಂಗಾರ ಗೀತೆಗಳು ಕಾಮದ ಆತುರತೆಯನ್ನು ಪ್ರಚೋದಿಸುತ್ತವೆ. ಹಾಗೆಯೇ ಸೌಂದರ್ಯದ ವರ್ಣನೆಯನ್ನು ಮನಮೋಹಕವಾಗಿ ಅವು ಚಿತ್ರಿಸುತ್ತವೆ. ಇಂತಹ ಹಾಡುಗಳು ಯುವ ಪ್ರೇಕ್ಷಕರನ್ನು ಸಹಜವಾಗಿ ಆಕರ್ಷಿಸುತ್ತವೆ.

ಭಾಷೆ

ಬಹುಶಃ ಇಂತಹ ಶೃಂಗಾರ ಗೀತೆಗಳಲ್ಲಿ ಸುಂದರ ಭಾಷೆಯಲ್ಲಿ ಹೊರ ಹೊಮ್ಮಿದ ಶೃಂಗಾರ ಸಾಹಿತ್ಯವನ್ನು ಕಾಣಬಹುದು. ಹಾಗೆಯೇ ಮಧ್ಯಪ್ರಾಸ ಅಂತ್ಯಪ್ರಾಸವು ಬಳಕೆಯಾಗಿರುತ್ತವೆ.

ಶೃಂಗಾರ ಗೀತೆಗಳಲ್ಲಿ ಸಂಸ್ಕೃತ ಮಿಶ್ರಿತ ಕನ್ನಡವನ್ನು ಬಳಸಲಾಗಿದೆ. ನಂತರ ಪ್ರೇಕ್ಷಕ ವರ್ಗದ ಜನರಿಗೆ ಸಾಹಿತ್ಯವು ಅರ್ಥವಾಗುತ್ತದೆ.

ಕವಿಯು ಇಲ್ಲಿ ಮೊದಲನೇ ಪದ್ಯದಲ್ಲಿ ವನ, ಸದನ, ಸಾಧನ, ಚೇತನ ಎಂಬ ಸೌಂದರ್ಯ ಪೂರಿತವಾದ ಲೋಕವನ್ನು ನಿರ್ಮಿಸಿದ್ದಾನೆ. ಹಾಗೆಯೇ ಎರಡನೇ ಪದ್ಯದಲ್ಲಿ ಮೋಹನ, ಕಥನ, (ಅರ್ಥಕೆಡದಂತೆ ಪ್ರಾಸವನ್ನು ಬಿಟ್ಟಿದ್ದಾನೆ.) ಸಂವಿಧಾನ, ಆಲಾಪನಾ, ಮಿಲನ ಎಂಬಂತಹ ಪದಗಳನ್ನು ಕೂಡುವಿಕೆಯ ಸಂಕೇತವಾಗಿ ಬಳಸಿದ್ದಾನೆ. ಗೀತೆಯು ಅರ್ಥಕೆಡದಂತೆ ಮೂರನೇ ಸಾಲಿನಲ್ಲಿ ಬೇರೆ ಅರ್ಥವನ್ನು ಬಳಸಿರುವುದನ್ನು ಕಾಣಬಹುದು.

ರಚನಾ ವಿನ್ಯಾಸ

ಮೊದಲನೆಯ ಪದ್ಯದಲ್ಲಿ ಎರಡು ಚರಣಗಳು ಒಂದು ಪಲ್ಲವಿ, ಮೂರು ಚರಣಗಳ ಒಂದು ಪದ್ಯದಿಂದ ಕೂಡಿದೆ. ಎರಡನೆಯ ಪದ್ಯದಲ್ಲಿ ಎರಡು ಚರಣಗಳು ಒಂದು ಪಲ್ಲವಿ, ನಾಲ್ಕು ಚರಣಗಳ ಒಂದು ಪದ್ಯದಿಂದ ಕೂಡಿರುವುದನ್ನು ಕಾಣಬಹುದಾಗಿದೆ. ಕೊನೆಗೆ ಪ್ರಾಸವನ್ನು ತೊರೆಯದೇ ಇರುವುದು ಕಂಡುಬಂದಿದೆ. ಇಂತಹ ಹಾಡುಗಳು ಪ್ರೇಮಾಂಕುರಕ್ಕೆ ಎಡೆಮಾಡಿಕೊಡುತ್ತವೆ ಎಂದು ಹೇಳಬಹುದು.

ಶೋಕಗೀತೆ

ಶೋಕಗೀತೆಗಳು ಪೌರಾಣಿಕ ನಾಟಕಗಳಲ್ಲಿ ಪ್ರೇಕ್ಷಕರ ಮನಕರಗಿಸುವ ಹಾಡುಗಳಾಗಿ ಹೊರಹೊಮ್ಮಿವೆ. ಈ ಗೀತೆಗಳು ನಾಟಕದ ಅವಿಭಾಜ್ಯ ಅಂಗಗಳೆಂದು ಕರೆಯಬಹುದು. ಏಕೆಂದರೆ ಪಾತ್ರಧಾರಿಗಳು ದುಃ

ಖಿಕ್ಕೊಳಗಾದಾಗ ಪ್ರೇಕ್ಷಕರು ಲೊಚಗುಡುತ್ತಲೇ ದುಃಖಿತರನ್ನಾಗಿಸುತ್ತವೆ. ಗಂಡನನ್ನು ಹೆಂಡತಿ ಕಳೆದುಕೊಂಡಾಗ ಅಥವಾ ತಾಯಿ ಮಗುವನ್ನು ಕಳೆದುಕೊಂಡಾಗ ಬರುವಂತ ದುಃಖಮಯ ಹಾಡುಗಳೇ ಶೋಕಗೀತೆಗಳಾಗಿವೆ ಅಂತಹ ಶೋಕ ಗೀತೆಗಳನ್ನು ಗಮನಿಸಬಹುದು.

ಸಾಹಿತ್ಯ ರಚನೆ : ದಿವಂಗತ ಆರ್. ಭರಮಲಿಂಗಪ್ಪ ಮಾಸ್ತರರು

ನಾಟಕ : ರಕ್ತರಾತ್ರಿ (ಉತ್ತರೆ ಹಾಡು)

ರಾಗ : ಮಿಶ್ರ (ಕಾನಡ) **ತಾಳ : ಕೇರವ**

"ಮನ ವೀಣೆಯು ತಾ ನುಡಿಯುತಿದೆ
ಅನುರಾಗವು ತಾ ಪಾಡುತಿದೆ
ಪ್ರಿಯಕರಾ ಚಂದಿರಾ ಬಾ ಬಾ ಬಾ ಬಾ ||ಪ||
ನಾ ಸುಮದ ಸೊಂಪು ನೀನದರ ಕಂಪು
ಒಲುವೆದೆಯ ಜೇನ ನಿಧಿ ಪೆಂಪು
ಭೋಗ ಭಾಗ್ಯ ಬೇಗ ತಾರ ||೧||
ಕೊಳಲೂದೆ ಗಾಳಿ ಸುಮಭ್ರಮರ ಕೇಳಿ
ಹೃದಯಾಳದಲ್ಲಿ ಮುದವರಳಿ
ಪ್ರೀತಿ ಜ್ಯೋತಿ ಶಾಂತಿ ತೋರಾ"[೫] ||೨||

ವಸ್ತು-ವಿಷಯ:- ಈ ಮೇಲಿನ ಪದ್ಯವು ಉತ್ತರೆಯು ತನ್ನ ಗಂಡನ ಫೋಟೋವನ್ನು ಹಿಡಿದುಕೊಂಡು ದುಃಖ ತಪ್ತಳಾಗಿ ಹಾಡುವ ಹಾಡಾಗಿದೆ. ಇಂತಹ ಹಾಡುಗಳು ಪೌರಾಣಿಕ ನಾಟಕಗಳಲ್ಲಿ ವ್ಯಾಪಕವಾಗಿ ಕಾಣಿಸಿಕೊಳ್ಳುತ್ತವೆ. ನಾಟಕಕಾರನಾದವನು ಬರೆದಂತಹ ಇಂತಹ ಶೋಕಗೀತೆಗಳನ್ನೊಳಗೊಂಡ ನಾಟಕಗಳನ್ನು ಬರೆದಿರುವುದೂ ಉಂಟು. ಅವುಗಳ ಸನ್ನಿವೇಶ, ಸಂದರ್ಭ ಅರಿತ ರಂಗಕವಿಗಳು ಸಾಹಿತ್ಯ ಬರೆಯುತ್ತಾರೆ. ರಾಗಸಂಯೋಜಕರು ಮೃದುವಾಗಿ, ನಯವಾಗಿ, ವಿಲಂಬಿತವಾಗಿ ಎಳೆದು ಹಾಡುವಂತೆ ಗಾಯಕರಿಗೆ ತಿಳಿಸುವರು.

ನಾಟಕದಲ್ಲಿ ಇಂತಹ ದುಃಖದ ಸನ್ನಿವೇಶಗಳನ್ನು ಕಥೆಗಾರ ಪ್ರೇಕ್ಷಕರ ಮನವರಳಿಸುವ ಹಾಗೆ ಸೃಷ್ಟಿಸುತ್ತಾನೆ. ನಾಟಕ ಯಶಸ್ಸು ಪಡೆಯುತ್ತದೆ. ನಾಯಕಿಯು ನಾಯಕನ ಬರುವಿಕೆ ಹಾಡುಗಳನ್ನು ಸಂಕಷ್ಟಕ್ಕೆ ಒಳಗಾದ ಸ್ತ್ರೀ ಬದುಕಿನ ವಿರಹವೇದನೆಯನ್ನು ಇಂತಹ ಶೋಕಗೀತೆಗಳ ಮೂಲಕ ವ್ಯಕ್ತಪಡಿಸುತ್ತಾನೆ.

ಭಾಷೆ

ಶೋಕಗೀತೆಗಳ ಭಾಷೆಯು ಜನಸಾಮಾನ್ಯರಿಗೆ ತಿಳಿಯುವಂತಹ ಹಾಡುಗಳಾಗಿವೆ. ಬಿಡಿ ಬಿಡಿ ಪದಗಳ ಪ್ರಾಸಯುಕ್ತ ನುಡಿಗಟ್ಟುಗಳ ಜೋಡಣೆಯಿಂದ ಕೂಡಿರುತ್ತವೆ. ಹಾಡಲಾಗುವ ಇಂತಹ

ಹಾಡುಗಳು ಕೇಳಿದರೆ ಮೈನವಿರೇಳಿಸುವಂತಿರುತ್ತವೆ. ಇಲ್ಲಿ ವೀಣೆ, ಕಂಪು, ಜೇನು, ಗಾಳಿ, ಭ್ರಮರ ಶಾಂತಿ ಇವೆಲ್ಲ, ಶೃಂಗಾರದ ದುಃಖದಂತಿರುವ ಶೋಕಗೀತೆಯ ಪರಿಕರಗಳಾಗಿವೆ ಎಂದು ಹೇಳಬಹುದು.

ರಚನಾ ವಿನ್ಯಾಸ

ಈ ಪದ್ಯದಲ್ಲಿ ಮೂರು ಚರಣಗಳ ಒಂದು ಪಲ್ಲವಿ, ಮೂರು ಚರಣಗಳ ಎರಡು ಪದ್ಯವನ್ನು ಮತ್ತು ಸಾಲುಗಳ ಕೊನೆಯಲ್ಲಿ ಎಳೆತದ, ದುಃಖದ (ಬಾ ಬಾ, ತಾರಾ, ತೋರಾ) ಶೋಕಗೀತಾ ಸಂಕೇತದ ಆಲಾಪನವನ್ನು ಕಾಣಬಹುದಾಗಿದೆ.

ನೃತ್ಯದ ಗೀತೆಗಳು

ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ, ನಾಟಕಗಳಲ್ಲಿ ನೃತ್ಯದ ಗೀತೆಗಳು ಬಹುಮುಖ್ಯ ಪಾತ್ರವಹಿಸುತ್ತವೆ. ನಟ ನಟಿಯರು ಸಂತೋಷ ಅತಿ ಹೆಚ್ಚಾದಾಗ ಹಾಡುವಂತಹ ಹಾಡಾಗಿವೆ. ಇಲ್ಲಿ ಮುಖ್ಯವಾಗಿ ಪೌರಾಣಿಕ ಕಥಾವಸ್ತುವನ್ನುಳ್ಳ ನಾಟಕಗಳಲ್ಲಿ ಕಂಡುಬರುವ ನೃತ್ಯದ ಗೀತೆಗಳನ್ನು ಇಲ್ಲಿ ಗಮನಿಸಲಾಗಿದೆ. ರಾಜ-ರಾಣಿ ಸೇರಿ ಹಾಡುವ ಹಾಡಾಗಿರಬಹುದು, ರಾಜರ ಮುಂದೆ ನರ್ತಕಿಯರು ನೃತ್ಯ ಮಾಡಬಹುದಾದಂತಹ ಹಾಡುಗಳು ಸಹ ಆಗಿರಬಹುದು. ಅಂತಹ ಹಾಡು ಇಲ್ಲಿ ವಿಶ್ಲೇಷಿಸಬಹುದು.

ಸಾಹಿತ್ಯ ರಚನೆ : ಮ.ಬ.ಸೋಮಣ್ಣ **ನಾಟಕ : ಸತ್ಯಹರಿಶ್ಚಂದ್ರ**

ರಾಗ : ಯಾವುದೇ ರಾಗ ಅಳವಡಿಸಿಕೊಳ್ಳಬಹುದು **ತಾಳ : ಕೇರವ**

"ಬಾರಾsss ಧೀರ ಗಂಭೀರ ಸತ್ಯೇಂದ್ರ
ತಾರಾsss ಸ್ವರ್ಗ ಸೌಖ್ಯ ಹರಿಶ್ಚಂದ್ರ ||ಪ||
ಬಾಡದ ಹೂವು ಬೇಡಿ ಬಂದಿಹೆವು
ನೀಡುವೆವು ನಿಮಗೆ ನಮ್ಮನೆ ನಾವು
ಮುದತಾಳಿ ಬಾs ಮಧು ಹೀರು ಬಾs
ವಿರಹದುರಿಯ ನೀನಾರಿಸು ಬಾ ಬಾ ||೧||
ನಯನವು ನಾಟ್ಯವ ನೋಡಿ ನಲಿಯಿತು
ನಾಲಿಗೆ ನಮ್ಮೋಡನೆ ಸವಿ ನುಡಿಯಿತು
ನಾಸಿಕ ನಮ್ಮಯ ಸೌಗಂಧ ಸವಿಯಿತು
ಗಾನದಿ ಕರ್ಣಾನಂದ ಪಡೆಯಿತು
ಪಂಚೇಂದ್ರಿಯ ತನುವೊಂದೇಕೆ ದೂರ
ತೋಳಾಲಿಂಗನದಿ ಬಂಧಿಸು ಬಾರಾ"[೨] ||೨||

ವಸ್ತು-ವಿಷಯ: ಈ ಪದ್ಯದ ವಸ್ತು ವಿರಹವೇ ಆಗಿದೆ. ಹರಿಶ್ಚಂದ್ರನ ಆಸ್ಥಾನದಲ್ಲಿ ಬಂದು ವಿಶ್ವಾಮಿತ್ರನ ಹಣತೆಯ ಮೇರೆಗೆ ಬಂದ ನೃತ್ಯಗಾರ್ತಿಯರು ಹರಿಶ್ಚಂದ್ರನ ಎದುರಿನಲ್ಲಿ ನರ್ತಿಸುತ್ತಾ ಹಾಡುವ ಗೀತೆ.

ಹೀಗೆ ಅನೇಕ ನಾಟಕಗಳಲ್ಲಿ ಇಂತಹ ನೃತ್ಯದ ಹಾಡುಗಳಿರುವುದನ್ನು ಕಾಣುತ್ತೇವೆ. ನಾಟಕಕಾರನು ಇಂತಹ ನೃತ್ಯದ ಸನ್ನಿವೇಶವನ್ನು ನಾಟಕಗಳಲ್ಲಿ ಪ್ರೇಕ್ಷಕರನ್ನು ಗಮನದಲ್ಲಿಟ್ಟುಕೊಂಡು ರಚಿಸಿ ಯಶಸ್ವಿಯಾಗಿದ್ದಾರೆ. ನಾಟಕವು ನೋಡುವಾಗ ಪ್ರೇಕ್ಷಕರು ಬೇಜಾರಾಗಬಾರದೆಂಬ ದೃಷ್ಟಿ ಇಟ್ಟುಕೊಂಡು ನಟ ನಟಿಯರನ್ನು ಕೂಡಿಸಿ ಹಾಡಿಸುವ ಸನ್ನಿವೇಶವನ್ನು ನಾಟಕಕಾರ ಸೃಷ್ಟಿಸಬೇಕಾಗುತ್ತದೆ. ಹಾಡುವಾಗ ಸಂಗೀತ ಕುಣಿತಗಳು ಪ್ರೇಕ್ಷಕರಲ್ಲಿ ಸಂತೋಷವನ್ನುಂಟುಮಾಡಿ ಒನ್ಸ್‌ಮೋರ್‌ಗಳಿಗೆ ದಾರಿಮಾಡಿಕೊಡುತ್ತವೆ.

ಕವಿಗಳು ನಾಟಕದ ಮಧ್ಯದಲ್ಲಿ ಇಂತಹ ಹಾಡುಗಳಿಗೆ ಕಥೆಯನ್ನು ಅರ್ಥಮಾಡಿಕೊಂಡು ನೃತ್ಯಕ್ಕೆ ಬೇಕಾದ ಹಾಡನ್ನು ಬರೆಯಲೆತ್ನಿಸುವರು. ಸಂಗೀತಗಾರರು ನಟ ನಟಿಯರಿಗೆ ಕಲಿಸಿ ನಾಟಕದ ಅಂತಹ ಸನ್ನಿವೇಶವನ್ನು ಯಶಸ್ವಿಪೂರಿತವಾದ ಸಂಗೀತ ಮಾಡುವರು. ನಟ ನಟಿಯರು ತಮ್ಮ ಆಂಗಿಕ ಚಲನವಲನಗಳನ್ನು ವಿಸ್ತಾರಗೊಳಿಸುತ್ತಾ ಪ್ರೇಕ್ಷಕರನ್ನು ಗಮನಸೆಳೆಯುವರು.

ರಚನೆಯ ಕ್ರಮದಲ್ಲಿ ಹೂವು, ಮಧು, ದುಂಬಿ, ಶ್ರೀಗಂಧ, ಪಂಚೇಂದ್ರಿಯಗಳ ಹೋಲಿಕೆ ರಮ್ಯ ಲೋಕವನ್ನು ಸೃಷ್ಟಿಸಿ ಬರೆಯುತ್ತಾರೆ.

ಭಾಷೆ

ರಂಗ ಕವಿಗಳು ನೃತ್ಯದ ಗೀತೆಗಳ ಭಾಷೆ ಜನಸಾಮಾನ್ಯರಿಗೆ ಮುಟ್ಟುವಂತಹ ಸಾಹಿತ್ಯ ಬರೆದಿರುತ್ತಾರೆ. ಸಂಸ್ಕೃತ ಮಿಶ್ರಿತ ಕನ್ನಡವನ್ನು, ಶುದ್ಧ ಕನ್ನಡವನ್ನು ಬಳಸಿರುತ್ತಾರೆ. ಬಿಡಿ ಬಿಡಿ ನುಡಿಗಳ ನುಡಿಗಟ್ಟುಗಳನ್ನು ಹಾಗೆಯೇ ಅಂತ್ಯಪ್ರಾಸವನ್ನು ಬಳಸಿ ಹಾಡನ್ನು ರಚಿಸಿರುತ್ತಾರೆ.

ರಚನಾ ವಿನ್ಯಾಸ

ಪ್ರಸ್ತುತ ಪದ್ಯ ಎರಡು ಚರಣಗಳ ಒಂದು ಪಲ್ಲವಿಯಿಂದ ಕೂಡಿದೆ. ಮೊದಲನೇ ಅನುಪಲ್ಲವಿಯು ನಾಲ್ಕು ಚರಣದ ಒಂದು ಪದ್ಯದಿಂದ ಕೂಡಿದೆ. ಹಾಗೆಯೇ ಎರಡನೇ ಅನುಪಲ್ಲವಿಯು ಆರು ಚರಣದ ಒಂದು ಪದ್ಯದಿಂದ ಕೂಡಿದ್ದಾಗಿದೆ. ಕೊನೆಯಲ್ಲಿ ಅಂತ್ಯಪ್ರಾಸವನ್ನು ಸಹ ಕಾಣಬಹುದಾಗಿದೆ. ಇದು ಹರಿಶ್ಚಂದ್ರನನ್ನು ವರ್ಣಿಸುತ್ತಾ ನರ್ತಕಿಯರು ಹಾಡುವ ಹಾಡಾಗಿದೆ.

ಅಡಿಟಿಪ್ಪಣಿ

೦೧. ಸಂದರ್ಶನ: ಮ.ಬ.ಸೋಮಣ್ಣನವರು ನೀಡಿದ್ದು, ಹೊಸಪೇಟೆ, ದಿ.೦೩.೦೮.೨೦೦೯

೦೨. ಡಾ. ಆರ್.ಬಿ.ದಿವಾಕರ್ ಹಾಗೂ ಡಾ.ಆರ್.ಬಿ.ಕುಮಾರ್, (ಸಂ) ಆರ್.ಭರಮಲಿಂಗಪ್ಪ ಮಾಸ್ತರರ ರಂಗಗೀತೆಗಳು, ೨೦೦೫, ಪುಟ-೧೧೬

೦೩. ಅದೇ, ಪುಟ-೨೩

೦೪. ಅದೇ, ಪುಟ-೧೮

೦೫. ಅದೇ, ಪುಟ-೨೫

೦೬. ಸಂದರ್ಶನ: ಮ.ಬ.ಸೋಮಣ್ಣನವರು ನೀಡಿದ್ದು, ಹೊಸಪೇಟೆ, ದಿ.೦೩.೦೮.೨೦೦೯

ಅಧ್ಯಾಯ - ಐದು

ರಂಗಗೀತೆಗಳು ಮತ್ತು ಪ್ರೇಕ್ಷಕರು

ಅಧ್ಯಾಯ - ಐದು

ರಂಗಗೀತೆಗಳು ಮತ್ತು ಪ್ರೇಕ್ಷಕರು

ರಂಗಭೂಮಿಯ ಕಲೆ ಸಂಕೀರ್ಣಕಲೆಯಾಗಿದೆ. ಆದುದರಿಂದ ಅದು ಪ್ರೇಕ್ಷಕರಲ್ಲಿ ಉಂಟುಮಾಡುವ ಸಂವೇದನೆ ಅಥವಾ ಅನುಭೂತಿಯು ವೈವಿಧ್ಯಮಯವಾದುದು. ನಾಟಕದಿಂದ ಪಡೆಯುವ ಅನುಭವವನ್ನು ಪ್ರೇಕ್ಷಕನು ನಾಟಕದ ಸಮಗ್ರ ಚಿತ್ರಣದಿಂದ ಹೊಂದಬಲ್ಲವನಾಗಿದ್ದಾನೆ. ಏಕೆಂದರೆ ನಾಟಕದಲ್ಲಿ ನೋಡಿ ಅನುಭವಿಸಲು ಅವನಿಗೆ ಚಿತ್ರಕಲೆ, ಶಿಲ್ಪ, ಸಂಗೀತ, ಸಾಹಿತ್ಯ, ನೃತ್ಯ, ನಟನೆ ಈ ಎಲ್ಲ ಕಲೆಗಳೂ ಇವೆ.

ಪ್ರೇಕ್ಷಕರು ಪೌರಾಣಿಕ ನಾಟಕಗಳನ್ನು ನೋಡಲು ಹೋಗುತ್ತಿದ್ದುದು ಮುಖ್ಯವಾಗಿ ಮನರಂಜನೆಗೆ, ಪ್ರಖ್ಯಾತ ನಟನಟಿಯರ ಹಾಡುಗಳನ್ನು ಕೇಳುವುದಕ್ಕೆ, ಅಭಿನಯ ವೈಖರಿಯನ್ನು ನೋಡಿ ಆನಂದಿಸುವುದಕ್ಕೆ. ಹೀಗಾಗಿ ರಂಗಭೂಮಿಯ ಜೀವಂತಿಕೆ ಅಡಕವಾಗಿರುವುದು ಪ್ರೇಕ್ಷಕರಲ್ಲಿ. ಪ್ರೇಕ್ಷಕ ಬಂದರೆ ನಾಟಕ ನಡೆಯುತ್ತದೆ. ಬಾರದಿದ್ದರೆ ನಿಲ್ಲುತ್ತದೆ. ಪಾತ್ರಗಳಿದ್ದರೆ ಅದೊಂದು ನಾಟಕ ಹಾಗೆಯೇ ಅದರ ಪ್ರದರ್ಶನಕ್ಕೆ ಪ್ರೇಕ್ಷಕರಿದ್ದರೆ ಮಾತ್ರ ಅದು ನಾಟಕ. ಆದ ಕಾರಣ ನಾಟಕಗಳಿಗೆ ಪ್ರೇಕ್ಷಕ ಮುಖ್ಯ -ಅಗತ್ಯ. "ನಾಟಕ ಕಲೆಗೆ ಪಾತ್ರಧಾರಿ ಒಂದು ಕಣ್ಣಾದರೆ, ಪ್ರೇಕ್ಷಕ ಗಣ ಇನ್ನೊಂದು ಕಣ್ಣು. ನಾಟಕಕ್ಕೆ ಒಬ್ಬ ಪ್ರೇಕ್ಷಕನಿದ್ದರೆ ಸಾಲದು. ಭಿನ್ನರುಚಿ ಧರ್ಮಗಳ ಅನೇಕ ಪ್ರೇಕ್ಷಕರು ಏಕೀಭವಿಸಿ ಸಂಭವಿಸಿದ ಸಮರೂಪಿ ಸಮೂಹವಿದ್ದಾಗಲೇ ನಾಟಕ ಕಲೆಯ ವಿಶಿಷ್ಟ ಸ್ವರೂಪ ಸುವ್ಯಕ್ತವಾಗುತ್ತದೆ. ಆದುದರಿಂದಲೇ 'ನಾಟ್ಯಂ ಭಿನ್ನರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಂ' ಎಂದು ಹೇಳಿದ್ದಾರೆ."[1] ಹೀಗೆ ರಂಗಭೂಮಿಯ ಅಂಗವಾಗಿರುವ ಪ್ರೇಕ್ಷಕ ಪ್ರಾಚೀನ ಕಾಲದಿಂದಲೂ ನಾಟಕ ಕಲೆಯನ್ನು ಪ್ರೋತ್ಸಾಹಿಸುತ್ತ ಉಳಿಸಿಕೊಂಡು ಬಂದಿದ್ದಾನೆ.

ನಾವೆಲ್ಲಾ ಒಂದಿಲ್ಲೊಂದು ಕಲೆಯ ಉಪಾಸಕರಾಗಿದ್ದೇವೆ. ನಾಟಕವು ಒಂದು ಸಂಕೀರ್ಣ ಕಲೆಯಾದುದರಿಂದ ಅದು ಪ್ರದರ್ಶನ ಕಾಲದಲ್ಲಿ ಅದರ ಉಪಾಸಕನಾದ ಪ್ರೇಕ್ಷಕನ ಮೇಲೆ ಹೆಚ್ಚಿನ

ಪರಿಣಾಮವನ್ನು ಬೀರುತ್ತದೆ. ನಾಟಕ ಪ್ರದರ್ಶನ ಕಾಲದಲ್ಲಿ ಬರುವ ಅನೇಕ ಪೌರಾಣಿಕ ನಾಟಕ ರಂಗಗೀತೆಗಳು ಹಾಡುವಾಗ ಸ್ಪಂದಿಸುವುದು ಪ್ರೇಕ್ಷಕನಾದವನ ಸಹಜ ಗುಣವಾಗಿದೆ.

ನಮ್ಮ ಯುವಲೋಕ ಪ್ರೇಮ ಪ್ರಣಯ ಶೃಂಗಾರ ರಸಮಯ ಸನ್ನಿವೇಶಗಳ ಹಾಡುಗಳನ್ನು ಬಯಸಿದರೆ, ವಯಸ್ಸಾದವರು ಧರ್ಮ-ತತ್ವ-ನೀತಿಪರ ರಂಗಗೀತೆಗಳಿಗೆ ಮಾರು ಹೋಗುತ್ತಾರೆ. ವಿಚಾರವಂತರು ಪಾತ್ರಗಳ ಮಾತುಗಳ ಹಾಡುಗಳ ಧಾಟಿಯನ್ನು ಚಿತ್ತಗೊಟ್ಟು ಆಲಿಸುತ್ತಾರೆ. ಇನ್ನುಳಿದಂತೆ ಕಣ್ಣು ಕೋರೈಸುವ ದೃಶ್ಯಾವಳಿ ಮಧ್ಯ ಮಧ್ಯ ಇಡೀ ಪ್ರೇಕ್ಷಕರನ್ನು ನಗಿಸಿಬಿಡುವ ಹಾಸ್ಯಮಯ ರಂಗಗೀತೆಗಳನ್ನು ಎಲ್ಲರೂ ಬಯಸುತ್ತಾರೆ. ಹೀಗೆ ನಾಟಕವೆನ್ನುವುದು ವಿವಿಧ ಬಗೆಯ ಮನೋಭೂಮಿಕೆಯವರನ್ನೆಲ್ಲಾ ಆಕರ್ಷಿಸುವ ಶಕ್ತಿ ಪಡೆದಿದೆ.

"ನಾಟಕದ ಪಾತ್ರಗಳಿಂದ ಪ್ರಭಾವಿತರಾಗುವ ಎಲ್ಲಾ ವರ್ಗದ ಪ್ರೇಕ್ಷಕರೂ ರಸಭಾವಗಳ ಅನುಭೂತಿಗೆ ಒಳಗಾಗುವುದರಿಂದಲೇ ರಂಗಭೂಮಿ ಎಲ್ಲಾ ವರ್ಗದಜನರ ಮನರಂಜನೆಯ ಕೇಂದ್ರವಾಗಿದೆ. ಇನ್ನೊಬ್ಬರ ಅನುಭವಗಳಲ್ಲಿ ತಾವೂ ಭಾಗಿಗಳಾಗಬೇಕೆಂಬ ಇಚ್ಛೆ ಮಾನವರಲ್ಲಿದೆ."[3] ಆಯಾ ಪಾತ್ರಗಳು ದುಃಖಕ್ಕೊಳಗಾದಾಗ ಹಾಡುವ ರಂಗಗೀತೆಗಳಿಗೆ ಪ್ರೇಕ್ಷಕರು ಲೊಚಗುಡುತ್ತಲೇ ದುಃಖಿತರಾಗುತ್ತಾರೆ. ಇನ್ನು ಕೆಲವರಂತೂ ಕಣ್ಣೀರು ಸುರಿಸುವುದುಂಟು. ನಗೆಯ ಹಾಡು ಕೇಳಿದಾಗ ಕೊಕಾಸಿ ನಗುತ್ತ ಆನಂದಿಸುತ್ತಾರೆ. ಪಾತ್ರದ ಅಭಿನಯ ಹಾಡು ಮನಮುಟ್ಟಿದರೆ ಸಂತೋಷದಿಂದ ಚಪ್ಪಾಳೆ ತಟ್ಟಿ ಅಭಿನಂದಿಸುವರು. ಇಲ್ಲವಾಯಿತೆ ದುಡ್ಡು ಕೊಡುತ್ತಿದ್ದರು ಅಥವಾ ನೋಟಿನ ಹಾರ ಮಾಡಿಕೊಂಡು ಬಂದು ನಟ ಅಥವಾ ನಟಿಯರ ಕೊರಳಿಗೆ ಹಾಕುತ್ತಾರೆ. ಹೆಚ್ಚು ಖುಷಿ ಪಟ್ಟರೆ 'ಒನ್ಸ್ ಮೋರ್' ಎಂದು ಕೂಗಬಹುದು. ಹುರುಪೆದ್ದ ಪಾತ್ರಧಾರಿ ಮರಳಿ ಆ ಹಾಡನ್ನು ಹಾಡುವನು. ಹಾಡೂ ಬೋರಾದಾಗ 'ಸಾಕಪ್ಪೋ ಸಾಕು' ಎನ್ನುವರು. ಹಾಡನ್ನು ಹೇಳುವಾಗ ತಡವರಿಸಿದಾಗ ಅಪಹಾಸ್ಯ ಮಾಡುವರು. ಭಿಕ್ಷೆಯ ಸಂದರ್ಭ ಬಂದಾಗ ಹಾಡುಗಳನ್ನು ಹಾಡುತ್ತಿದ್ದರೆ ಮನಕರಗಿ ಕುಳಿತಲ್ಲಿಂದಲೇ ರಂಗದ ಕಡೆ ದುಡ್ಡು ಎಸೆಯುವರು. ಹೀಗೆ ಇಡೀ ನಾಟಕಕ್ಕೆ ಸ್ಪಂದಿಸುವ ಪ್ರೇಕ್ಷಕವರ್ಗವಿರುವುದರಿಂದಲೇ ನಾಟಕಕಾರನಾದವನು ಪ್ರೇಕ್ಷಕರನ್ನು ಗಮನದಲ್ಲಿಟ್ಟುಕೊಂಡೇ ನಾಟಕವನ್ನು ಮತ್ತು ಆ ನಾಟಕಕ್ಕೆ ಸಂಬಂಧಿಸಿದಂತೆ ಸನ್ನಿವೇಶಕ್ಕೆ ತಕ್ಕಂತೆ ರಂಗಗೀತೆಗಳನ್ನು ರಚಿಸಬೇಕಾಗುತ್ತದೆ.

ಪ್ರೇಕ್ಷಕರ ಕಣ್ಣಮುಂದೆ ಗೋಚರಿಸುವ ಪಾತ್ರಧಾರಿಗಳ ಮೂಲಕವೇ, ಪ್ರೇಕ್ಷಕರಿಗೆ ಕೇಳಿಸುವಂತೆ ಕಾಣಿಸುವಂತೆ ಅವರಾಡುವ ಮಾತು, ಹಾಡುಗಳಿಂದಲೇ ನಾಟಕಕಾರ ತನ್ನ ಅಭಿವ್ಯಕ್ತಿಯನ್ನು ಸಾಧಿಸಬೇಕು ಹೀಗೆ ನಾಟಕ ರಚನೆ ಮತ್ತು ಪೌರಾಣಿಕ ನಾಟಕದ ರಂಗಗೀತೆಗಳ ರಚನೆ ಉಳಿದ ಸಾಹಿತ್ಯ ಪ್ರಕಾರಗಳಿಗಿಂತ ತ್ರಾಸದಾಯಕವಾಗಿದೆ.

ಕಾಲಕಾಲಕ್ಕೆ ಪ್ರೇಕ್ಷಕರ ಗುಣ ಸ್ವಭಾವ ಆಸಕ್ತಿಗಳು ಬದಲಾಗುತ್ತಾ ಹೋಗುತ್ತವೆ. ಅವುಗಳಿಗನುಗುಣವಾಗಿ ರಂಗಕವಿ ರಂಗಗೀತೆಗಳ ರಚನೆ ಮಾಡುತ್ತಾನೆ. ಎಲ್ಲಾ ಕಾಲಕ್ಕೆ ಹೊಂದಿಕೊಳ್ಳುವಂತೆ

ರಂಗಗೀತೆಗಳನ್ನು ರಚಿಸಿದ ರಂಗಕವಿಗಳು ಇಂದು ಮಹಾರಂಗ ಕವಿಗಳಾಗಿದ್ದಾರೆ. ಸರ್ವಕಾಲಕ್ಕೂ ಉಳಿಯಬಲ್ಲ ಸತ್ವ ಒಂದು ರಂಗಗೀತೆಗೆ ಅಥವಾ ನಾಟಕಕ್ಕೆ ಲಭ್ಯವಾಗುವುದಕ್ಕೆ ರಂಗಕವಿ ಅಥವಾ ನಾಟಕಕಾರನ ಸಾಮರ್ಥ್ಯವೊಂದೇ ಕಾರಣವೇನೂ ಅಲ್ಲ. ಆ ನಾಟಕದ ರಚನೆಯ ಕಾಲದ ಪ್ರೇಕ್ಷಕ ಸಮೂಹಗಳ ಸಂರಚನೆಯೂ ಅಭಿರುಚಿಯೂ ಬಹಳ ಮಟ್ಟಿಗೆ ಕಾರಣವಾಗುತ್ತವೆಯೆಂಬುದು ನಾಟಕ ಕಲೆಯ ಇತಿಹಾಸದಿಂದ ವ್ಯಕ್ತವಾಗುತ್ತದೆ. ಯಾವ ಕಾಲದ ಪ್ರೇಕ್ಷಕ ಸಮೂಹಗಳು ಸಮಾಜದ ಎಲ್ಲ ವಲಯಗಳನ್ನು ಪ್ರತಿನಿಧಿಸುತ್ತಿದ್ದವೋ ಆ ಕಾಲದಲ್ಲೇ ಮಹಾನಾಟಕಗಳ ಸೃಷ್ಟಿಯೂ ಆಗಿದೆಯೆಂಬುದು ಗಮನಾರ್ಹ. ಇದರರ್ಥ ಪ್ರೇಕ್ಷಕರು ನಾಟಕ ರಚನೆ ಮತ್ತು ಪ್ರದರ್ಶನದಲ್ಲಿ ಒಂದು ಸಮೂಹ ಸಂಘಟಿತವಾದ ಅಂಗವೆಂದು ಪರಿಗಣಿತವಾಗಿದೆಯೆಂದು ತಿಳಿಯಬೇಕಾಗುತ್ತದೆ.

ಅಡಿಟಿಪ್ಪಣಿ

೦೧. ಡಾ.ಮೃತ್ಯುಂಜಯ ಹೊರಕೇರಿ, ರಂಗ - ವೃತ್ತಿರಂಗ, ೨೦೦೦, ಪುಟ-೧೬

೦೨. ಡಾ.ಹೆಚ್.ಕೆ.ರಂಗನಾಥ್, ಕನ್ನಡರಂಗಭೂಮಿ ವಿಕಾಸ, ೧೯೯೦, ಪುಟ-೨೫೪

ಅಧ್ಯಾಯ - ಆರು

ಉಪಸಂಹಾರ

೬.೧. ಅಧ್ಯಯನದ ಫಲಿತಗಳು

೬.೨. ಅಧ್ಯಯನದ ಹೊಸ ಸಾಧ್ಯತೆಗಳು

೬.೩. ರಂಗಗೀತೆಗಳ ಇತ್ತೀಚಿನ ಬೆಳವಣಿಗೆಗಳು

ಅಧ್ಯಾಯ - ಆರು

ಉಪಸಂಹಾರ

ಒಟ್ಟಾರೆಯಾಗಿ ಈ ಅಧ್ಯಾಯದಲ್ಲಿ ಪ್ರಸ್ತುತ ಸಂಪ್ರಬಂಧದಲ್ಲಿ ಕಂಡುಕೊಂಡಂತಹ ಫಲಿತಗಳ ಬಗ್ಗೆ ಚರ್ಚೆಮಾಡಲಾಗಿದೆ. ನಂತರ ಇನ್ನೂ ಅಧ್ಯಯನ ಆಗಬೇಕಾದ ಹೊಸ ಸಾಧ್ಯತೆಗಳನ್ನು ಕುರಿತು ಚರ್ಚಿಸಲಾಗಿದೆ. ಹಾಗೆಯೇ ರಂಗಗೀತೆಗಳ ಇಂದಿನ ಸ್ಥಿತಿ ಮತ್ತು ಒಲವುಗಳ ಬಗ್ಗೆ ವಿವರಿಸಲಾಗಿದೆ.

೬.೧. ಅಧ್ಯಯನದ ಫಲಿತಗಳು

ಹವ್ಯಾಸಿ ರಂಗಭೂಮಿಯು ಸಂಗೀತ, ಸಾಹಿತ್ಯ, ಚಿತ್ರ, ಶಿಲ್ಪದಂಥ ಕಲೆ ಹಾಗೂ ಕಲಾತಂತ್ರಗಳನ್ನು ಒಳಗೊಂಡ ಸಂಕೀರ್ಣ ಕಲೆಯಾಗಿದೆ. ಅದರಲ್ಲಿ ನಟನೆಯೂ ಒಂದಾಗಿದೆ. ನಟರು ಇಂದು ಸಂಕಷ್ಟಕ್ಕೆ ಒಳಗಾಗಿರುವುದನ್ನು ಕಾಣಬಹುದಾಗಿದೆ. ಅವರಿಗೆ ಜೀವಿಸಲಿಕ್ಕೆ ಭದ್ರಬುನಾದಿಯಾಗಿರುವ ಆರ್ಥಿಕ ಪರಿಸ್ಥಿತಿಯಿಂದ ಇಂದು ನಟರು ರಂಗಭೂಮಿಯಿಂದ ಹಿಂಜರಿಯುತ್ತಿದ್ದಾರೆ. ನಟನೆಯಲ್ಲಿ ಹೊಟ್ಟೆತುಂಬುವುದಿಲ್ಲ ಎಂದು ಬೇರೆ ವೃತ್ತಿಯಲ್ಲಿ ತೊಡಗಿಕೊಂಡಿದ್ದಾರೆ.

ನಾಟಕ ಮಂಡಳಿಗಳು ಇಂದು ಅಧಃಪತನಕ್ಕೆ ಇಳಿದಿವೆ. ಕಾರಣ ಮಂಡಳಿಯ ಆಂತರಿಕ ಹಾಗೂ ಬಾಹ್ಯ ಕಾರಣಗಳಿಂದ. ಅಂದರೆ ಆರ್ಥಿಕ ಸಂದಿಗ್ಧತೆ ಪರಿಸ್ಥಿತಿ ಉಂಟಾಗಿದೆ. ಮಂಡಳಿಗಳ ನಟರ ನಡುವಿನ ಭಿನ್ನಾಭಿಪ್ರಾಯಗಳು ಇದಕ್ಕೆ ಹೊರತಾಗಿಲ್ಲ. ಟಿ.ವಿ, ಸಿನಿಮಾ ಮಾಧ್ಯಮಗಳಿಂದ ಆಕರ್ಷಿತರಾಗಿ ಮಂಡಳಿಗಳನ್ನು ನಡೆಸುವವರ ಪಾಡು ಅಧೋಗತಿಗೆ ಹೋಗಿದೆ. ಮಂಡಳಿಗಳು ನಾಟಕದ ಅವಕಾಶ ಸಿಗದೆ ಇಂದು ಮುಚ್ಚುವಂತಹ ಸ್ಥಿತಿಗೆ ಬಂದೊದಗಿವೆ.

ಪಾರಂಪರಿಕ ರಂಗಗೀತೆಗಳನ್ನು ಇಂದು ಬರೆಯುವವರು ಕಡಿಮೆಯಾಗಿದ್ದಾರೆ. ಇಂದು ಹೊಸತನಕ್ಕೆ ಮಾರು ಹೋಗಿರುವ ಪ್ರೇಕ್ಷಕರನ್ನು ಸೆಳೆಯಲು ರಂಗಕವಿಗಳು ಹೊಸ ಹೊಸ ವಿಧಾನದ ಹಾಡುಗಳನ್ನು ಬರೆಯಬೇಕಾಗಿದೆ. ಅಂತವರ ಸಂಖ್ಯೆ ಕಡಿಮೆಯಾಗಿದೆ. ಹಾಗೆ ಹಳೆಯ ರಂಗಕವಿಗಳಿಂದ ಅವರು ಬರೆದ ರಂಗಗೀತೆಗಳು ಮರಣ ಹೊಂದಿದಾಗ ಅವರಿಂದಲೇ ಹೋಗುತ್ತಿವೆ. ಅಂತಹ ಹಾಡುಗಳು ಕಳೆದುಹೋಗುವ ಸಂದರ್ಭದಲ್ಲಿವೆ.

[illegible]

[illegible]

[illegible]

[illegible]

[illegible]

[illegible]

[illegible]

ಇಂದು ರಂಗಗೀತೆಗಳು ಆಧುನಿಕತೆಗೆ ಸಿಕ್ಕಿ ನಶಿಸಿ ಹೋಗುತ್ತಿವೆ. ದೂರದರ್ಶನ, ಸಿನಿಮಾ ಇಂತಹ ಮಾಧ್ಯಮಗಳು ಪ್ರೇಕ್ಷಕರನ್ನು ಆಕರ್ಷಿಸುತ್ತಿವೆ. ರಂಗಗೀತೆಗಳನ್ನು ಹಳೆಯ ಹಾಡುಗಳಂತೆ ಹಾಡುತ್ತಿದ್ದರೆ ಪ್ರೇಕ್ಷಕರಿಗೆ ಹಿಡಿಸುವುದಿಲ್ಲ. ಹಾಗಾಗಿ ಸಂಗೀತವನ್ನು ಹೊಸವಿಧಾನಕ್ಕೆ ಸಂಯೋಜಿಸುವವರ ಸಂಖ್ಯೆ ಕ್ಷೀಣಿಸುತ್ತಿರುವುದನ್ನು ಕಾಣಬಹುದು.

ರಂಗಗೀತೆಗಳನ್ನು ಹಾಡುವ ಗಾಯಕರ ಸಂಖ್ಯೆ ಕಡಿಮೆಯಾಗಿದೆ. ಏಕೆಂದರೆ ಹಿಂದಿನ ಗಾಯಕ ನಟರಿಗೂ ಇಂದಿನ ಗಾಯಕನಟರಿಗೆ ಹೋಲಿಸಿದರೆ ಇಂದಿನ ಗಾಯಕರು ಹಳೆಯ ಹಾಡುಗಳನ್ನು ಹಾಡುತ್ತಿಲ್ಲ. ಇಂದಿನ ನಟಿಯರಿಗೆ ನಾಟಕದಲ್ಲಿ ಆಡುವ ಅವಕಾಶ ಕಡಿಮೆಯಾಗಿದೆ. ಹಾಗೆಯೇ ಇಂದಿನ ಮಾಸ್ತರರಿಗೂ ಬಿಡುವಿಲ್ಲ ಮತ್ತು ಗಾಯಕ ನಟಿಯರಿಗೂ ಕಲಿಯುವ ಆಸಕ್ತಿ ಇಲ್ಲದಂತಾಗಿದೆ. ಹೀಗಾಗಿ ಇಂದಿನ ಆಧುನಿಕ ಜಗತ್ತಿನಲ್ಲಿ ಬೇರೆ ಬೇರೆ ಮಾಧ್ಯಮದಲ್ಲಿ ಹಾಡುವ ಅವಕಾಶಸಿಗುತ್ತಿಲ್ಲ. ಇದೊಂದು ತಾರತಮ್ಯದ ವಿಷಯವಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಮೌಖಿಕವಾಗಿ ಹಾಡುವ ಗಾಯಕರ ಸಂಖ್ಯೆ ಕ್ಷೀಣಿಸುತ್ತಿದೆ. ಬಳ್ಳಾರಿ ಜಿಲ್ಲೆಯಲ್ಲಿ ಸುಭದ್ರಮ್ಮನವರನ್ನು ಕೆ.ನಾಗರತ್ನಮ್ಮನವರನ್ನು ಬಿಟ್ಟರೆ ಯಾವ ಗಾಯಕರಿಗೂ ಹಾಡುವ ಈ ಅಭಿರುಚಿ ಇಲ್ಲದಂತಾಗಿದೆ.

ಬರಹರೂಪದಲ್ಲಿ ಬರೆಯುವಂತಹ ರಂಗಕವಿಗಳು ಮಾತ್ರ ಇನ್ನೂ ಕ್ಷೀಣಿಸಿದ್ದಾರೆ. ಈ ಜಿಲ್ಲೆಯ ಬೆರಳೆಣಿಕೆಯಷ್ಟು ಜನ ಮಾತ್ರ ಬರೆಯುತ್ತಿದ್ದಾರೆ. ಆದರೆ ಇವರಿಗೆ ಬರೆಯುವ ಆಸಕ್ತಿ ಇದ್ದರೂ ಅವಕಾಶಗಳು ಸಿಗದೇ ಇರುವುದು ಮುಖ್ಯ ಸಮಸ್ಯೆಯಾಗಿದೆ.

ಒಟ್ಟಾರೆಯಾಗಿ ರಂಗಗೀತೆಗಳು ಆಧುನಿಕತೆಗೆ ಸಿಕ್ಕಿವೆ. ಸಿನಿಮಾ, ಟಿ.ವಿ, ಮೊಬೈಲ್ ಮಾಧ್ಯಮಗಳ ಕಡೆಗೆ ಪ್ರೇಕ್ಷಕರ ಒಲವು ಇರುವುದರಿಂದ ಇಂದು ರಂಗಗೀತೆಗಳನ್ನು ಹಾಡುವಂತಹ ಗಾಯಕ ನಟರು ಇಲ್ಲ. ಕೇಳುಗರಿಲ್ಲ, ಬರೆಯುವಂತಹ ರಂಗಕವಿಗಳು ಇಂದು ಕಣ್ಮರೆಯಾಗುತ್ತಿರುವುದನ್ನು ಕಾಣಬಹುದಾಗಿದೆ.

೬.೨. ಅಧ್ಯಯನದ ಹೊಸ ಸಾಧ್ಯತೆಗಳು

೧. ಎಷ್ಟೋಜನ ಹವ್ಯಾಸಿ ರಂಗಕಲಾವಿದರು ಅನೇಕ ಹಳ್ಳಿಗಳಲ್ಲಿ ಎಲೆಮರೆಕಾಯಿಯಂತೆ ಉಳಿದಿದ್ದಾರೆ. ಅಂತಹವರನ್ನು ಬಳಕೆಗೆ ತಂದು ಅವರ ಬಗ್ಗೆ ಒಬ್ಬೊಬ್ಬ ಕಲಾವಿದರ ಬಗ್ಗೆ ಪ್ರತ್ಯೇಕ ಅಧ್ಯಯನ ಮಾಡಬಹುದಾಗಿದೆ.

೨. ಜೋಳದರಾಶಿ ದೊಡ್ಡನಗೌಡರು ರಂಗಗೀತೆಗಳನ್ನು ಹಾಡುವ ಪ್ರಮುಖ ಗಾಯಕನಟರಲ್ಲಿ ಒಬ್ಬರಾಗಿದ್ದರು. ಅವರು ಹಾಡಿದ ರಂಗಗೀತೆಗಳನ್ನು ಹೊಸ ಅಧ್ಯಯನದ ಮೂಲಕ ಹೊರತರಬಹುದಾಗಿದೆ.

೩. ಸುಭದ್ರಮ್ಮ ಮನ್ಸೂರ ಅವರು ಹಾಡಿದ ರಂಗಗೀತೆಗಳನ್ನು ನಾಟಕ ಅಕಾಡೆಮಿಯವರು ಧ್ವನಿ ಸುರುಳಿ ತಂದಿದ್ದಾರೆ. ಅವರ ಮತ್ತು ಆ ಹಾಡುಗಳ ಬಗ್ಗೆ ಅಧ್ಯಯನ ಮಾಡಬಹುದಾಗಿದೆ.

೪. ಬಳ್ಳಾರಿ ಜಿಲ್ಲೆಯಲ್ಲಿ ಇನ್ನೂ ಅನೇಕ ನಾಟಕ ಮಂಡಳಿಗಳಿವೆ. ಅವುಗಳನ್ನು ಅಧ್ಯಯನದ ರೂಪದಲ್ಲಿ ಕಾರ್ಯ ಮಾಡಬಹುದಾಗಿದೆ.

೫. ಬಳ್ಳಾರಿ ಜಿಲ್ಲೆಯಲ್ಲಿ ಹಳೆ ತಲೆಮಾರಿನ ರಂಗಕವಿಗಳಿದ್ದಾರೆ. ಹೊಸತಲೆಮಾರಿನ ರಂಗಗೀತೆಗಳ ಕವಿಗಳಿದ್ದಾರೆ. ಅವರನ್ನು ಕುರಿತು ಅಧ್ಯಯನ ಕೈಗೊಳ್ಳಬಹುದಾಗಿದೆ.

೬. ಬಳ್ಳಾರಿ ಜಿಲ್ಲೆಯ ರಂಗಗೀತೆಗಳು ಸಾಕಷ್ಟಿವೆ. ಅವುಗಳನ್ನು ಸಂಗೀತ ಹಿನ್ನೆಲೆ ಉಳ್ಳವರು, ಸಂಗೀತಶಾಸ್ತ್ರದ ಹಿನ್ನೆಲೆಯಲ್ಲಿ ರಂಗಗೀತೆಗಳನ್ನು ಅಧ್ಯಯನ ಮಾಡುವ ಸಾಧ್ಯತೆಯಿದೆ.

೭. ಕನ್ನಡ ಸಂಸ್ಕೃತಿಯ ಬಹಳ ಮುಖ್ಯ ಭಾಗವಾಗಿರುವ ಈ ರಂಗಗೀತೆಗಳ ಬಗ್ಗೆ ಚರ್ಚೆ ಮಾಡುವುದು ಎಂದರೆ ಅದು ಕರ್ನಾಟಕ ಸಂಸ್ಕೃತಿಯ ನಿರ್ಲಕ್ಷಿತವಾದ ಅರೆ ಮೌಖಿಕ ಪರಂಪರೆಯ ಬಗ್ಗೆ ಚರ್ಚೆ ಮಾಡುವ ಕೆಲಸವೂ ಆಗಬೇಕಿದೆ.

೮. ಬಿಜಾಪುರ, ಮಂಡ್ಯ, ಬೆಳಗಾವಿ, ಗುಲಬರ್ಗಾ, ಜಿಲ್ಲೆಯ ರಂಗಗೀತೆಗಳನ್ನು, ಬಳ್ಳಾರಿ ಜಿಲ್ಲೆಯ ರಂಗಗೀತೆಗಳ ಜತೆಗಿಟ್ಟು ತೌಲನಿಕ ಅಧ್ಯಯನ ಮಾಡುವ ಸಾಧ್ಯತೆಯಿದೆ.

೯. ರಂಗಗೀತೆಗಳನ್ನು ಬರೆಯುವ ಅನೇಕ ರಂಗಕವಿಗಳು ಬಿಜಾಪುರ, ಗುಲಬರ್ಗಾ, ಬೆಳಗಾವಿ ಜಿಲ್ಲೆಯ ಕಡೆ ಇನ್ನೂ ಇದ್ದಾರೆ. ಆ ಕವಿಗಳು ಮತ್ತು ಬಳ್ಳಾರಿ ಜಿಲ್ಲೆಯ ರಂಗಕವಿಗಳು ಬರೆಯುವ ರಚನಾಕ್ರಮದ ಮೇಲೆ ಅಧ್ಯಯನ ಕೈಗೊಳ್ಳುವ ಸಾಧ್ಯತೆ ಇದೆ.

೬.೩. ರಂಗಗೀತೆಗಳ ಇತ್ತೀಚಿನ ಬೆಳವಣಿಗೆಗಳು

ಸುಮಾರು ೬೦ ವರ್ಷಗಳ ಹಿಂದೆ ರಂಗಗೀತೆಗಳು ಶುದ್ಧವಾದ ರಾಗಗಳಿಂದ ಕೂಡಿರುತ್ತಿದ್ದವು. ಸಂಗೀತ ಅದು, ಕರ್ನಾಟಕ ಸಂಗೀತವಾಗಿರಬಹುದು. ಹಿಂದುಸ್ತಾನಿ ಸಂಗೀತವಾಗಿರಬಹುದು. ಒಂದು ಯಮನ್‌ರಾಗ, ಆ ರಾಗಕ್ಕೆ ಅದೇ ಸಂಪೂರ್ಣವಾದ ರಾಗದೊಳಗೆ ಪ್ರಾರಂಭದಲ್ಲಿ ಮುಗಿಯುತ್ತಿತ್ತು. ಹೀಗೆ ರಂಗಗೀತೆಗಳ ಹಾಡುಗಳನ್ನು ಬರೆಯುತ್ತಿದ್ದರು. ರಂಗ ಕಲಾವಿದರಲ್ಲೂ ಸಹಿತ ಅನೇಕ ಜನ ತಮ್ಮ ತಮ್ಮ ಪಾತ್ರಗಳಿಗನುಗುಣವಾಗಿರುವಂತಹ ಹಾಡುಗಳನ್ನು ಬರೆಯುತ್ತಿದ್ದರು. ಇದರಿಂದಾಗಿ ನಿರ್ದೇಶಕರು, ನಟರು, ಕವಿಗಳು ಇವರೆಲ್ಲರ ಮುಖಾಂತರ ರಂಗಗೀತೆಗಳು ಪ್ರಚಲಿತವಾಗಿ ಬಂದಿವೆ ಎಂಬ ಬೆಳಗಲ್ ವೀರಣ್ಣನವರ ಈ ಕೆಳಗಿನ ಮಾತು ಉಲ್ಲೇಖನೀಯವಾದುದು.

ರಂಗಗೀತೆ ಎಂಬುದು ಬಹಳ ಪ್ರಮುಖವಾದುದು. ಪೌರಾಣಿಕ ಹವ್ಯಾಸಿ ರಂಗಭೂಮಿಯ ಹೊಸ ವಿಧಾನದ ನಾಟಕಗಳು ರಂಗಗೀತೆಗಳಿಗೆ ಹೆಚ್ಚು ಪ್ರಾಧಾನ್ಯತೆ ಕೊಡದೆ, ಭಾವಾಭಿನಯಕ್ಕೆ ಹೆಚ್ಚು ಒತ್ತುಕೊಟ್ಟಿದೆ. ನಿರ್ದೇಶನದ ಪ್ರಾಧಾನ್ಯತೆ ಹೆಚ್ಚು ನಾಟಕಗಳು ಚಾಲ್ತಿಯಲ್ಲಿ ಬಂದಾಗ ಅಲ್ಲಿ ಬಹುತೇಕವಾಗಿ ರಂಗಗೀತೆಗಳಿಗೆ ಕಡಿಮೆ ಅವಕಾಶಗಳಾದವು.

ಡಾ.ಎಚ್.ಕೆ.ರಾಮನಾಥ್‌ರವರು ತಮ್ಮ 'ಕನ್ನಡ ರಂಗಭೂಮಿಯ ವಿಕಾಸ' ಎಂಬ ಗ್ರಂಥದಲ್ಲಿ (ಪುಟ-೨೬೫-೨೬೬) ಈ ರೀತಿ ಹೇಳುತ್ತಾರೆ. "ಹಿಂದಿನ ರಂಗಗೀತೆಗಳು ಇಂದಿನ ನವ್ಯ ಸಂಗೀತದ ಮುಂದೆ

[illegible]

ತೀರ ಕಳಪೆ ಎನಿಸಿಕೊಂಡಿದೆ. ಹಿಂದಿನ ಕಾಲದ ರಂಗಭೂಮಿಯ ಅಭಿನಯ ವಿಧಾನ, ರಂಗಸಜ್ಜಿಕೆ, ವಸ್ತ್ರಾಲಂಕಾರ, ಪ್ರಸಾದನ, ಒರಟು ಹಾಸ್ಯ, ಇವೆಲ್ಲವೂ ಇಂದಿನ ಪ್ರೇಕ್ಷಕರಿಗೆ ಹಿಡಿಸದ ಮಾತಾಗಿದೆ. ಹಿಂದೆ ರಂಗಭೂಮಿಯು ತಮ್ಮದೇ ಆದ ಕಲಾಪ್ರಪಂಚದಲ್ಲಿದ್ದು ಕನ್ನಡ ನಾಡಿನ ಜನಕೋಟಿ ತೃಪ್ತಿ ಹೊಂದುವಂತೆ ರಂಗಗೀತೆಗಳಿಂದ ಮನರಂಜನೆಯನ್ನು ನೀಡುತ್ತಿದ್ದವು. ರಂಗಭೂಮಿ ನೀತಿ ಬೋಧಕ ವೇದಿಕೆಯೂ ಆಗಿದ್ದಿತು. ಆದರೆ ಈಗ ಪ್ರೇಕ್ಷಕರಲ್ಲಿ ಸಿನಿಮಾ ಪ್ರಭಾವದಿಂದ ಮನರಂಜನೆಯ ಬಗೆಗೆ ಹೊಸ ಕಲ್ಪನೆಗಳುಂಟಾಗಿರುವುದರಿಂದ ಅವರ ಅಭಿರುಚಿ ರಂಗಭೂಮಿಯ ಬಗೆಗೆ ಇಲ್ಲದೆ ಹೋಗಿದೆ. ಸಾವಿರಾರು ರಸಿಕರನ್ನು ತಣಿಸಿದ ರಂಗಭೂಮಿ, ಜನರ ಅಸಡ್ಡೆಯಿಂದ ಈಗ ಬರಡಾಗಿ ನಿಂತ ಒಣಮರವಾಗಿದೆ." ಎಂಬ ಮಾತು ಉಲ್ಲೇಖನಿಯ.

ಪೌರಾಣಿಕ ನಾಟಕಗಳು ಕಡಿಮೆಯಾಗಿವೆ. ಹಾಗೂ ಸಂಗೀತ ರಹಿತವಾಗಿವೆ. ನಾಟಕ ರಂಗಭೂಮಿಗಳಲ್ಲಿ ರಾಜಾಪಾರ್ಟು ಹಾಗೂ ರಾಣೀ ಪಾರ್ಟುಗಳ ವೈಭವ ಮಾಯವಾಗಿ ಸಾಮಾಜಿಕ ವಿಡಂಬನೆ, ರಾಜಕೀಯದ ಬಗೆಗೆ ಟೀಕೆ ಇವುಗಳಿಗೆ ಸಂಬಂಧಿಸಿದ ನಾಟಕಗಳೇ ಈಗ ನಾಟಕ ಮಂಡಳಿಗಳ ಮಾದರಿಗಳಾಗಿವೆ.

ಇಂದಿನ ರಂಗಭೂಮಿ ಪ್ರೇಕ್ಷಕರಿಗೆ ರಂಗಗೀತೆಗಳು ಬೇಡವಾಗಿ ಚಲನಚಿತ್ರ ಅವರಿಗೆ ಹೊಸ ಅಭಿರುಚಿಯನ್ನು ಕಲ್ಪಿಸಿಕೊಟ್ಟಿದೆ. ಕಥಾವಸ್ತು, ದೃಶ್ಯ ಪ್ರದರ್ಶನ, ಸಂಗೀತ, ಅಭಿನಯ, ನಟರು ಇವುಗಳ ಬಗ್ಗೆ ಜನರಲ್ಲಿ ಹೊಸ ಚಿಂತನೆಯುಂಟಾಗಿದೆ. ಓಬೀರಾಯನ ಕಾಲದ ಮನರಂಜನೆಯ ಮಾಧ್ಯಮ ಅನ್ನಿಸುವಷ್ಟರಮಟ್ಟಿಗೆ ರಂಗಭೂಮಿಯಲ್ಲಿನ ರಂಗಗೀತೆಗಳು ತಿರಸ್ಕೃತವಾಗಿವೆ. ಐವತ್ತು ವರ್ಷಗಳ ಹಿಂದೆ ಕಂಪನಿ ನಾಟಕಗಳಲ್ಲಿ ರಂಗಗೀತೆಗಳನ್ನು ಕೇಳಲು, ನಟನೆ ನೋಡಲು ಕಿಕ್ಕಿರಿದು ಹೋಗುತ್ತಿದ್ದರು ಕೆಲವೊಮ್ಮೆ ಟಿಕೀಟು ಸಿಗದೆ ಪ್ರೇಕ್ಷಕರು ನಿರಾಶರಾಗಿ ಹಿಂದಿರುಗುತ್ತಿದ್ದರು. ಈ ಅದೃಷ್ಟ ಇಂದು ಸಿನಿಮಾ ಮಂದಿರಗಳಿಗಿದೆ. ಇಂದು ರಂಗಗೀತೆಗಳು ತನ್ನ ಆಕರ್ಷಣೆಯನ್ನು ಕಳೆದುಕೊಂಡು ಜನರಿಗೆ ಬೇಡವಾದ ಕಲಾಕ್ಷೇತ್ರವಾಗಿದೆ.

"ಪೌರಾಣಿಕ ಹವ್ಯಾಸಿ ರಂಗಭೂಮಿಯ ರಂಗಗೀತೆಗಳ ಮಹತ್ವ ಉಳಿದಿಲ್ಲ, ಆ ಸಾಹಿತ್ಯ, ಹಾಡುಗಳನ್ನು ಕಲಿಯುವುದಕ್ಕೆ ಈಗಿನ ನಟಿಯರಿಗೆ ಪುರುಸೊತ್ತಿಲ್ಲ. ನಾಟಕ ಮಾಡುವವರಿಗೂ ಪುರುಸೊತ್ತಿರುವುದಿಲ್ಲ. ನಾಟಕದ ದಿವಸ ಹೋಗಿ ಮಾಸ್ತರಗಳು ಹಾಕಿದ ಹಾಡನ್ನೇ ಹಾಡುವರು, ಪರದೆ ಹಿಂದಿನ ಪಾತ್ರದಾರಿಗಳು ಹೇಳಿಬಿಡುವರು. ಇಂದು ಹಾಡುವ ತಾಳ್ಮೆ, ಪುರುಸೊತ್ತು ಯಾರಿಗೂ ಇಲ್ಲವಾಗಿದೆ. ಕಲಿಯುವವರಿಗೂ ಆಸಕ್ತಿ ಇಲ್ಲ, ಇಂದು ಕೇಳುವವರೂ ಇಲ್ಲವಾಗಿದ್ದಾರೆ ಎಂಬ ಶ್ರೀಮತಿ ಕೆ.ನಾಗರತ್ನಮ್ಮನವರ" ಮಾತು ಇಲ್ಲಿ ಉಲ್ಲೇಖನೀಯವಾದುದು.

ಒಟ್ಟಾರೆಯಾಗಿ ಬೆಳಗಲ್ ವೀರಣ್ಣನವರ ಮಾತಿನಲ್ಲಿ ಹೇಳುವುದಾದರೆ ಪೌರಾಣಿಕ ಹವ್ಯಾಸಿ ರಂಗಭೂಮಿಯಲ್ಲಿನ ರಂಗಗೀತೆಗಳು ಮತ್ತೆ ಪುನರಾವರ್ತನೆ ಇವತ್ತಿಲ್ಲ ನಾಳೆ ಹಾಗೇ ಆಗುತ್ತದೆ. ರಂಗಗೀತೆಗಳು ಬೇಕು. ರಂಗಗೀತೆಗಳನ್ನು ಪೌರಾಣಿಕ ನಾಟಕಗಳಲ್ಲಿ ಹಾಡಲೇಬೇಕು ಎಂಬ ಮನೋಧರ್ಮ

ಮತ್ತು ಆ ರಂಗ ಭೂಮಿ ಸಹಿತ ಮತ್ತೆ ಪುನರಾವರ್ತನೆಯಾಗುತ್ತದೆ. ಏಕೆಂದರೆ ಇವತ್ತು ಪೌರಾಣಿಕ ರಂಗಗೀತೆಗಳಿಗೆ ಬಹಳ ಜನ ಆಸಕ್ತಿ ಪಡುತ್ತಾರೆ. ವಿದ್ವಾಂಸರಾಗಲಿ, ಸಂಶೋಧಕರಾಗಲಿ, ಪ್ರೇಕ್ಷಕರಾಗಲಿ ರಂಗಗೀತೆಗಳನ್ನು ಕೇಳುತ್ತಾರೆ. ಇವತ್ತಿನ ಸ್ವಲ್ಪದಿನಗಳ ಹಿಂದೆ ರಂಗಗೀತೆಗಳು ಮಾಯವಾಗುತ್ತಿದ್ದವು ಮತ್ತೆ ಈಗ ಪ್ರಾಧಾನ್ಯತೆ ಬರುತ್ತಿದೆ. ಹೀಗೆ ಪುನಃರೂಪಿ ಚಕ್ರವಿದ್ದಂತೆ, ಯಾವುದೇ ಆ ವಸ್ತುವಿಗೆ ಅಳಿವಿಲ್ಲ, ಸ್ವಲ್ಪದಿನ ಮರೆಯಾಗಿ ನಂತರ ಮತ್ತೆ ಬರುತ್ತವೆ.

ರಂಗಗೀತೆಗಳಿಗೆ ಇದ್ದ ನಾಟಕಗಳು ಬಹಳ ಉತ್ತಮ ರೀತಿಯಲ್ಲಿ ಹಿಂದಕ್ಕೆಲ್ಲ ಬೆಳಗಿವೆ. ನಮ್ಮ ಬಳ್ಳಾರಿ ಜಿಲ್ಲೆಯ ಒಳ್ಳೊಳ್ಳೆ ರಂಗಭೂಮಿ ನಟರು, ನಟಿಯರು, ಕವಿಗಳು, ನಿರ್ದೇಶಕರು ಇವರೆಲ್ಲ ನಾಟಕ ರಂಗಭೂಮಿಯಲ್ಲಿ ಉತ್ತಮೋತ್ತಮ ಸೇವೆ ಸಲ್ಲಿಸಿದ್ದಾರೆ, ಮುಂದೆ ಸೇವೆ ಸಲ್ಲಿಸುತ್ತಾರೆ ಎಂಬ ದೃಢವಾದ ನಂಬಿಕೆ ಅವರಿಗಿದೆ.

ಒಟ್ಟಾರೆಯಾಗಿ ಯಾವುದೇ ರಂಗಭೂಮಿಯ ರಂಗಗೀತೆಗಳು ಪತನ, ಅಧಃಪತನವಿದ್ದೇ ಇರುತ್ತದೆ. ಆದರೆ ಅದು ಶಾಶ್ವತವಲ್ಲ. ಅದಕ್ಕೆ ಬಾಹ್ಯ ಮತ್ತು ಆಂತರಿಕ ಕಾರಣಗಳು ಇದ್ದೇ ಇರುತ್ತವೆ. ಇದು ಬಳ್ಳಾರಿ ಜಿಲ್ಲಾ ಪೌರಾಣಿಕ ಹವ್ಯಾಸಿ ರಂಗಭೂಮಿಗೆ ಸಂಬಂಧಿಸಿದ್ದಲ್ಲ, ಕರಾವಳಿ ಜಿಲ್ಲೆಯ ರಂಗಭೂಮಿಗೂ ಸಂಬಂಧಿಸಿದೆ. ಈ ಹಿನ್ನೆಲೆಯಲ್ಲಿ ಬಳ್ಳಾರಿ ಜಿಲ್ಲೆಯ ಪೌರಾಣಿಕ ಹವ್ಯಾಸಿ ರಂಗಭೂಮಿಯು ಕ್ಷೀಣಿಸಿದೆ. ಆದರೆ ಕೊನೆಯುಸಿರು ಎಳೆದಿಲ್ಲ. ಅದು ಮತ್ತೂ ಮೈತಳೆದು ಕಾಣಿಸಿಕೊಳ್ಳಬಹುದು. ಇದಕ್ಕೆ ಸಾಕ್ಷಿ ಹೊಸ ಕಾಲದ ನಟರು, ಪ್ರೇಕ್ಷಕರು, ರಂಗಗೀತೆಗಳ ಮೇಲೆ ಆಸಕ್ತಿ ಹುಟ್ಟುತ್ತಿರುವುದಾಗಿದೆ.

ಬಹುಶಃ ಯಾವುದೇ ಪರಂಪರೆಯನ್ನು ಕಳೆದುಕೊಳ್ಳಬೇಕಾದರೆ ಮತ್ತೆ ಪಡೆದುಕೊಳ್ಳಬೇಕೆಂಬುದು ನಮ್ಮ ಕರ್ನಾಟಕದ ಸಂಸ್ಕೃತಿಯ ಲಕ್ಷಣವಿರಬಹುದು. ಇದಕ್ಕೆ ಸಾಕ್ಷಿ ಇತ್ತೀಚೆಗೆ ಸಿಗುವ ಸಾಮಾಜಿಕ ಮನ್ನಣೆ ಒಂದು ಸಾಕ್ಷಿಯಾಗಿದೆ. ಜೀವಂತವಾದ ಸೃಜನಶೀಲವು ಯಾವುದೇ ಪಂಕ್ತಿಗೆ ಕಾಲದ ಒತ್ತಡದಿಂದ ಒಂದು ಹಿನ್ನಡೆ ಒದಗಬಹುದು. ಆದರೆ ಅದು ಮತ್ತೊಮ್ಮೆ ಬೇರೆ ರೂಪದಲ್ಲಿ ಮುಂಚೂಣಿಗೆ ಬಂದೇ ಬರುತ್ತದೆ. ಇದಕ್ಕೆ ರಂಗಗೀತೆಗಳು ಹೊರತಲ್ಲ.

ಅನುಬಂಧಗಳು

೧. ಗ್ರಂಥಋಣ

೨. ವಕ್ತೃಗಳು

೩. ಬಳ್ಳಾರಿ ಜಿಲ್ಲೆಯ ನಕ್ಷೆ

೪. ಛಾಯಾಚಿತ್ರ

ಗ್ರಂಥಋಣ

ಅ. ಮೂಲ ಕೃತಿಗಳು

೦೧. ಗುಡಿಹಳ್ಳಿ ನಾಗರಾಜ (ನಿರೂಪಣೆ), ಮರಿಯಮ್ಮನಹಳ್ಳಿ ರಂಗಸಿರಿ, ಕೆ.ನಾಗರತ್ನಮ್ಮನವರ ಆತ್ಮ ಚರಿತ್ರೆ, ಕನ್ನಡ ವಿ.ವಿ. ಹಂಪಿ, ೧೯೯೯

೦೨. ಗೋವಿಂದಗೌಡ ಹೆಚ್.ಎಸ್, ರಂಗಗೀತೆಗಳು (ಪೌರಾಣಿಕ), ಹನ್ಯಾಳು ಪ್ರಕಾಶನ, ಸರಸ್ವತೀಪುರಂ, ಮೈಸೂರು, ೧೯೭೮

೦೩. ಜೋಳದರಾಶಿ ದೊಡ್ಡನಗೌಡ, ನಾಟ್ಯ ಕಲಾಪೂರ್ಣ ಟಿ.ರಾಘವರು, ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿ, ಬೆಂಗಳೂರು, ೧೯೭೨

೦೪. ಜೋಳದರಾಶಿ ದೊಡ್ಡನಗೌಡ, ನಂದೇನಾನೋದಿದೆ, ರಾಮೇಶ ಪ್ರಕಾಶನ, ಜೋಳದರಾಶಿ, ೧೯೭೯

೦೫. ದಯಾನಂದ ಕಿನ್ನಾಳ. ಬಳ್ಳಾರಿ ಜಿಲ್ಲೆಯ ರಂಗಭೂಮಿ, ಪಿಹೆಚ್.ಡಿ, ಪ್ರಬಂಧ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ (ಅ.ಪ್ರ)

೦೬. ದುರ್ಗಾದಾಸ ಕೆ.ಆರ್, ಆರ್.ಬಿ.ಕುಮಾರ್ (ಸಂ), ಉರಿಯುಂಡ ಕರ್ಪೂರ, ಗಂಗೋತ್ರಿ ಪ್ರಕಾಶನ, ರಾಮಸಾಗರ, ೨೦೦೫

೦೭. ದೊಡ್ಡನಗೌಡ ಕೆ, ನಾಟ್ಯಯೋಗಿ ಬಳ್ಳಾರಿ ರಾಘವ, ಐ.ಬಿ.ಹೆಚ್. ಪ್ರಕಾಶನ, ಗಾಂಧಿನಗರ, ಬೆಂಗಳೂರು, ೧೯೭೫

೦೮. ಬಸವರಾಜ ಮಲಶೆಟ್ಟಿ, ಉತ್ತರ ಕರ್ನಾಟಕದ ರಂಗಗೀತೆಗಳು, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು, ೧೯೯೦

೦೯. ರಂಗನಾಥ್ ಹೆಚ್.ಕೆ, ಕರ್ನಾಟಕ ರಂಗಭೂಮಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೩

೧೦. ರವೀಂದ್ರನಾಥ ಕೆ, ಬಳ್ಳಾರಿ ಜಿಲ್ಲಾ ದರ್ಶನ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೫

೧೧. ಸಿರಿಗೇರಿ ಯರಿಸ್ವಾಮಿ, ರಂಗಲಹರಿ, ಅನ್ನಪೂರ್ಣ ಪ್ರಕಾಶನ, ಸಿರಿಗೇರಿ, ೨೦೦೬

೧೨. ಸುಜಾತ ಅಕ್ಕಿ, ಬಳ್ಳಾರಿ ಜಿಲ್ಲೆಯ ರಂಗನಟಿಯರ ಅಧ್ಯಯನ, ಪಿಎಚ್.ಡಿ ಪ್ರಬಂಧ (ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯ, ಹಂಪಿ

ಆ. ಪರಾಮರ್ಶನ ಗ್ರಂಥಗಳು

೦೧. ಎನ್ಕೆ, ಉತ್ತರ ಕರ್ನಾಟಕ ರಂಗಭೂಮಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೦೨. ಗಣೇಶ ಅಮೀನಗಡ, ಬಣ್ಣದ ಬದುಕಿನ ಚಿನ್ನದ ದಿನಗಳು, ಪ್ರಸಾದನ ಪ್ರಕಾಶನ, ಮಂಗಳೂರು, ೨೦೦೭

೦೩. ಗವೀಶ ಹಿರೇಮಠ, ರಂಗಕುಸುಮಗಳು, ಪ್ರಗತಿ ಪ್ರಕಾಶನ, ಕಲಬುರ್ಗಿ, ೧೯೯೪

೦೪. ಗವೀಶ ಹಿರೇಮಠ, ಹೊತ್ತು ಮುಳುಗುವ ಮುನ್ನ..., ಶಿವಗಂಗ ಪ್ರಕಾಶನ, ಬಿಜಾಪುರ, ೨೦೦೮

೦೫. ಗುಡಿಹಳ್ಳಿ ನಾಗರಾಜ, ಕಲಾಗ್ರಾಮ ಮರಿಯಮ್ಮನಹಳ್ಳಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೦೬. ಗುಡಿಹಳ್ಳಿ ನಾಗರಾಜ, ರಂಗನಾಟಕ ಪ್ರಯೋಗ-ಸಾರ್ಥಕತೆ, ಸಿ.ವಿ.ಜಿ, ಪಬ್ಲಿಕೇಶನ್ಸ್, ಬೆಂಗಳೂರು, ೨೦೦೦

೦೭. ಜಯಪ್ರಕಾಶ ಮಾವಿನಕುಳಿ, ರಂಗ ಪ್ರತಿಸ್ಪಂದನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೦೮. ದುರ್ಗಾದಾಸ ಕೆ.ಆರ್, ಬಳ್ಳಾರಿ ಜಿಲ್ಲೆಯ ಬಯಲಾಟಗಳು, ಸಮತಾ ಪ್ರಕಾಶನ, ಬೆಳಗಾವಿ, ೧೯೯೬

೦೯. ಪಾರ್ಶ್ವನಾಥ್ ಹೆಚ್.ಎ, ರಂಗಲೋಕ, ಸಂವಹನ, ಮೈಸೂರು, ೨೦೦೩

೧೦. ಪುಟ್ಟಸ್ವಾಮಯ್ಯ, ಕನ್ನಡ ರಂಗಭೂಮಿ ನಡೆದು ಬಂದ ದಾರಿ, ಐ.ಬಿ.ಹೆಚ್.ಪ್ರಕಾಶನ, ಬೆಂಗಳೂರು, ೧೯೭೬

೧೧. ಬಸವರಾಜ ಜಗಜಂಪಿ, ಗರುಡ ಸದಾಶಿವರಾಯರು ನಾಟಕ ಸಾಹಿತ್ಯ ಹಾಗೂ ವೃತ್ತಿರಂಗಭೂಮಿಯ ಅಧ್ಯಯನ, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ, ೧೯೯೩

೧೨. ಮರುಳ ಸಿದ್ಧಪ್ಪ ಕೆ, ಆಧುನಿಕ ಕನ್ನಡ ನಾಟಕಗಳು, ಲಿಪಿ ಪ್ರಕಾಶನ, ಬೆಂಗಳೂರು, ೧೯೯೩

೧೩. ಮೃತ್ಯುಂಜಯ ಹೊರಕೇರಿ, ರಂಗ-ವೃತ್ತಿ ರಂಗ, ರವಿಕೀರ್ತಿ ಪ್ರಕಾಶನ, ಬಾದಾಮಿ, ೨೦೦೦

೧೪. ಮೃತ್ಯುಂಜಯ ಹೊರಕೇರಿ, ನಲವಡಿ ಶ್ರೀಕಂಠಶಾಸ್ತ್ರಿಗಳ ಜೀವನ ಮತ್ತು ಕೃತಿಗಳು, ನಲವಡಿ ಶ್ರೀಕಂಠಶಾಸ್ತ್ರಿಗಳ ಸ್ಮಾರಕ ಪ್ರತಿಷ್ಠಾನ, ನಲವಡಿ, ೧೯೯೨

೧೫. ರಂಗನಾಥ್ ಹೆಚ್.ಕೆ, **ಕರ್ನಾಟಕ ವೃತ್ತಿ ರಂಗಭೂಮಿ,** ಸುರುಚಿ ಪ್ರಕಾಶನ, ಸರಸ್ವತಿಪುರಂ, ಮೈಸೂರು, ೧೯೭೮

೧೬. ರಾಮಕೃಷ್ಣ ಮರಾಠೆ, **ಉತ್ತರ ಕರ್ನಾಟಕ ರಂಗಭೂಮಿ,** ಇಳಾ ಪ್ರಕಾಶನ, ಬೆಂಗಳೂರು, ೧೯೯೪

೧೭. ವೀಣಾಕುಲಕರ್ಣಿ, **ಜುಬೇದಾಬಾಯಿ ಸವಣೂರ,** ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೯

೧೮. ವೈಕುಂಠ ರಾಜು ಬಿ.ವಿ, **ಕನ್ನಡ ರಂಗಭೂಮಿ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೧೯. ಶ್ರೀರಂಗ, ಪ್ರೇಕ್ಷಕವರ್ಗ, ನಮ್ಮ ರಂಗಭೂಮಿ ಸಮಸ್ಯೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೬೯

೨೦. ಸೀತಾರಾಮಯ್ಯ ಹ.ವೆಂ, **ಕರ್ನಾಟಕ ರಂಗಕಲಾವಿದರು,** ಕಲಾ ಸಾಹಿತ್ಯ ಪ್ರಕಾಶನ, ಬೆಂಗಳೂರು, ೧೯೮೩


೨೧. ಸುಜಾತ ಅಕ್ಕಿ, **ಬಳ್ಳಾರಿ ಜಿಲ್ಲೆಯ ರಂಗನಟಿಯರ ಅಧ್ಯಯನ,** ಪಿಎಚ್.ಡಿ ಪ್ರಬಂಧ (ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೨. ಸೂರ್ಯನಾರಾಯಣ ಸ್ವಾಮಿ ಎ.ವಿ, ಮತ್ತು ಗೋವಿಂದಗೌಡ ಹೆಚ್.ಎಸ್, (ಸಂ), **ಕನ್ನಡ ಕಾವ್ಯಗಳ ಗೆಜ್ಜೆನಾದ,** ಹನ್ಯಾಳ ಪ್ರಕಾಶನ, ಮೈಸೂರು, ೨೦೦೬

ವಕ್ತೃಗಳು

ಕ್ರ.ಸಂ	ಹೆಸರು	ವಯಸ್ಸು	ಜಾತಿ	ವೃತ್ತಿ	ಊರು	ದಿನಾಂಕ
೦೧.	ಡಾ.ಕೆ.ದುರ್ಗಾದಾಸ	೫೫	ದಲಿತ	ಪ್ರಾಧ್ಯಾಪಕರು	ಧಾರವಾಡ	೨೯.೦೬.೨೦೦೯
೦೨.	ಡಾ.ಜಾಜಿದೇವೇಂದ್ರಪ್ಪ	೩೫	ಲಿಂಗಾಯಿತ	ಉಪನ್ಯಾಸಕರು	ಯಲ್ಬುರ್ತಿ	೦೧.೦೭.೨೦೦೯
೦೩.	ಡಾ.ಬಸವರಾಜ ಮಲಶೆಟ್ಟಿ	೬೦	ಲಿಂಗಾಯಿತ	ವಿಶ್ರಾಂತ ಉಪನ್ಯಾಸಕರು	ಹೊಸಪೇಟೆ	೨೭.೦೮.೨೦೦೯
೦೪.	ಮ.ಬ.ಸೋಮಣ್ಣ	೫೮	ವಿಶ್ವಕರ್ಮ	ಶಿಕ್ಷಕರು	ಹೊಸಪೇಟೆ	೩೦.೦೮.೨೦೦೯
೦೫.	ಡಾ.ಆರ್.ಬಿ.ಕುಮಾರ್	೪೦	ವಿಶ್ವಕರ್ಮ	ಸಂಶೋಧಕರು	ರಾಮಸಾಗರ	೩೧.೦೮.೨೦೦೯
೦೬.	ಚೋರನೂರು ಕೊಟ್ರಪ್ಪ	೫೫	ಲಿಂಗಾಯಿತ	ನಿರ್ದೇಶಕರು ಕ.ಸಂ ಇಲಾಖೆ	ಬಳ್ಳಾರಿ	೦೧.೦೯.೨೦೦೯
೦೭.	ಶ್ರೀ ಯರಿಸ್ವಾಮಿ	೩೮	ಲಿಂಗಾಯಿತ	ವ್ಯವಸಾಯ	ಜೋಳದರಾಶಿ	೦೨.೦೯.೨೦೦೯
೦೮.	ರಾಮನಗೌಡ	೬೨	ಲಿಂಗಾಯಿತ	ವ್ಯವಸಾಯ	ಜೋಳದರಾಶಿ	೦೨.೦೯.೨೦೦೯
೦೯.	ಶ್ರೀಮತಿ ಸುಬಧ್ರಮ್ಮ ಮನ್ಸೂರ್	೬೦	ಲಿಂಗಾಯಿತ	ಕಲಾವಿದೆ	ಬಳ್ಳಾರಿ	೦೨.೦೯.೨೦೦೯
೧೦.	ಬೆಳಗಲ್ ವೀರಣ್ಣ	೬೦	ಕಿಳ್ಳೇಕ್ಯಾತರು	ಕಲಾವಿದ	ಬಳ್ಳಾರಿ	೦೩.೦೯.೨೦೦೯
೧೧.	ಡಿ.ಎಂ.ತೋಟಯ್ಯಸ್ವಾಮಿ	೭೨	ವೀರಶೈವ	ಕಲಾವಿದ	ದಣಾಯಕನಕೆರೆ	೦೪.೦೯.೨೦೦೯
೧೨.	ಕೆ.ನಾಗರತ್ನಮ್ಮ	೫೮	ವಾಲ್ಮೀಕಿ	ಕಲಾವಿದೆ	ಮರಿಯಮ್ಮನಹಳ್ಳಿ	೦೪.೦೯.೨೦೦೯

೩. ಬಳ್ಳಾರಿ ಜಿಲ್ಲೆಯ ನಕ್ಷೆ




ಬಳ್ಳಾರಿ ಜಿಲ್ಲೆಯ ನಕ್ಷೆ
ಸಿಂಧನೂರು
ಆದೋಣಿ
ಸಿರಗುಪ್ಪ
ಕೊಪ್ಪಳ
ಗದಗ
ಹೊಸಪೇಟೆ
ಬಳ್ಳಾರಿ
ಸಂಡೂರು
ಹಗರಿಬೊಮ್ಮನಹಳ್ಳಿ
ಹೂವಿನ ಹಡಗಲಿ
ಕೂಡ್ಲಿಗಿ
ಹರಪನಹಳ್ಳಿ
ಆಂಧ್ರಪ್ರದೇಶ
ಚಿತ್ರದುರ್ಗ
ದಾವಣಗೆರೆ



೪. ಛಾಯಾಚಿತ್ರ

ಪ್ರಮುಖ ರಂಗಕವಿಗಳು



ಆರ್. ಭರಮಲಿಂಗಪ್ಪ ಮಾಸ್ತರರು



.ಮ.ಬ. ಸೋಮಣ್ಣ



ಡಿ.ಎಂ. ತೋಟಯ್ಯಸ್ವಾಮಿ

ಮೌಖಿಕ ರೂಪದ ರಂಗಗೀತೆಗಳನ್ನು ಹಾಡುವ ಪ್ರಮುಖ ಗಾಯಕ–ನಟಿಯರು



ಶ್ರೀಮತಿ ಸುಭದ್ರಮ್ಮ ಮನ್ಸೂರುರವರ ಜೊತೆಯಲ್ಲಿ ಸಂಶೋಧಕರು



ಶ್ರೀಮತಿ ಕೆ. ನಾಗರತ್ನಮ್ಮನವರ ಜೊತೆಯಲ್ಲಿ ಸಂಶೋಧಕರು